ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ


ಸಚಿತ್ರ ಮಾಸಪತ್ರಿಕೆ

ಆಗಸ್ಟ್ 2020 ಬೆಲೆ ರೂ. 5/-



ಗೋವಿಂದಾಶ್ರಿತ ಗೋಕುಲಬೃಂದಾ
ಪಾವನ ಜಯ ಜಯ ಪರಮಾನಂದಾ

ಗೋಕುಲಾಷ್ಟಮಿ
12-08-2020



# ತಿರುಮಲೆ
## ಶ್ರೀ ವೆಂಕಟೇಶ್ವರ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವಗಳು
## 2020 ಸೆಪ್ಟೆಂಬರ್ 19 ರಿಂದ 27 ರ ವರೆಗೆ

**19-09-2020**
ಶನಿವಾರ
ಹಗಲು: ಧ್ವಜಾರೋಹಣ
ರಾತ್ರಿ: ದೊಡ್ಡಶೇಷವಾಹನ

**20-09-2020**
ಭಾನುವಾರ
ಹಗಲು: ಚಿಕ್ಕಶೇಷವಾಹನ
ರಾತ್ರಿ: ಹಂಸವಾಹನ

**21-09-2020**
ಸೋಮವಾರ
ಹಗಲು: ಸಿಂಹವಾಹನ
ರಾತ್ರಿ:
ಮುತ್ತಿನಚಪ್ಪರವಾಹನ

**22-09-2020**
ಮಂಗಳವಾರ
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**23-09-2020**
ಬುಧವಾರ
ಹಗಲು: ಪಲ್ಲಕ್ಕಿಯಲ್ಲಿ
ಮೋಹಿನೀಅವತಾರೋತ್ಸವ
ರಾತ್ರಿ: ಗರುಡವಾಹನ

**24-09-2020**
ಗುರುವಾರ
ಹಗಲು: ಹನುಮದ್ವಾಹನ
ರಾತ್ರಿ: ಗಜವಾಹನ

**25-09-2020**
ಶುಕ್ರವಾರ
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**26-09-2020**
ಶನಿವಾರ
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ

**27-09-2020**
ಭಾನುವಾರ
ಹಗಲು: ಚಕ್ರಸ್ನಾನ
ರಾತ್ರಿ: ಧ್ವಜಾವರೋಹಣ.

SIVAPRASAD



# ಭಗವದ್ಗೀತೆ

ತತಃ ಶಂಖಾಶ್ಚ ಭೇರ್ಯಶ್ಚ

ಪಣವಾನಕ ಗೋಮುಖಾಃ।

ಸಹಸ್ಯೈವಾಭ್ಯಹನ್ಮಂತ ಸ

ಶಬ್ದಸ್ತುಮುಲೋಽಭವತ್॥

(ಶ್ರೀ ಮದ್ಭಗವದ್ಗೀತೆ - 1, ಶ್ಲೋಕ -13)

ಆ ಮೇಲೆ ಒಮ್ಮೆಲೆ ಶಂಖಗಳು, ಭೇರಿಗಳು ಮೃದಂಗಗಳು, ನಗಾರಿಗಳು, ರಣಸಿಂಹಗಳೂ ಮೊಳಗಿದವು. ಆಗದ್ದಲವು ಎಲ್ಲೆಲ್ಲಿಯೂ ತುಂಬಿತು.



ಪಾಹಿ ಪಾಹಿ ಗಜಾನನ

ಪಾರ್ವತಿ ನಂದನ ಗಜಾನನ

ಮೂಷಕವಾಹನ ಗಜಾನನ

ಮೋದಕಹಸ್ತ ಗಜಾನನ

ಚಾಮರಕರ್ಣ ಗಜಾನನ

ವಿಲಂಬಿತ ಸೂತ್ರ ಗಜಾನನ


ವಾಮನರೂಪ ಗಜಾನನ

ಮಹೇಶ್ವರ ಪುತ್ರ ಗಜಾನನ

ವಿಘ್ನ ವಿನಾಯಕ ಗಜಾನನ

ತವ ಪಾದ ನಮಸ್ತೇ ಗಜಾನನ

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ವಿದ್ವತ್ಸೇವಾಕತಕನಿಕಷೈಃ ವೀತಪಂಕಾಶಯಾನಾಂ ಪದ್ಮಾಕಾಂತಃ ಪ್ರಣಯತಿ ದಯೇ ದರ್ಪಣಂ ತೇ ಸ್ವಶಾಸ್ತ್ರಮ್।**

**ಲೀಲಾದಕ್ಷಾಂ ತ್ವದನವಸರೇ ಲಾಲಯನ್ವಿಪ್ರಲಿಪ್ಸಾಂ ಮಾಯಾಶಾಸ್ತ್ರಾಣ್ಯಪಿ ಶಮಯಿ ತುಂ ತ್ವತ್ರಪನ್ನಪ್ರತೀಪಾನ್ ॥೪೭॥**

ಹಿಂದಿನ ಪದ್ಯದಲ್ಲಿ ಪರಮಕಾರುಣಿಕನಾದ ಶ್ರೀನಿವಾಸನು ಸಂಸಾರಸಮುದ್ರದಲ್ಲಿ ಮುಳುಗುವವರಿಗೆ ಹಸ್ತಾವಲಂಬನರೂಪವಾಗಿ ಶಾಸ್ತ್ರವನ್ನು ಕರುಣಿಸಿರುವನೆಂದು ಸಾಮಾನ್ಯವಾಗಿ ನಿರೂಪಿಸಲ್ಪಟ್ಟಿತು. ಈ ಪದ್ಯದಲ್ಲಿ ಪರಮಾರ್ಥ ನಿಶ್ಚಯಕ್ಕೆ ಕಾರಣವಾದ ಶಾಸ್ತ್ರವಿರುವಂತೆಯೇ ರಾಜಸ ತಾಮಸಾದಿಗುಣಗಳಿಂದ ಕೂಡಿದ ಜನರಿಗೆ ಮೋಹಕವಾಗುವಂತಹ ಮಾಯೆಯೇ ಮೊದಲಾದವನ್ನು ಪ್ರತಿಪಾದಿಸುವಂತಹ ಶಾಸ್ತ್ರಗಳೂ ತನ್ನ ಲೀಲೆಗಾಗಿಯೇ ಸೃಷ್ಟಿಸಲ್ಪಟ್ಟವೆಂದು ನಿರೂಪಿಸುತ್ತಾರೆ.

ಸದಾಚಾರ್ಯೋಪದೇಶಾದಿಗಳಿಂದ ಪರಮಾರ್ಥವನ್ನು ತಿಳಿದವರು ವಿದ್ವಾಂಸರು; ಅರಿತವರು. ಅಂಥವರ ಸೇವೆಯನ್ನು ಮಾಡಿದವರಿಗೆ ಯಾವ ವಿಧವಾದ ಸಂಶಯವೂ ಇಲ್ಲದೆ ಪರಮಾರ್ಥ ತತ್ವದ ಅರಿವುಂಟಾಗುವುದು. ಅಂಥವರಿಗೆ, ಎಲೈ ದಯೆಯೇ ನಿನ್ನ ಕನ್ನಡಿಯಂತಿರುವ ಪರಮಾರ್ಥ ಪ್ರತಿಪಾದಕವಾದ ಶಾಸ್ತ್ರವನ್ನು ಶ್ರೀನಿವಾಸನು ಕರುಣಿಸುತ್ತಾನೆ. ನಿನ್ನ ಸಂಪರ್ಕವಿರುವುದರಿಂದಜ ಸಾತ್ವಿಕರಿಗೆ ಸತ್ವಪ್ರಧಾನವಾದ ಶಾಸ್ತ್ರವನ್ನು ಕೊಡುವನು. ನಿನ್ನ ಸಂಪರ್ಕವಿಲ್ಲದಿರುವಾಗ, ಅಂದರೆ, ಪರಮಾತ್ಮನಿಗೆ ದಯೆಯು ಉಂಟಾಗದೆ ಇರುವಾಗ ರಾಜಸ ತಾಮಸಾದಿ ಗುಣಗಳಿಂದ ಕೂಡಿ , ನಿನ್ನಲ್ಲಿ ಪ್ರಪನ್ನರಾಗಿರುವ ಸಾತ್ವಿಕರಿಗೆ ವಿರೋಧಿಗಳಾದವರ ಮನಸ್ಸನ್ನು ತೃಪ್ತಿಪಡಿಸುವ ಉದ್ದೇಶದಿಂದ ಪರಮಾರ್ಥ ತತ್ವಕ್ಕೆ ವಿರುದ್ಧವಾದ ಅರ್ಥವನ್ನು ಕೊಡುವ ಮಾಯಾಶಾಸ್ತ್ರಗಳನ್ನು ಸೃಜಿಸುತ್ತಾನೆ. ಓರ್ವ ಪತಿಯು ತನ್ನ ಸಹ ಧರ್ಮಚಾರಿಣಿಯ ಸಂಪರ್ಕದಿಂದ ಸದ್ಧರ್ಮ ಪ್ರತಿಪಾದಕನಾಗಿಯೂ, ಪ್ರತಿಪಾಲಕನಾಗಿಯೂ ಇದ್ದು. ಅವಳ ಸಂಪರ್ಕವು ಸ್ವಲ್ಪ ಮರೆಯಾಗಿ ಮತ್ತೋರ್ವ ಪ್ರೇಯಸಿಯು ಸಮೀಪದಲ್ಲಿರುವಾಗ ವಿನೋದದಿಂದ ಕಾಲಕಳೆಯುವಂತೆ ಪರಮಪುರಷನಾದ ಶ್ರೀನಿವಾಸನೂ ದಯೆಯ ಸಂಪರ್ಕದಿಂದ ಸಚ್ಛಾಸ್ತ್ರಪ್ರದಾಯಕ ನಾಗಿಯೂ, ದಯೆಯ ಸಂಪರ್ಕವಿಲ್ಲದಿರುವಾಗ ವಿರೋಧೋಕ್ತಿಯನ್ನು ಪ್ರೀತಿಸಿ ತನ್ನ ಲೀಲೆಯನ್ನು ನಿರ್ವಹಿಸುತ್ತಾ ಕುದೃಷ್ಟಿಗಳನ್ನು ರಂಜಿಸುವನೆಂದು ಭಾವವು.

ಲೋಕದಲ್ಲಿ ಶಾಸ್ತ್ರಗಳು ಸಾತ್ವಿಕರಾಜಸಾದಿ ಭೇದಗಳಿಂದ ಅನೇಕ ವಿಧವಾಗಿರುತ್ತವೆ. ಅದರಿಂದಲೇ ಒಂದಕ್ಕೊಂದು ಪರಸ್ಪರ ವಿರೋಧಾರ್ಥ ಪ್ರತಿಪಾದಕಗಳಾಗಿವೆ. ಅವುಗಳಲ್ಲಿ ಪರಮಾತ್ಮನ ಅವ್ಯಾಜವಾದ ದಯೆಗೆ ಪಾತ್ರರಾದವರಿಗೆ ಮಾತ್ರ ಪರಮಾರ್ಥ ಪ್ರತಿಪಾದಕವಾದ ಶಾಸ್ತ್ರರೂಪವಾದ ಅವಲಂಬನವು ದೊರೆತು ಅವರು ಸದ್ಗತಿಯನ್ನು ಪಡೆಯುತ್ತಾರೆ. ಹಾಗೆಯೇ, ಸುಕೃತವು ಪರಿಪಕ್ವವಾಗಿದೆ ಸದಾಚಾರ್ಯೋಪದೇಶವು ಲಭಿಸದೆ ಪರಮಾತ್ಮನ ದಯೆಗೆ ಪಾತ್ರರಾಗದೆ ಇರುವವರಿಗೆ, ವಿದ್ವತ್ಸೇವೆಯನ್ನು ಮಾಡದೆ ಕಲುಷಿತವಾದ ಬುದ್ಧಿಯುಳ್ಳವರಿಗೆ - ಅದರಿಂದಲೇ ಪರಮಾತ್ಮನಲ್ಲಿ ಪ್ರಸನ್ನರಾದವರ ವಿರೋಧಿಗಳಾದವರಿಗೆ ಅವರ ಬುದ್ಧಿಯನ್ನು ಮೋಹಗೊಳಿಸಿ ತನ್ನ ಲೀಲೆಯನ್ನು ನಿರ್ವಹಿಸಲು ಸಹಕಾರಿಯಾಗುವ ಮಾಯಾಶಾಸ್ತ್ರಗಳನ್ನು ಸೃಜಿಸಿರುವನೆಂದು ಇಲ್ಲಿನ ಶಾಸ್ತ್ರಾರ್ಥ.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ




ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀ ಶಾರ್ವರಿನಾಮ ಸಂವತ್ಸರ ಶ್ರಾವಣ - ಭಾದ್ರಪದ ಮಾಸ ಸಂಚಿಕೆ

ಸಂಪುಟ - 51 ಆಗಸ್ಟ್ 2020 ಸಂಚಿಕೆ - 3


## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ಗೌರಿ ಸಂಭ್ರಮ | - ಶ್ರೀಮತಿ ಸುಮ ಚಂದ್ರಶೇಖರ್ | 7 |
| ಕೃಷ್ಣಂ ವಂದೇ ಜಗದ್ಗುರುಂ | - ಶ್ರೀಮತಿ. ಕೆ. ವಿ. ಪದ್ಮಾವತಿ | 11 |
| ರಂಗವಲ(ದ) ಜಗನ್ನಾಥದಾಸರು | - ಡಾ॥ ರಾಮಚಂದ್ರದಾಸ್ ಸಿ.ಜೆ. | 16 |
| ಭಕ್ತ ಪ್ರಹ್ಲಾದನ ಉಪದೇಶಗಳು | - ಡಿ.ಎಸ್. ಬದ್ರಿನಾಥ್ | 19 |
| ಅನ್ನಮಯ್ಯ ಜೀವನ ಚರಿತ್ರೆ | - ಶ್ರೀಮತಿ. ಬಿ. ಪದ್ಮಜ | 22 |
| ರಾಷ್ಟ್ರ ನಿರ್ಮಾಣ ಹರಿದಾಸರು | - ಡಾ॥ ವಾಸುದೇವ ಅಗ್ನಿಹೋತ್ರಿ | 31 |
| ರಾಯರೇ ನಮ್ಮ ಸಂಪತ್ತು | - ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 34 |
| ದಾಸಸಾಹಿತ್ಯದಲ್ಲಿ ಜೀವ ಪ್ರಭೇದ | | 39 |
| ಶ್ರೀ ಕೃಷ್ಣನ ವಿಶ್ವರೂಪ ದರ್ಶನ | - ಶ್ರೀಮತಿ. ಎ. ಗೀತಾ ವೀರರಾಘವನ್ | 41 |
| ಸಂಸ್ಕೃತ ಕಲಿಯೋಣ! | - ಡಾ॥ ಸಮುದ್ರಾಲ ಲಕ್ಷ್ಮಣಯ್ಯ & ಕಿರಣ್‌ಭಟ್ | 44 |
| ಋಷಿ ಪಂಚಮಿ ವ್ರತ | -ವೆಂಕಟರಾಘವನ್ ಎಸ್. | 46 |
| ಕರ್ತಾರರನುಗುಣವಾಗಿ ಕರ್ಮಗಳು | -ಡಿ.ಎಸ್.ಭೂಮಿಕ | 50 |
| ಔಷಧೀಯ ಗುಣಗಳ ಪವಿತ್ರ ವೃಕ್ಷ ಶಮಿ | - ಶ್ರೀಮತಿ | 52 |


ಮುಖಚಿತ್ರ - ನವನೀತ ಕೃಷ್ಣ, ತಿರುಮಲೆ
ಹಿಂಬದಿಚಿತ್ರ - ಶ್ರೀ ವಿಖನಸಾಚಾರ್ಯ


**ಗೌರವ ಸಂಪಾದಕರು**
ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಆಚಾರ್ಯ.ಕೆ.ರಾಜಗೋಪಾಲನ್,ಪಿ.ಹೆಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಹೆಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು ,ಎಮ್.ಎ.
ವಿಶೇಷಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ-ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಾಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಾಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಾಗ್ರಹಣ ತಿ.ತಿ.ದೇ.



ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ ವೀಕ್ಷಿಸಬಹುದು.


| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

# ಯಥಾ ಧರ್ಮ ತಥಾ ಜಯ

"ಯಾವಾಗ ಧರ್ಮಕ್ಕೆ ಚ್ಯುತಿ ಬರುತ್ತದೋ, ಅಧರ್ಮ ತಲೆದೋರಿ ತನ್ನ ಪ್ರಾಬಲ್ಯವನ್ನು ಸ್ಥಾಪಿಸಿಕೊಳ್ಳುತ್ತದ್ದೋ ಆಗ ಪ್ರತಿಯೊಂದು ಕಾಲದಲ್ಲೂ ನಾನು ಅವತಾರವೆತ್ತಿ ಬರುತ್ತೇನೆ"ಎಂದು ಶ್ರೀ ಕೃಷ್ಣ ಭಗವಂತನು ಗೀತೆಯಲ್ಲಿ ಸಾರಿ ಹೇಳಿದ್ದಾನೆ. - "ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ - ಅಭ್ಯುತ್ಥಾನ - ಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ" ಸಾಮಾಜಿಕವಾಗಿ ನಾವೆಲ್ಲರೂ ಧರ್ಮವನ್ನು ಅದರ ಅರ್ಥವನ್ನು ಬೇರೆ ಬೇರೆ ಪರಿಧಿಯಲ್ಲಿ ಬಳಸುತ್ತೇವೆಯಾದರೂ ಅದರ ನಿಜವಾದ ಅರ್ಥವೇ ಬೇರೆ, ಯಾವುದನ್ನು ಧರಿಸಲಾಗುವುದೋ ಅದೇ ಧರ್ಮ.ಆದರೆ ಅದನ್ನು ವ್ಯಕ್ತಿಯ ಸಾಮರ್ಥ್ಯಕ್ಕನುಗುಣವಾಗಿ, ಪರಿಸ್ಥಿತಿಕ್ಕನುಗುಣವಾಗಿ ಪ್ರಾಕೃತಿಕವಾಗಿ ಪ್ರವೃತ್ತಿಗನುಗುಣವಾಗಿ ಈ ಸಾಮಾಜಿಕ ವ್ಯವಸ್ಥೆಯಲ್ಲಿ ಭಾವನೆಗಳ ಸ್ಪಂದನೆಗಳಿಗಾಗಿ ಒಂದು ಅರ್ಥ ಸ್ವರೂಪವನ್ನು ಕೊಡಬಹುದಷ್ಟೆ ಆದರೂ ಅದು ಸತ್ಯಕ್ಕೆ ಮತ್ತಷ್ಟು ದೂರವೆಂದು ಸ್ಪಷ್ಟವಾಗಿ ಹೇಳಬಹುದು. ಭಗವಂತನ ಇತರ ಜೀವ ಸೃಷ್ಟಿಗಳಿಂದ ಮಾನವನನ್ನು ಪ್ರತ್ಯೇಕಿಸುವುದು ಆತನಲ್ಲಿ ಲೀನವಾಗಿರುವ ವಿವೇಚನಾ ಶಕ್ತಿ. ಅವನಲ್ಲಿ ಅಂತರ್ಯಾಮಿಯಾಗಿರುವ ಈ ವಿವೇಚನಾ ಶಕ್ತಿಯೇ ಆತನನ್ನು ಸುಸಂಸ್ಕೃತನನ್ನಾಗಿ ಮಾಡಿ, ಆತನನ್ನು ದೇವರ ಸನಿಹಕ್ಕೆ ಕರೆದೊಯ್ಯಬಲ್ಲದು. ಮನುಷ್ಯನ ಈ ವಿಚಾರವಂತಿಕೆಯೇ ಜನರ ಹಿತವೇ ತನ್ನ ಹಿತ ಜನರ ಏಳಿಗೆಯೇ ತನ್ನ ಏಳಿಗೆ ಎಂಬ ಅರಿವನ್ನು ಮೂಡಿಸಿ ಜನ ಸೇವೆಯಲ್ಲಿ ಜನಾರ್ಧನನನ್ನು ಕಾಣಬಯಸುವ ಮನೋಗತವನ್ನು ನೆಲೆಗಾಣಿಸುತ್ತದೆ. ಹಾಗಾಗಿ ಈ ವಿವೇಚನಾಶಕ್ತಿಯನ್ನು ವ್ಯಕ್ತಿ ತನ್ನ ಸಾಮರ್ಥ್ಯ - ಗ್ರಹಿಕೆಗಳಿಗನುಗುಣವಾಗಿ ತನ್ನೆಲ್ಲಾ ಸಹ ಜೀವಿಗಳೊಂದಿಗೆ ತನ್ನ ಮೂಲಕ ಬಿತ್ತರಿಸುತ್ತಿರುತ್ತಾನೆ. ಒಟ್ಟಿನಲ್ಲಿ ಹೇಳುವುದಾದರೆ ವಿವೇಚನಾಯುತ ವ್ಯಕ್ತಿ ತನ್ನ ಅರಿವನ್ನು ಇತರರಲ್ಲಿ ಅಭಿವ್ಯಕ್ತಿಸುವ ಪರಿವೆಯೇ ಧರ್ಮವೆನ್ನಬಹುದು. ಇತರರೊಡನೆ ತನ್ನ ವ್ಯವಹಾರವೇ ಆ ದೇಶಕ್ಕನುಗುಣವಾಗಿ ಧರ್ಮವೆನಿಸಿಕೊಳ್ಳುತ್ತದೆ. ಕಾಲ ದೇಶಕ್ಕನುಗುಣವಾಗಿ ಧರಿಸಬೇಕಾದದ್ದು ಇಲ್ಲವಾಗಿ, ದೊರಕಬೇಕಾದದ್ದು ಮಾಯವಾದಾಗ ಹಾಹಾಕಾರ ನಿರಂತರವಾಗುತ್ತದೆ. ಧರ್ಮದ ಕೊರತೆ ಅಧರ್ಮದ ಅಭ್ಯುದಯಕ್ಕೆ ಕಾರಣೀಭೂತವಾಗುತ್ತದೆ. ಅಂದರೆ ಮನುಷ್ಯ ತನ್ನ ಸಹಜ ಸಾಮಾಜಿಕ ಧರ್ಮದಿಂದ ವಿಚಲಿತನಾಗಿದ್ದಾನೆಂದೇ ಇದರ ಅರ್ಥ ಮತ್ತೆ ಮನುಷ್ಯನನ್ನು ಹಾದಿಗೆ ತರಲು, ಹಾಹಾಕಾರಕ್ಕೆ ಹರಿಕಾರ ಹಾಡಲು ಒಂದು ಮಹಾಚೇತನದ ಅವಶ್ಯಕತೆ ಬಂದೊದಗುತ್ತದೆ. ಈ ಮಹತ್ಕಾರ್ಯವನ್ನು ಎಸಗಲೆಂದೇ ಕಾಲಕಾಲಕ್ಕೆ ಭಗವಂತನು ಅವತಾರವೆಂಬ ಶಬ್ದದಿಂದ ಭೂಮಿಗೆ ಬರುತ್ತಲೇ ಇದ್ದಾನೆ. ಶ್ರಾವಣ ಮಾಸದಲ್ಲಿ ವರಹಾವತಾರ, ವಾಮನವತಾರ, ಶ್ರೀ ಕೃಷ್ಣ ಬಲರಾಮಾವತಾರಗಳು ವಿಶೇಷವಾಗಿ ಲೋಕೋದ್ಧರಣಕ್ಕಾಗಿಯೇ ಸನ್ನಿಹಿತಗೊಂಡಿವೆ.ಭೂಭಾರ ಹರಣದೊಂದಿಗೆ ದುಷ್ಟ ಶಿಕ್ಷಣೆ ಶಿಷ್ಟ ರಕ್ಷಣೆ ಲೋಕೋದ್ಧಾರವೇ ಈ ಅವತಾರಗಳ ಮುಖ್ಯ ಉದ್ದೇಶ. ಜಲಪ್ರವಾಹದಲ್ಲಾದುದೇ ವರಹಾವತಾರ, ಭೂಮಿಯ ಪ್ರಮಾಣ ನೀರಿಗಿಂತಲೂ ಹೆಚ್ಚು. ಆದರೂ ನೀರಿನ ಪ್ರಮಾಣ ಹೆಚ್ಚುವರಿಗೊಂಡು ಭೂಮಿಯನ್ನು ನೀರಿನಲ್ಲಿ ಮುಳುಗಿಸಿದಾಗ ತನ್ನ ಸಂಕಲ್ಪವೇ ಪ್ರಧಾನವೆಂದೂ ತೋರಿಸಲು ಭೂಮಿಯನ್ನೇ ನೀರಿನಿಂದ ಮೇಲೆತ್ತಿದ ವರಹಾವತಾರ. ಮತ್ತೊಮ್ಮೆ ಅಧರ್ಮದ ಮೇಲೆ ಧರ್ಮದ ಗೆಲುವು.

ಇನ್ನು ವಾಮನಾವತಾರ ಪ್ರಜ್ಞಾಜನೀತವಾದ ಜಾಗೃತಿಯನ್ನುಂಟು ಮಾಡಿದ ಮಹದಾವತಾರ. ಓಡಿಸಿದ ಶತ್ರುವಿಗಿಂತ ಓಡಿಸಿದ ವಿಧವೇ ಮಹತ್ವವುಳ್ಳದ್ದು. ಹೊರಗಿನ ವೈರಿಗಳ ಸಂಹಾರವಾದರೆ ಈ ಅವತಾರದಲ್ಲಿ ವ್ಯಕ್ತಿಯೊಳಗಣ ವೈರಿಯ ನಾಶವೇ ಇದರ ಪರಮೋದ್ದೇಶ. ದಾನದಹಂಕಾರದಿಂದ ಮದಗೊಂಡ ಬಲಿಯ ಶಿರಸ್ಸನ್ನು ಪಾತಾಳಕ್ಕೆತ್ತಿ ಮದವೇರಿದವರ ಗತಿ ಪಾತಾಳವೇ ಎಂದು ತೋರಿಕೊಟ್ಟ ವಿಶೇಷಾವತಾರ. ಅಷ್ಟೇ ಅಲ್ಲದೇ ತಲೆ ತಗ್ಗಿಸಿಕೊಂಡು ಮುಕ್ತಿಯನ್ನು ಸಹಾ ಪಡೆಯಬಹುದೆಂದು ಸಾರಿದ ಅವತಾರವಿದು.ಯಾವುದೇ ವ್ಯಕ್ತಿ ಕಾಲಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿದ್ದರೂ ಬಯಸುವುದು ಒಂದು ಪ್ರಶಾಂತ ಬದುಕೊಂದನ್ನೇ ಅದಕ್ಕಾಗಿಯೇ ತನ್ನೊಳಗಿನ ಎಲ್ಲಾ ಶಕ್ತಿ - ಸಾಮರ್ಥ್ಯಗಳನ್ನು ಬದಿಗೊತ್ತಿ ಶಾಂತಿಯುತವಾದ ಬದುಕನ್ನು ನಡೆಸುತ್ತಾನೆ. ಆದರೇ ಅದೇ ಶಕ್ತಿ ಆತನನ್ನು ಕೆಣಕಿದರೆ ಇಡೀ ಮನುಕುಲವೇ ನಡುಗಿಸಬಲ್ಲದೆಂಬ ತತ್ವವನ್ನು ಬಲರಾಮಾವಾತಾರದಿಂದ ತೋರಿಸಲ್ಪಟ್ಟರೆ ಅಷ್ಟೇ ಅಲ್ಲದೇ ದ್ವಾಪರಾಂತ್ಯದಿಂದ ಕಲಿಯುಗದಾರಂಭಿಕದಲ್ಲಿ ಜರಗುವ ಎಲ್ಲಾ ದುಷ್ಟ ಶಿಕ್ಷಣ ಶ್ರೀ ಕೃಷ್ಣಾವತಾರದ್ದೇ ಎಂದರೆ ತಪ್ಪಾಗಲಾರದು.

ಯಾವಾಗ ಸಾಮಾಜಿಕ ಧರ್ಮವನ್ನು ಅಧರ್ಮ ಅತ್ರಿಕ್ರಮಿಸುವುದೋ ಆಗ ಧರ್ಮದ ಪಾಲನೆಯ ನಕಾಶೆ ಆರಂಭಗೊಳ್ಳುತ್ತದೆ.ಅಮಾನವೀಯ ಹಿಂಸಾ ಪಾತಕಗಳು ಕೃತಯುಗ ಪರ್ಯಂತ್ಯ ಕಾಣಸಿಗುವುದಿಲ್ಲ.ಆದರೆ ದ್ವಾಪರಾಂತ್ಯಕ್ಕೆ ಹಿರಣ್ಯಕಶಿಪು-ಕಂಸರಂತಹ ಪಾತಕಿಗಳ ಬಿಗುವಿನಲ್ಲಿ ಪಾತಕಗಳು ವಿಜೃಂಭಿಸಿ ಸಾಮಾಜಿಕ ಧೋರಣೆಗೆ ಕಾರಣವಾಗುತ್ತವೆ.ಅವುಗಳ ಅಂತ್ಯಕ್ಕಾಗಿಯೇ ಅವಿರ್ಭವಿಸಿದ್ದು ಶ್ರೀ ಕೃಷ್ಣಾವತಾರ,ಅಷ್ಟಾದರೂ ನಮ್ಮದು ಮಾಯೆಯುಕ್ತ ಬದುಕು. ನಾವೆಲ್ಲರೂ ಮಾಯಾಪಾಶದಲ್ಲಿ ಸಿಲುಕಿರುವವರು. ಅದಕ್ಕೆ ಅವತಾರಸಾರವನ್ನು ಅರ್ಥೈಸಿಕೊಳ್ಳುವುದರಲ್ಲಿ ಸೋಲುತ್ತಿದ್ದೇವೆ. ಅಸಲಿಗೆ ಅದರೆ ಅರ್ಥವು ನಮಗೆ ಆಗುವುದೂ ಇಲ್ಲ ಎಂದು ಭಗವಂತನೇ ನುಡಿದು ಬಿಟ್ಟಿದ್ದಾನೆ.

# ಗೌರಿ ಸಂಭ್ರಮ



- ಶ್ರೀಮತಿ. ಸುಮ ಚಂದ್ರಶೇಖರ್

9880060354

ಎಲ್ಲರೂ ಒಟ್ಟಾಗಿ, ಒಂದಾಗಿ, ಮನ ಮನಸ್ಸಿನ ಬೇದ-ಪ್ರಬೇಧಗಳನ್ನು, ವಿರೋದಾಭಾಸಗಳನ್ನು ಅಸಹಿಷ್ಣುತಾ ಮನೋಭಾವನೆಗಳನ್ನು ಹೊರತುಪಡಿಸಿದಾಗ ಮಾತ್ರವೇ ಮಾಡುವ ವ್ರತ, ಪೂಜೆಯಲ್ಲಿ ಸಾರ್ಥಕತೆ ಕಂಡು ಬರುತ್ತದೆ. ಗೌರಿಪೂಜೆಯೊಳಗೆ ಅಂತಹದ್ದೊಂದು ತಾದಾತ್ಮ್ಯತೆವಿದೆ.

ಗೌರಿ ನೆಲ ಮುಗಿಲು ಬೆಸೆಯುವ ದೇವಿ. ಇವಳು ನಮ್ಮ ಮಣ್ಣಿನ ಮಗಳು, ಭೂಮಿಯ ಮಗಳು. ಆದ್ದರಿಂದಲೇ ಹತ್ತು ಹಲವು ಬಗೆಗಳಲ್ಲಿ ಗೌರಿ ನೆಮ್ಮೆಲ್ಲರ ಅಕ್ಕ, ಹೆಣ್ಣುಮಕ್ಕಳ ಪಾಲಿಗೆ ವಿಶೇಷ ಆದರ್ಶ ಇವಳು. ದಾಂಪತ್ಯ, ವಾತ್ಸಲ್ಯ, ಲಾವಣ್ಯಗಳು ಮಾತ್ರವಲ್ಲದೆ, ಗಟ್ಟಿತನ, ಗರ್ವ, ಆತ್ಮಸಮ್ಮಾನಗಳಿಗೂ ಗೌರಿ ನಮಗೆ ಮಾದರಿಯಾಗುತ್ತಾಳೆ. ಇವಳು ತ್ರಿಪುರ ಸುಂದರಿ. ಅಷ್ಟೇ ಶಕ್ತಿಶಾಲಿ ಕೂಡ. ಲೀಲೆಯಲ್ಲಿ, ಪಾರಮ್ಯದಲ್ಲಿ, ಭಕ್ತರ ಹೊಂದುವಿಕೆಯಲ್ಲಿ, ಜನಪ್ರಿಯತೆಯಲ್ಲೂ ಪತಿರಾಯ ಶಿವನಿಗೆ ಸರಿಸಮವಾಗಿ ನಿಲ್ಲುವ ಗೌರಿ, ಅರ್ಧನಾರೀಶ್ವರಿಯಾಗಿಯೂ ವೈಯುಕ್ತಿಕ ಗುರುತುಳ್ಳ ಆದರ್ಶ ಸ್ತ್ರೀ. ಇವಳು ಆಶ್ರಯ ಕೋರಿ ಬಂದವರಿಗಾಗಿ, ತನ್ನ ನಿರ್ಧಾರಗಳಿಗಾಗಿ ಶಿವನಿಗೆ ಮುಖಾಮುಖಿಯಾಗುತ್ತಲೇ ಸಾಂಗತ್ಯವನ್ನು ಉಳಿಸಿಕೊಳ್ಳುತ್ತಾಳೆ. ಎಷ್ಟರಮಟ್ಟಿಗೆ ಎಂದರೆ, ಒಂದು ಹಂತದಲ್ಲಿ ಈಕೆ ತನ್ನ ಭಕ್ತೆಯ ಗಂಡನನ್ನು ಉಳಿಸಲಿಕ್ಕಾಗಿ ಶಿವನೊಡನೆ ಯುದ್ಧಕ್ಕೂ ನಿಲ್ಲುತ್ತಾಳೆ! ಯುದ್ಧದಲ್ಲಿ ಗೆದ್ದು, ಅನಂತರ ಪ್ರೀತಿಯಿಂದಲೂ ಶಿವನನ್ನು ಗೆದ್ದುಕೊಳ್ಳುತ್ತಾಳೆ.

ಗೌರಿದೇವಿಯ ಕುರಿತ ಪೌರಾಣಿಕ ಕತೆಗಳಿಗೆ ಸಂವಾದಿಯಾಗಿ ಜಾನಪದ ಕಥೆಗಳು ಸಾಕಷ್ಟಿವೆ. ವಾಸ್ತವದಲ್ಲಿ ಈ ಕಥೇಗಳೇ ಹೆಚ್ಚು ಆಪ್ತವೂ ಜನಪ್ರಿಯವೂ ಆಗಿವೆ. ಅವುಗಳಲ್ಲೆಲ್ಲ ನಮಗೆ ಹಲವು ಮುಖಗಳ, ಹಲವು ಸಾಧ್ಯತೆಗಳ ಗೌರಿ ಕಾಣಸಿಗುತ್ತಾಳೆ.ಆ ಎಲ್ಲ ಮುಖಗಳೂ ನಮ್ಮ, ಅದರಲ್ಲೂ ಭಾರತೀಯ ಹೆಣ್ಣು ಮಕ್ಕಳ ಅಂತರಂಗಕ್ಕೆ ಕನ್ನಡಿಯಂತಿವೆ. ಹೆಣ್ಣಿನ ನಿಜವಾದ ಶಕ್ತಿಗಳೇನು ಎನ್ನುವುದು ಗೌರಿಯ ವ್ಯಕ್ತಿತ್ವದಲ್ಲಿ ಅನಾವರಣಗೊಳ್ಳುತ್ತವೆ.

**ಲೋಕದ ತಾಯಿ**

ಗೌರಿ ಸಂಸಾರ ಅತ್ಯಂತ ವಿಲಕ್ಷಣವಾದುದು. ಇವರ ಕುಟುಂಬದಲ್ಲಿ ಗಂಡ ಹೆಂಡತಿ ಸೇರಿ ಕುಣಿಯುತ್ತಾರೆ. ಮಕ್ಕಳೂ ಸೇರಿದಂತೆ ಒಬ್ಬೊಬ್ಬರು ಒಂದೊಂದು ಕಡೆ ರಾಕ್ಷಸರನ್ನು ಕೊಲ್ಲಲಿಕ್ಕೋ ಯಾರದೋ ಸಹಾಯಕ್ಕೋ ಯುದ್ಧ ಹೂಡಿ ಹೊರಡುತ್ತಾರೆ. ಇವರೆಲ್ಲರ ವಾಹನಗಳು ನಂದಿ, ಸಿಂಹ, ಹಾವು, ನವಿಲು, ಇಲಿ, ಹೀಗೆ, ಪರಸ್ಪರ ಶತ್ರುಗಳು. ಆದರೂ



ಅಲ್ಲಿ ಸೌಹಾರ್ದವಿದೆ.ಕುಟುಂಬದ ಇಂಥದ ಸೌಹಾರ್ದ ತಾಯಿಯಿಂದ ಮಾತ್ರ ಸಾಧ್ಯವಾಗುವಂಥದ್ದು. ತಂದೆ-ಮಕ್ಕಳ ನಡುವೆ, ಇಬ್ಬರು ಮಕ್ಕಳ ನಡುವೆ ಸಂಬಂಧ ಗಟ್ಟಿಗೊಳಿಸುವ, ಅದನ್ನು ಕಾಯ್ದುಕೊಳ್ಳುವಲ್ಲಿ ಗೌರಿಯ ಎಚ್ಚರ ಅದ್ಭುತವಾದುದು. ಇದನ್ನು ಸಾರುವಂತಹ ಜನಪದ ಕಥೆಯೊಂದಿದೆ. ಅದರಲ್ಲಿ ಗಣಪನು ಶಿವನಿಗೆ ತಮಗಿಂತ ಕುಮಾರನ ಮೇಲೆ ಪ್ರೀತಿ ಜಾಸ್ತಿ ಯೆಂದು ಅಮ್ಮ ಬಳಿ ದೂರುತ್ತಾನೆ. ಅದನ್ನು ಅಲ್ಲಗೆಳೆಯುತ್ತಾ, ಕುಮಾರ ದೇವತೆಗಳ ಸೇನಾಧಿಪತಿ ಮಾತ್ರ, ನೀನಾದರೋ ನಿನ್ನಪ್ಪನ ಗಣಗಳಿಗೆಲ್ಲ ಅಧಿಪತಿ. ಆ ಪಟ್ಟ ಕೊಟ್ಟವನು ಶಿವನೇ ಎಂದು ಸಮಾಧಾನ ಹೇಳುತ್ತಾಳೆ. ಅದರಿಂದ ಗಣಪನಿಗೆ ಸಮಾಧಾನವಾಗುವುದಿಲ್ಲ. ಕೊನೆಗೆ ಗೌರಿಯು ಶಿವನ ಬಳಿ ಹೋಗಿ,ಅವನನ್ನು ಓಲೈಸಿ, ತಲೆ ಮೇಲಿನ ಚಂದ್ರನ ಮತ್ತೊಂದು ಸಂದರ್ಭದಲ್ಲಿ ಗೌರಿ ತನ್ನ ಮಗನಿಗೆ ಪಾಠ ಕಲಿಸುವ ಬಗೆಯೂ ಅದ್ಭುತವಾಗಿದೆ. ಯಾವುದೇ ಕಳಕಳಿಯುಳ್ಳ ತಾಯಿ ತನ್ನ ಮಗುವನ್ನು ಸರಿ ದಾರಿಗೆ ತರಲು ಅನು ಸರಿಸುವ ಮಾರ್ಗವನ್ನೇ ಅವಳೂ ಆಯ್ದುಕೊಳ್ಳುತ್ತಾಳೆ ಅಥವಾ ಆದಿಶಕ್ತಿಯಾದ ಅವಳ ಗುಣದ ಬೀಜಗಳೂ ನಮ್ಮ ತಾಯಂದಿರಲ್ಲಿ ಮೊಳೆತು ಅಂತಹ ಸ್ಮರಣೆ ಯನ್ನು ಚಿಗುರಿಸಿವೆ.ಒಮ್ಮೆ ಹೀಗಾಗುತ್ತದೆ. ಪುಟ್ಟ ಗಣಪ, ಆಟಕ್ಕಾಗಿ ಬೆಕ್ಕೊಂದನ್ನು ಹಿಡಿದು ಹಿಂಸಿಸುತ್ತ ಇರು ತ್ತಾನೆ. ಹಾಗೆಲ್ಲ ಮಾಡಬಾರದೆಂದು ಹೇಳುವ ಗೌರಿಗೆ, ಅದು ತನ್ನ ಇಲಿಯನ್ನು ತಿನ್ನಲು ಬಂದಿತ್ತೆಂದು ಸಮಾ ಜಾಯಿಷಿ ಕೊಡುತ್ತಾನೆ. ಆ ಕ್ಷಣಕ್ಕೆ ಗೌರಿ ಸಮ್ಮನಾಗು ತ್ತಾಳೆ. ಗಣಪನ ಹೊಡೆಯುವ ಆಟ ಮುಗಿದು, ಹಸಿವಾಗಿ ಅಮ್ಮನ ಬಳಿ ಬಂದರೆ, ಅವಳ ಮೈಮೇಲೆಲ್ಲ ಕೆಂಪು ಬರೆಯ ಗೆರೆ!

ಏನಾಯ್ತೆಂದು ಕೇಳಲು, 'ಜಗತ್ತಿನ ಯಾವ ಜೀವಿಯನ್ನು ಹಿಂಸೆ ಮಾಡಿದರೂ ಅದು ನನಗೆ ತಲುಪುತ್ತದೆ. ನೀನು ಬೆಕ್ಕಿಗೆ ಹೊಡೆದಿದ್ದರಿಂದ ನನಗೆ ಹೊಡೆದಂತಾಗಿ ಬರೆ ಬಿದ್ದಿದೆ ' ಅನ್ನು ತ್ತಾಳೆ ಗೌರಿ. ಮಗನಿಗೆ ಪಾಠ ಕಲಿಸುವುದಕ್ಕಾಗಿ ತನಗೆ ತಾನೇ ಬರೆ ಮೂಡಿಸಿಕೊಂಡಿರುತ್ತಾಳೆ ಆ ತಾಯಿ.

### ಅಪ್ಪಟ ಹೆಣ್ಣು

'ಗೌರಿ ಎಂದ ಕೂಡಲೆ ನಮ್ಮ ಕಣ್ಮುಂದೆ ಬರುವುದು ಮುಗುಳ್ನಗೆಯಿಂದ ಶಾಂತ ಸುಂದರ ಸುಖ. 'ಗೌರಿ' (ಗೌರ ಅಂದರೆ ಬಳಿ) ಎಂಬ ಹೆಸರು ಅನ್ವರ್ಥವಾಗುವಂಥ ಹಾಲ್ ಬಿಳಿಯ ಬಣ್ಣ. ಲಜ್ಜೆ, ಲಾವಣ್ಯ, ತಾಯ್ತನ ಸತೀರೂಪ ಇತ್ಯಾದಿ ಗಳು. ಆದರೆ ಗೌರಿ ಇಷ್ಟು ಮಾತ್ರ ಅಲ್ಲ. ಸಮಯ ಬಂದಾಗ ತನ್ನನ್ನು ತಾನು ರಕ್ಷಿಸಿಕೊಳ್ಳಲು ಚತುರೆ, ತೋಳ್ಬಲವುಳ್ಳ ಬಸಲೆ ಕೂಡ.ಹಾಗೆಂದೇ ಗೌರಿ ಕಾಳಿಯೂ ಆಗಿ ಅಭಿವ್ಯಕ್ತಗೊಂಡಿ ದ್ದಾಳೆ.ಇವಳು ಸೌಮ್ಯ ಭಾವದವಳೆಂದು ಕೆಣಕುವಂತಿಲ್ಲ. ಕೋಪ ಬಂದರೆ ಗಂಡನಾದ ಶಿವನನ್ನೂ ಸುಮ್ಮನೆ ಬಿಡದಂಥ ಹೆಣ್ಣೀಕೆ. ಮುನಿದು ಜಗಳವಾಡುವ ನಮ್ಮ ಯಾವ ಹೆಣ್ಣಿಗೂ ಕಡಿಮೆ ಇಲ್ಲದಂತಿರುವ ಗೌರಿಯನ್ನು ಜನಪದ ಸಾಹಿತ್ಯದಲ್ಲಿ ನೋಡಬಹುದು.

ಪುರಾಣಗಳ ಗೌರಿ ಕೂಡ ಆಗಾಗ 'ಮುನಿದು' ಭೂಮಿಗೆ ಬರುವುದನ್ನೋ ಗಂಡನೊಟ್ಟಿಗೆ ಮಾತು ಬಿಡುವುದನ್ನೋ ಮಾಡುತ್ತಾಳೆ. ಗೌರಿಯ ಚಾತುರ್ಯಕ್ಕೆ ಇಲ್ಲೊಂದು ಕಥೆಯಿದೆ.



ರಾವಣ, ಆತ್ಮಲಿಂಗ ಬೇಡಿ ಶಿವನನ್ನು ಕುರಿತು ತಪಸ್ಸು ಮಾಡುತ್ತಾನೆ. ಶಿವ ಪ್ರತ್ಯಕ್ಷನಾದಾಗ ನಾರದರ ಚೇಷ್ಟೇಯಿಂದ ಮರುಳಾಗಿ ಗೌರಿಯನ್ನು ತನಗೆ ಕೊಡೆಂದು ಕೇಳಿಬಿಡುತ್ತಾನೆ. ಶಿವ ಮೊದಲೇ 'ಕೇಳಿದ್ದನ್ನು ಕೊಡುವ' ಅಶುತೋಷ. ಯೋಚನೆಯನ್ನೇ ಮಾಡದೆ ಗೌರಿ ಅವನ ಜತೆ ಹೋಗೆಂದು ಬಿಡುತ್ತಾನೆ. ಗೌರಿಗೆ ಇಲ್ಲಿ ಎರಡು ಸವಾಲು. ಗಂಡನ ಮರ್ಯಾದೆಯನ್ನೂ ಕಾಪಾಡಬೇಕು, ತನ್ನನ್ನೂ ಉಳಸಿಕೊಳ್ಳಬೇಕು. ಎದುರಾಡದೆ ರಾವಣನ ಜತೆ ಹೊರಡುತ್ತಾಳೆ. ದಾರಿಯುದ್ಧಕ್ಕೂ ತನ್ನನ್ನು ಆ ಅಸುರನಿಂದ ಬಚಾವು ಮಾಡಿಕೊಳ್ಳುವ ಉಪಾಯದ ಚಿಂತೆ. ಸ್ವಲ್ಪ ದೂರ ಸಾಗುವ ಹೊತ್ತಿಗೆ, ರಾವಣನ ಪಕ್ಕ ಚಲಿಸುತ್ತಿದ್ದ ನೆರಳು ಉದ್ದವೂ ದಪ್ಪವೂ ಆಗತೊಡಗುತ್ತದೆ. ಇದೇನು ಸೋಜಿಗವೆಂದು ಹಿಂದೆ ತಿರುಗಿದ ರಾವಣನಿಗೆ ಗಾಬರಿ. ಅಲ್ಲಿ ಲಾವಣ್ಯವತಿಯಾದ, ಚಿನ್ನದ ಕಾಂತಿಯ ಗೌರಿಯ ಬದಲು ಆಗಾಧ ದೇಹದ, ರುಂಡ ಮಾಲೆಗಳ, ಮೋಡಗಳ ಬಣ್ಣದ ಕಾಳಿ ಇರುತ್ತಾಳೆ! ಈ ಕಥೆ ಗೌರಿ ತನ್ನ ಸುಪ್ತ ಶಕ್ತಿಯನ್ನು ಪ್ರಕಟಗೊಳಿಸಿ, ರಾವಣನನ್ನು ಬೆದರಿಸಿ ಯಾರ ಸಹಾಯವೂ ಇಲ್ಲದೆ ಸ್ವಯಂ ರಕ್ಷಣೆ ಮಾಡಿಕೊಳ್ಳುವುದರ ಸಂಕೇತವಾಗಿದೆ.

ಅಂತಃಸತ್ವವುಳ್ಳ ಹೆಣ್ಣುಗಳೂ ಹೀಗೆಯೇ. ಹೂವಿನಂತೆ ಮೃದುವಾಗಿದ್ದರೂ ಸಮಯ ಸಂದರ್ಭಕ್ಕೆ ಅಗತ್ಯ ಬಿದ್ದಾಗ ವಜ್ರದಂತೆ ಕಠಿಣವಾಗುತ್ತಾರೆ. ಇಂದೂ ರಾವಣರಿದ್ದಾರೆ. ಹೀಗಾಗಿ ಹೆಣ್ಣುಮಕ್ಕಳು ಗೌರಿಯಂತೆ ಸಬಲರಾಗುವುದು ಅವಶ್ಯಕ. ಗೌರಿ ಹಬ್ಬದ ಸಲುವಾಗಿ ಹೊಸ ಸೀರೆ, ಪೂಜೆ, ಬಾಗಿನ ವಿನಿಮಯ, ಹಬ್ಬದೂಟಗಳಂತೂ ಇದ್ದುದೇ. ಅವುಗಳ ಜೊತೆಗೆ ಗೌರಿಸ್ವರೂಪದ ಸಂಕೇತ, ಗುಣಗಳನ್ನು ಅರ್ಥೈಸಿಕೊಂಡು ಅನುಸರಿಸಿದ ಭಾದ್ರಪದ ತದಿಗೆಯ ಆಚರಣೆ ಸಾರ್ಥಕಗೊಳ್ಳುತ್ತದೆ.

ಶರಣೆಂದವರನು ಪೊರೆವಳು ಎಂಬುವ ಬಿರುದು ನಿನ್ನದು ಎಂದರಿಯೆನು ತ್ವರಿದಿ ಎಂದು ಬೇಡಿಕೊಳ್ಳುತ್ತಾರೆ. ಹೌದು, ಮನುಜನಾದವನು ಬಾಗುವುದನ್ನು ಕಲಿಯಬೇಕು. ಹಿರಿಯರಿಗೆ, ದೈವಕ್ಕೆ ತಲೆಬಾಗಿ ನಡೆಯದ ಹೊರತು ಮನದೊಳಗಿನ ಅಜ್ಞಾನದ ಮುಸುಕು ಬದಿಗೆ ಸರಿಯದು ಎನ್ನುವುದು ಹರಿದಾಸರ ಅಭಿಪ್ರಾಯ.

ಗೌರಿ, ಭಾರತೀಯ ಹೆಣ್ಣುಗಳ ಆದರ್ಶರೂಪ. ನಮ್ಮ ಹೆಣ್ಣುಮಕ್ಕಳ ಎಲ್ಲ ಗುಣಗಳ ಉತ್ಕೃಷ್ಟ ಅಭಿವ್ಯಕ್ತಿ ಅವಳು. ನೆಲದಲ್ಲಿ ಹುಟ್ಟಿ ಮುಗಿಲ ದೇವಿಯಾದ ಗೌರಿ, ಹಲವು ಹುತ್ತು



ಬಗೆಯಲ್ಲಿ ದೇವಿಯರಂತೆಯೇ ಬದುಕುತ್ತಿರುವ ಹೆಣ್ಣುಗಳ ಮೂಲಸ್ರೋತವೂ ಮಾದರಿಯೂ ಆಗಿದ್ದಾಳೆ.

## ಬಾಗಿನ ತಾರೇ ಗೌರಿಗೆ...

### ಆಧುನಿಕ ಬಾಗಿನ

ಆಫೀಸು/ ಮನೆ ಕೆಲಸದ ಒತ್ತಡದಲ್ಲಿ ಇರುವವರಿಗೆ ಗೌರಿ ಹಬ್ಬಕ್ಕೆ ನೀಡುವ ಬಾಗಿನ ಸಿದ್ಧಪಡಿಸಲು ಸಮಯ ಇರುವುದಿಲ್ಲ. ಇಂಥವರಿಗಾಗಿಯೇ ಮಾರುಕಟ್ಟೆಯಲ್ಲಿ ಸಿದ್ಧಪಡಿಸಿದ ಬಾಗಿನ ಸೆಟ್ ದೊರೆಯುತ್ತದೆ. ಎಲ್ಲಾ ಧಾನ್ಯಗಳು, ಮಂಗಲ ದ್ರವ್ಯಗಳು, ಪೂಜಾ ಸಾಮಾಗ್ರಿಗಳನ್ನು ಹಾಕಿ ಬಾಗಿನವನ್ನು ಸಿದ್ಧಪಡಿಸುತ್ತಾರೆ.

ಇಂಥ ಬಾಗಿನಗಳು ನೋಡಲು ಸುಂದರವಾಗಿ ಅಲಂಕಾರಗೊಂಡಿರುತ್ತವೆ. ಮೊರಕ್ಕ ಕೆಂಪು ಹಾಗೂ ಹಸಿರು ಬಣ್ಣ ಹಚ್ಚಿರುವ, ರೇಷ್ಮೆ ಝರಿಯಿಂದ ಅಲಂಕಾರಗೊಂಡ, ಬಣ್ಣ ಬಣ್ಣದ ಕುಂದನ್‌ಗಳಿಂದ ಸಿಂಗಾರಗೊಂಡ, ಗೌರಿಯ ಮುಖವಾಡ ಇರುವ, ಬಣ್ಣದ ಕಾಗದದಿಂದ ಸಿದ್ಧಗೊಂಡ ನಾನಾ ಬಗೆಯ ಬಾಗಿನಗಳು ನೋಡಲು ಸುಂದರವಾಗಿರುತ್ತವೆ. ಇದನ್ನು ಅವರವರ ಅನುಕೂಲಕ್ಕೆ ತಕ್ಕಂತೆ ಕೊಂಡುಕೊಳ್ಳಬಹುದು.

## ಬಾಗಿನದಲ್ಲಿ ಏನಿರುತ್ತದೆ?

ಅಕ್ಕಿ, ಬೆಲ್ಲ, ಗೋಧಿಹಿಟ್ಟು, ಕಡ್ಲೆಬೇಳೆ, ಉದ್ದಿನಬೇಳೆ, ಹೆಸರುಬೇಳೆ, ತೊಗರಿಬೇಳೆ, ರವೆ, ವೀಳ್ಯದೆಲೆ ಅಡಿಕೆ, ಕಾಯಿ,

ರವಿಕೆ,ಗಾಜಿನ ಬಳೆ, ಸಿಂಗಾರದ ವಸ್ತುಗಳಾದ ಬಿಚ್ಚೋಲೆ, ಕನ್ನಡಿ, ಕುಂಕುಮ, ದಕ್ಷಿಣೆ , ಹಣ್ಣು, ಬೆಲ್ಲದ ಅಚ್ಚು, ಉಪ್ಪು, ಅವರ ವರ ಶಕ್ತಿಗೆ ಅನುಸಾರವಾಗಿ ಅವರಿಗೆ ಬೇಕಾದ ಅಮೂಲ್ಯ ವಸ್ತುಗಳನ್ನು ಸಹ ಇಟ್ಟು ಉಡುಗೊರೆ ನೀಡ ಲಾಗುತ್ತದೆ. ಈ ಸಾಮಾಗ್ರಿಗಳ ಜತೆ ಗೆಜ್ಜೆವಸ್ತ್ರ ಶ್ರೀಗಂಧ, ಗಂಧದ ಕಡ್ಡಿ ಇತ್ಯಾದಿ ವಸ್ತುಗಳನ್ನು ಸಹ ಕೆಲವರು ಇಡುತ್ತಾರೆ.

**ಮಹತ್ವ :**

ಮಂಗಳ ದ್ರವ್ಯಗಳನ್ನು ಬಾಗಿನದಲ್ಲಿಟ್ಟು ದಾನ ಮಾಡು ವುದರಿಂದ ಗೌರಿ ದೇವಿಯ ಪೂರ್ಣ ಅನುಗ್ರಹ ದೊರೆತು, ದೀರ್ಘ ಸುಮಂಗಲಿ ಯೋಗ ಲಭಿಸುತ್ತದೆ ಎಂಬ ನಂಬಿಕೆ ಇದೆ.

ಬಾಗಿನದಲ್ಲಿ ಧಾನ್ಯಗಳನ್ನು ಕೊಡುವುದಕ್ಕೆ ಹಲವು ಹಿನ್ನೆಲೆಗಳಿವೆ. "ಒಂದೊಂದು ಧಾನ್ಯಕ್ಕೆ ಒಂದೊಂದು ದೇವ ರನ್ನು ಹೋಲಿಸುವುದರಿಂದ ಎಲ್ಲಾ ದೇವರ ಅನುಗ್ರಹ ದೊರೆತು, ದೋಷಗಳೆಲ್ಲಾ ನಿವಾರಣೆ ಆಗಿ, ಮನೆಯಲ್ಲಿ ಸಂಪತ್ತು ಅಭಿವೃದ್ಧಿಯಾಗುತ್ತದೆ ಎಂಬ ಪ್ರತೀತಿ ಇದೆ" ಎನ್ನು ತ್ತಾರೆ ಪುರೋಹಿತರಾದ ಮಂಜುನಾಥ್.

'ಸಕಲ ಧಾನ್ಯಗಳನ್ನು ಕೊಡುವ ಉದ್ದೇಶ ಸ್ವಯಂ ಪಾಕ. ದೇವಿಗೆ ನಾವು ಸಮರ್ಪಿಸುವ ಮಹಾ ನೈವೇದ್ಯದ ಜತೆಗೆ ಇದನ್ನು ಕೊಡುವ ಉದ್ದೇಶ. ಬೇರೆ ಏನನ್ನಾದರೂ ದೇವಿ ಅಪೇಕ್ಷಿಸಿದರೆ ಅದು ಈ ಧಾನ್ಯಗಳ ಮೂಲಕ ನೆರವೇರಿ,ದೇವಿ ಸಂತೃಪ್ತಳಾಗಿ ನಮ್ಮನ್ನು ತುಂಬು ಹೃದಯದಿಂದ ಹರಸುತ್ತಾಳೆ ಎಂಬ ನಂಬಿಕೆ ಇದೆ'.

ಬಾಗಿನದ ಹುಟ್ಟಿನ ಬಗ್ಗೆ ಹೇಳುವುದಾದರೆ ಹಿಂದಿನ ಕಾಲದಲ್ಲಿ ಧಾನ್ಯಗಳ ಕಟಾವು, ಸುಗ್ಗಿ ಎಲ್ಲಾ ವಿಜೃಂಭಣೆ ಯಿಂದ ಆಚರಿಸಲಾಗುತ್ತಿತ್ತು.ತಮ್ಮ ಹೊಲದಲ್ಲಿ ಬೆಳೆದ ಧಾನ್ಯಗಳ ರುಚಿ ಹೇಗಿದೆ ಎಂದು ಬೇರೆಯವರು ಸವಿದು ಹೇಳಿದರೆ ಚೆನ್ನ ಎಂದು ಹಬ್ಬದ ಸಂದರ್ಭದಲ್ಲಿ ಧಾನ್ಯಗಳ ವಿನಿಮಯ ಮಾಡಲಾಗುತಿತ್ತು, ಕಾಲ ಬದಲಾದಂತೆ ಧಾನ್ಯ ಗಳ ಜತೆ ಉಡುಗೊರೆಯೂ ಸೇರಿ ಬಾಂಧವ್ಯದ ಬೆಸುಗೆ ಮತ್ತಷ್ಟು ಹೆಚ್ಚಾಗಿದೆ.



ತಿರುಮಲ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

## ಚಂದಾದಾರರಿಗೆ ವಿಜ್ಞಾಪನೆ

ಸಪ್ತಗಿರಿ ಮಾಸಪತ್ರಿಕೆ ಪಾಠಕರಿಗೆ ಪ್ರತಿ ತಿಂಗಳು ಸಕಾಲದಲ್ಲಿ ಸೇರಲು ಅನೇಕ ಕ್ರಮ ಗಳನ್ನು ಕೈಗೊಂಡಿದೆ. ಭಕ್ತರು ತಮ್ಮ ವಿಳಾಸ ದಲ್ಲಿ ಏನಾದರೂ ಬದಲಾವಣೆ ಇದ್ದಲ್ಲಿ ನಮಗೆ ತಿಳಿಸಬೇಕಾಗಿ ಕೋರಲಾಗಿದೆ. ಪಾಠಕರು ಈ ವಿಷಯವನ್ನು ಈ ಕೆಳಗೆ ತಿಳಿಸಿದಂತೆ ಪ್ರಧಾನ ಸಂಪಾದಕರ ಕಾರ್ಯಾಲಯಕ್ಕೆ ತಿಳಿಸ ಬೇಕಾಗಿ ವಿನಂತಿ.

1) "ಸಪ್ತಗಿರಿ" ಮಾಸಪತ್ರಿಕೆಗೆ ಸಂಬಂಧಿಸಿದ ಸಲಹೆ/ಸೂಚನೆ/ದೂರುಗಳನ್ನು sapthagiri_helpdesk@tirumala.org ಮುಖಾಂತರ ತಿಳಿಯ ಪಡಿಸಿ.

2) ಸಪ್ತಗಿರಿ ಚಂದಾದಾರರ ವಿಳಾಸದಲ್ಲಿ ಬದ ಲಾವಣೆ ಇದ್ದಲ್ಲಿ 0877-2264543 ದೂರವಾಣಿ ಸಂಖ್ಯೆಗೆ ಕರೆ ಮಾಡಿ ತಮ್ಮ ಪೂರ್ತಿ ವಿಳಾಸವನ್ನು ಪಿನ್‌ಕೋಡ್, ಸೆಲ್ ನಂಬರ್ ಸಮೇತ ಕಾರ್ಯಾಲಯದ ಕೆಲಸದ ವೇಳೆ ಯಲ್ಲಿ (ಬೆ.10.30 ರಿಂದ ಸಂಜೆ 5.00 ಗಂಟೆ ಯೊಳಗೆ) ತಿಳಿಸಬೇಕು.

3. ಕಾರ್ಯಾಲಯದ ದೂರವಾಣಿ ನಂಬರ್ ಮುಖಾಂತರವಾಗಲಿ, sapthagiri_helpdesk @tirumala.org ಮುಖಾಂತರ ತಿಳಿಯಪಡಿಸಿ.

4. ಆನ್‌ಲೈನ್ ಚಂದಾದಾರರು ತಮ್ಮ ಪೂರ್ತಿ ವಿಳಾಸವನ್ನು ಕ್ರಮಬದ್ಧೀಕರಿಸಲು ತಿ.ತಿ.ದೇ. ವೆಬ್‌ಸೈಟ್ ಮುಖಾಂತರ ಮತ್ತೊಮ್ಮೆ ತಿಳಿಸ ಬೇಕಾಗಿ ಕೋರಲಾಗಿದೆ.

-ಪ್ರಧಾನ ಸಂಪಾದಕರು

# ಕೃಷ್ಣಂ ವಂದೇ ಜಗದ್ಗುರುಂ



-ಶ್ರೀಮತಿ. ಕೆ.ವಿ. ಪದ್ಮಾವತಿ
9972222791

ಶ್ರೀ ಕೃಷ್ಣ ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ರಂಗಗಳಲ್ಲಿ ಆದರ್ಶಗಳ ಅಂತಃಸಾಕ್ಷಿ. ಭಾರತೀಯ ಎರಡು ಮಹಾಕಾವ್ಯಗಳಲ್ಲಿ ಒಂದಾದ "ಮಹಾಭಾರತ" ದ ತೆರೆಮರೆಯ ನಾಯಕ. ಶ್ರೀ ಕೃಷ್ಣ ಮತ್ತು ಅರ್ಜುನನ ನಡುವೆ ನಡೆದ ಸಂವಾದ ರೂಪಕ ಭಗವದ್ಗೀತೆಯು ಸಾರ್ವಕಾಲಿಕವಾಗಿ ಬದುಕಿನ ಮೌಲ್ಯಗಳನ್ನು ಸಾರುತ್ತಾ, ಜನರ ಜೀವನದಲ್ಲಿ ಶಾಂತಿ ಮತ್ತು ನೆಮ್ಮದಿಗೆ ಕಾರಣವಾಗಿದೆ. ಶ್ರೀಕೃಷ್ಣ ಜನ್ಮಾಷ್ಟಮಿಯಂದು ಆತನ ಸ್ಮರಿಸೋಣ.

ವಸುದೇವಸುತಂ ದೇವಂ ಕಂಸಚಾಣೂರ ಮರ್ದನಂ ।
ದೇವಕೀ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಮ್॥

ಕೃಷ್ಣ ಈ ಶಬ್ದ ದಿವ್ಯವಾದದ್ದು. ಶ್ರೀ ಕೃಷ್ಣ ಎಂದರೆ ಅತ್ಯುನ್ನತ ಆನಂದ ಎಂದರ್ಥ. ಶ್ರೀ ಕೃಷ್ಣನ ಹೆಸರು ಲೋಕಪ್ರಿಯ. ರಾತ್ರಿ ಮಲಗುವ ಮುನ್ನ, ಬೆಳಿಗ್ಗೆ ಎದ್ದಕೂಡಲೇ ಕೃಷ್ಣ ಕೃಷ್ಣ ಎಂದುಕೊಳ್ಳುತ್ತಾ ಅವನ ಹತ್ತಾರು ಚಿತ್ರಗಳನ್ನು ಕಣ್ತುಂಬಿಕೊಳ್ಳುವ ಭಕ್ತರಿದ್ದಾರೆ.

ವಸುದೇವ - ದೇವಕೀ ಪುತ್ರ, ಯಶೋಧಾ ನಂದನ, ಬಾಲಕೃಷ್ಣ, ಗೋಪಿ ರಾಧಾಕೃಷ್ಣ, ತುಂಟ ಕೃಷ್ಣ ಪಾಂಡವ ಪ್ರಿಯಮ ಸಾರಥಿ ಕೃಷ್ಣ, ಸಂಧಾನಕಾರ, ಗೀತಾಚಾರ್ಯ ಹೀಗೆ ಕೃಷ್ಣನ ಪಾತ್ರಗಳು ಹಲವಾರು. ಒಂದೊಂದು ಪಾತ್ರದಲ್ಲೂ ಹಿತೋಪದೇಶ ಮಾಡುವ ಈ ಮಹಾನುಭಾವ ನಮಗೆ ಪ್ರತ್ಯಕ್ಷವಾಗಿ ಕಾಣುವುದಿಲ್ಲ,ಮನದಲ್ಲಿರುತ್ತಾನೆ.

ಕರ್ಮಣ್ಯೇ ವಾಧಿಕಾರಸ್ತೇ ಮಾ ಫಲೇಷು ಕದಾಚನ।
ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಸ್ತ್ವಕರ್ಮಣಿ।

ಯುದ್ಧ ನಿನ್ನ ಕರ್ತವ್ಯ. ನಿನ್ನ ಕೆಲಸ ನೀನು ಮಾಡು. ಫಲ-ಅಫಲಗಳನ್ನು ಯೋಚಿಸದಿರು ಎಂದು ಹುರಿದುಂಬಿಸಿದವ ರುಕ್ಮಿಣೀರಮಣ ಶ್ರೀ ಕೃಷ್ಣ.

ಬಾಲ್ಯದಲ್ಲಿ ಸಹಜ ತುಂಟಾಟದಿಂದ ಕೃಷ್ಣ ಎಲ್ಲರನ್ನೂ ರಂಜಿಸಿದ. ಹಸುಗಳಿರುವ ಮನೆ ಹೊಕ್ಕು ಹಾಲು ಕುಡಿದು, ಬೆಣ್ಣೆ ತಿಂದು ಕಾಡಿದು, ಗೋಪಿಕಾ ಸ್ತ್ರೀಯರನ್ನು ಕೊಳಲು ವಾದನದಿಂದ ಮರುಳು ಮಾಡಿದ ರಸಿಕ. ಅವರ ಬಟ್ಟೆ ಕದ್ದು ಕಾಡಿದ ತುಂಟ. ತಾಯಿಗೆ ಬಾಯಿಯಲ್ಲಿ ಬ್ರಹ್ಮಾಂಡ ತೋರಿದ ಪವಾಡ ಪುರುಷ. ಕಾಳಿಂಗಮರ್ದನ ಮಾಡಿ, ಪೂತನೀಯನ್ನು ಕೊಂದು ಮಾವ ಕಂಸನನ್ನು ಯಮಸದನಕ್ಕೆ ಅಟ್ಟಿದ ತಂತ್ರಗಾರ.

ಆನೆಯ ಮದವಿಳಿಸಿ, ಧೇನುಕಾಸುರ ಚಾಣೂರ ಮುಂತಾದ ರಾಕ್ಷಸೀ ಪ್ರವೃತ್ತಿಗಳನ್ನು ಮೆಟ್ಟಿ ದೇವಕಿ - ಯಶೋಧೆಯರಿಗೆ ಪರಮಾನಂದ ಉಂಟುಮಾಡಿದ ವರಪುತ್ರ, ಧಾರಾಕಾರ ಮಳೆಯಲ್ಲಿ ಗೋವರ್ಧನ ಗಿರಿಯನ್ನು ಎತ್ತಿ ಹಿಡಿದು, ಹಸುಗಳು - ಗೋಕುಲದ ಜನರನ್ನು ಸಂರಕ್ಷಿಸಿದ ಜಗದ್ರಕ್ಷಕ. ಗುರು ಸಾಂದೀಪನಿಯ ಮಗನನ್ನು ಸಮುದ್ರದಾಳದಿಂದ ಹೊರ ತಂದ ಗುರುದಕ್ಷಿಣೆಯನ್ನಿತ್ತ ನೆಚ್ಚಿನ ಶಿಷ್ಯ. ಬಾಲ್ಯ ಸ್ನೇಹಿತ ಸುಧಾಮನು ತಂದಿದ್ದ ಅವಲಕ್ಕಿ ತಿಂದು,ಅವನ ದಾರಿದ್ರ್ಯ ದೂರ ಮಾಡಿಸಿರುವಂತನನ್ನಾಗಿಸಿದ ನೆಚ್ಚಿನ ಗೆಳೆಯ.



ಬರಿ ಮಾನವರು ಮಾತ್ರವಲ್ಲ, ಹಸು, ನವಿಲು, ಪಕ್ಷಿಗಳಿಗೂ ಕೃಷ್ಣನೆಂದರೆ ಆವ್ಯಾಜ ಪ್ರೀತಿ, ಅವನ ಕೊಳಲಿನ ಕರೆಗೆ ದನ - ಕರುಗಳು ಕಿವಿ ನಿಮಿರಿಸಿ ಕೇಳುತ್ತಿದ್ದುದು ಸುಸ್ಪಷ್ಟ.

ಕೃಷ್ಣನ ವಿರುದ್ಧ ಬೆಣ್ಣೆ ಕದ್ದ, ಸೀರೆ ಕದ್ದ ಎಂಬ ಉಡಾಫೆ ಮಾತುಗಳಿದ್ದರೂ ಕಳ್ಳತನ ಅವನ ಉದ್ದೇಶವಲ್ಲ ಏಳೆಂಟು ವರ್ಷದ ಮುಗ್ಧ ಮಗುವಿನ ತುಂಟತನ ಅವನದು.

ಕಲಿಯುಗ ಕಾಲು ಹಾಕಿರಲಿಲ್ಲ. ಅದು ದ್ವಾಪರಯುಗ. ಶ್ರೀ ಕೃಷ್ಣ ಎಂಬ ಮಹಾಪುರುಷ ವಸುದೇವ- ದೇವಕಿಯರಿಗೆ ಮಗನಾಗಿ ಹುಟ್ಟಿದ, ಉಳಿದು - ಬೆಳೆದು ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ರಕ್ಷಿಸಿ, ಸತ್ಯ - ಧರ್ಮ - ನ್ಯಾಯಗಳನ್ನು ಎತ್ತಿ ಹಿಡಿದ ಮಹಾನುಭಾವ ಆತ. ಕುರುವಂಶದ ದಾಯಾದಿ ಕಲಹದಲ್ಲಿ ಪಾಂಡವರ ಪರವಾಗಿ ನಿಂತು, ಕುರುಕ್ಷೇತ್ರ ಯುದ್ಧ ತಪಿಸುವಲ್ಲಿ ಶಕ್ತಿ ಮೀರಿ ಶ್ರಮಿಸಿದ್ದು ಸರ್ವವಿಧಿತ.

ಸಾಮ, ದಾನ, ಭೇದ, ದಂಡ ಈ ಚತುರೋಪಾಯಗಳನ್ನು ಕಾಲಕಾಲಕ್ಕೆ ಬಳಸಿ ವೈರ ಮರೆತು ಮೈತ್ರಿಗೆ ದಾರಿ ತೋರಿದ ಈತ ಅನಿವಾರ್ಯವೆನಿಸಿದರೆ ಸಂಘರ್ಷಕ್ಕೂ ಹುರಿದುಂಬಿಸಿದ್ದು ಸ್ಪಟಿಕದಷ್ಟು ನಿಚ್ಚಳ, ಸೋದರರು ಹೊಡೆದಾಡಬಾರದು, ಅಮಾಯಕ ಜನರು ಸಾಯಬಾರದು. ರಕ್ತದ ಓಕುಳಿ ಹಾಗೂ ಕಣ್ಣೀರು ತಪ್ಪಿಸಬೇಕು ಎಂಬುದು ಕೃಷ್ಣನ ಕಳಕಳಿಯಾಗಿತ್ತು ಎಂಬ ನಿಸ್ಸಂದೇಹ.

ಸುಮಾರು 5114 ವರ್ಷಗಳ ಹಿಂದೆ ಕಲಿಯುಗ ಪ್ರಾರಂಭವಾಯಿತಲ್ಲ. ಅದಕ್ಕೂ ಹಿಂದೆ ಹಸ್ತಿನಾಪುರದಲ್ಲಿ ಕುರುವಂಶದ ರಾಜರು ಆಳುತ್ತಿದ್ದರು. ಪಾಂಡುರಾಜ ಮಾದ್ರಿಯರನ್ನು ಕಳೆದುಕೊಂಡು ಕುಂತೀದೇವಿ ಐವರು ಪುತ್ರರೊಂದಿಗೆ ಬಂದಾಗ ಧೃತರಾಷ್ಟ್ರನ ವ್ಯಾಮೋಹದಿಂದಾಗಿ ಪಾಂಡವರೈವರಿಗೆ ನ್ಯಾಯವಾಗಿ ದಕ್ಕಬೇಕಿದ್ದ ರಾಜ್ಯ, ಸಂಪತ್ತು ದೊರೆಯಲಿಲ್ಲ. ಅಂದಿನಿಂದಲೇ ಪಾಂಡವರ ರಕ್ಷಣೆಗೆ ಕೃಷ್ಣ ನೆಲೆನಿಂತಿದ್ದು ಪ್ರೀತಿ - ವಾತ್ಸಲ್ಯದ ಪ್ರತೀಕ. ಅನ್ಯಾಯ ಪರಿಹರಿಸುವ ಸಂಕಲ್ಪ.

ಈ ಮಧ್ಯೆ ಪಗಡೆಯಾಟದಲ್ಲಿ ಸೋತ ಪಾಂಡವರೈವರ ಪತ್ನಿ ದ್ರೌಪದಿಯ ವಸ್ತ್ರಾಪಹರಣ ಪ್ರಸಂಗದಲ್ಲಿ ಅವಳಿಗೆ ಅಕ್ಷಯಾಂಬರವನ್ನಿತ್ತು ಸಲಹಿದ ಕೀರ್ತಿಕೃಷ್ಣನಿಗೆ ಸಲ್ಲುತ್ತದೆ. ಅದಕ್ಕೂ ಮುನ್ನ ರಾಜಸೂಯ ಯಾಗದಲ್ಲಿ ಕೈಗೆ ಗಾಯಾವಾದಾಗ, ಕೃಷ್ಣನಿಗೆ ದ್ರೌಪದಿ ತನ್ನ ಪೀತಾಂಬರದ ಒಂದು ಭಾಗವನ್ನು ಹರಿದು ಅವನ ಕೈಗೆ ಕಟ್ಟಿದ್ದಳು. ಆ ವಸ್ತ್ರವನ್ನು ದಯಪಾಲಿಸಿದ ಅಣ್ಣ ಉದಾರಿ ಶ್ರೀಕೃಷ್ಣ. ಯುದ್ಧ ಅನಿವಾರ್ಯವಾದಾಗ ಕೃಷ್ಣ ಅರ್ಜುನನ ಸಾರಥಿಯಾಗಿ ಸಲಹಿದ. ಬಾಲ್ಯದಲ್ಲಾಗಲಿ, ಯೌವ್ವನದಲ್ಲಾಗಲೀ ಶ್ರೀ ಕೃಷ್ಣನ ರೂಪ ಮನಮೋಹಕ. ಹಲವಾರು ದೃಷ್ಟಿಯಲ್ಲಿ ಈತ ಮಾನವನೂ ಹೌದು. ದೇವನೂ ಹೌದು ದೈವೀಪಾತ್ರದಲ್ಲಿ ಕಾಣಿಸಿಕೊಳ್ಳುವ ಕೃಷ್ಣ ನಾಲ್ಕು ಕೈಗಳಲ್ಲೂ ಒಂದೊಂದು ಸಾಮಗ್ರಿ. ಇವೆಲ್ಲ ಸಾಮ ದಾನ-ಭೇದ-ದಂಡಗಳ ಪ್ರತಿರೂಪ. ಯುದ್ಧ ತಪ್ಪಿಸಲು ರಾಯಭಾರ ನಡೆಸಿದಾಗ ಸಾಮೋಪಾಯ ಮೊದಲೂ ಬಳಸಿದ. ಕಮಲ - ಇದರ ಸಂಕೇತ.

ದುರ್ಯೋಧನ ನೀನೇ ಬಹುಪಾಲು ರಾಜ್ಯ ಇಟ್ಟುಕೋ. ಪಾಂಡವರಿಗೆ ಐದು ಗ್ರಾಮಕೊಟ್ಟುಬಿಡು ಎಂಬ ಮಾತು ದುರ್ಯೋಧನ ಕೇಳಲಿಲ್ಲ. ಮೂರನೆಯದು ಭೇದೋಪಾಯ. ಗದೆ ಇದರ ಸಂಕೇತ. ಕರ್ಣನನ್ನು ಬರಮಾಡಿಕೊಂಡು, ನೀನು ಕುಂತಿಯ ಹಿರಿಯಮಗ, ಪಾಂಡವರ ಬಳಿ ಬಂದುಬಿಡು. ರಾಜ್ಯ ನೀನೇ ಆಳು. ತಾಯಿಯ ಮನಸ್ಸು ನೋಯಿಸಿ ಕೊಲ್ಲದಿರು ಎಂಬ ಕೃಷ್ಣನ ಮಾತಿಗೆ ಬೆಲೆ ಕೊಡಲಿಲ್ಲ ಕರ್ಣ. ಮಾತೃ ವಾತ್ಸಲ್ಯ ಬಂಧು ಪ್ರೇಮಕ್ಕಿಂತ ಸ್ವಾಮಿನಿಷ್ಠೆಯೇ ಅವನಿಗೆ ಮಿಗಿ

ಲಾಯಿತು.ಕೊನೆಗೆ ಉಳಿದದ್ದು ದಂಡೋಪಾಯ. ಅನಿವಾರ್ಯವಾಗಿ ಯುದ್ಧಕ್ಕೆ ಅಣಿಯಾಗಬೇಕಾಯಿತು.ಕುರುಕ್ಷೇತ್ರ ರಣರಂಗದಲ್ಲಿ ಪಾಂಚಜನ್ಯ ಶಂಖನಾದ ಮಾಡಿದ್ದಲ್ಲದೆ, ಭೀಷ್ಮನ ಮೇಲೆ ಸುದರ್ಶನ ಚಕ್ರ ಪ್ರಯೋಗವನ್ನೂ ಮಾಡಿದ ಶ್ರೀ ಕೃಷ್ಣ.

ಒಟ್ಟಾರೆ ಹಿಂಸಾಚಾರ-ರಕ್ತದೋಕುಳಿಯ ಸಮರ ಬೇಡ ಎಂಬ ಅವನ ಹಂಬಲ ಫಲಿಸಲಿಲ್ಲ. ನೂರೊಂದು ಮಕ್ಕಳನ್ನು ಕಳೆದುಕೊಂಡ ಗಾಂಧಾರಿಯ ಕರುಳು ಕಿವುಚಿದಂತಾಯ್ತು. ಪಾಂಡವರ ರಕ್ಷಣೆಗೆ ನಿಂತು ನನ್ನ ಮಕ್ಕಳ ಸಾವಿಗೆ ಕಾರಣೀಭೂತನಾದ ಕೃಷ್ಣನ ಮೇಲೆ ಅವಳ ರೊಚ್ಚಿಗೆ ಮಿತಿ ಎಂಬುದಿಲ್ಲ. ಕೃಷ್ಣಾ, ನಿನ್ನ ಯಾದವ ವಂಶ ನಿರ್ನಾಮವಾಗಲಿ ಎಂಬ ಶಾಪ ನೀಡಿ, ಕುಂತಿ - ವಿದುರ- ಧೃತರಾಷ್ಟ್ರನ ಜೊತೆಗೂಡಿ ಕಾಡಿಗೆ ತೆರಳಿದಳು ಗಾಂಧಾರ ಮನೆತನದ ಗಾಂಧಾರಿ.

ಕುಂತಿಯ ಹಾಗೆಯೇ ಮಹಾನ್ ಸಾಧ್ವಿ ಗಾಂಧಾರಿ. ಅವಳ ಶಾಪ ಹೇಗೆ ಸುಳ್ಳಾದೀತು? ಕೃಷ್ಣನೂ ಯುದ್ಧ - ಸಾವು-ನೋವುಗಳಿಂದ ತತ್ತರಿಸಿದ. ಅಣ್ಣ ಬಲರಾಮನನ್ನು ಕಳೆದುಕೊಂಡ, ಬೇಟೆಗಾರ ಹೂಡಿದ ಬಾಣ ಇವನ ಕಾಲಿಗೆ ತಗುಲಿದ್ದೇ ನೆಪವಾಗಿ ಶ್ರೀ ಕೃಷ್ಣ ತನ್ನ ಅವತಾರ ಮುಗಿಸಿದ.

125 ವರ್ಷ ಬಾಳಿ ಬದುಕಿನ ಶ್ರೀ ಕೃಷ್ಣ ದೇವರು ಎಂಬುದಕ್ಕಿಂತ ಮಹಾನ್ ಮಾನವ ಎಂಬುದು ಸೂಕ್ತ. ದೇವರೇ ಆಗಿದ್ದಲ್ಲಿ ಪಾಂಡವರು ಪಗಡೆಯಾಟದಲ್ಲಿ ಸೋಲುವುದನ್ನು ತಪ್ಪಿಸಬಹುದಿತ್ತು.

ದ್ರೌಪದಿ ಮಾನಭಂಗದ ಪ್ರಸಂಗ ತಪ್ಪಿಸಲು ಸಾಧ್ಯವಿತ್ತು. ಯುದ್ಧವನ್ನೂ ತಪ್ಪಿಸಬಹುದಿತ್ತು. ಅವನದ್ದು ವರ್ಣರಂಜಿತ ವ್ಯಕ್ತಿತ್ವ.ಯುಕ್ತಿಗಾರ, ತಂತ್ರಗಾರ, ಇಷ್ಟೆಲ್ಲಾ ಆದರೂ ದೂರ್ವಾಸರ ಶಾಪದಂತೆ ಯಾದವರು ಹೊಡೆದಾಡಿ, ಬಡಿದಾಡಿ, ತಮ್ಮ ವಂಶ ನಾಶವಾಗುವುದನ್ನು ತಪ್ಪಿಸಲು ಸಾಧ್ಯವಾಗಲಿಲ್ಲ.

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್॥

ಅಸತ್ಯ, ಅಧರ್ಮ, ಅನ್ಯಾಯ ಹೆಚ್ಚಿದಾಗಲೆಲ್ಲ ಮತ್ತೆ ಸತ್ಯ, ಧರ್ಮ, ನ್ಯಾಯಗಳನ್ನು ನೆಲೆಗೊಳಿಸಿ, ಮನುಕುಲ ಸಂರಕ್ಷಿಸಲು ಕಾಲಕಾಲಕ್ಕೆ ನಾನು ಅವತರಿಸುತ್ತೇನೆ ಎಂದು ಶ್ರೀ ಕೃಷ್ಣ ಹೇಳಿದ್ದಾನೆ.

ಜನಪ್ರತಿನಿಧಿಗಳು ಹಗರಣ ಹುಟ್ಟು ಹಾಕಿ, ಸ್ವಾರ್ಥ-ಲಭ - ಸ್ವಜನಪಕ್ಷಪಾತದಲ್ಲಿ ತೊಡಗಿರುವಾಗ ಪ್ರಜೆಗಳ ಬದುಕು ದುರ್ಭರವಾಗಿರುವಾಗ ಕೃಷ್ಣ ಅವತರಿಸಿ ಬರುವನೇ ಎಂದುಕೊಳ್ಳುವಂತಾದರೆ ಅದು ಅಸಹಜವೇನಲ್ಲ. ಧರ್ಮಾತ್ಮರನ್ನು ಧರ್ಮವು ಸದಾ ರಕ್ಷಿಸುತ್ತದೆ.

ಸಮುದ್ರಕ್ಕೆ ಸಮುದ್ರವೇ ಸಾಟಿ. ಸೂರ್ಯನಿಗೆ ಸೂರ್ಯ ಸಮ ಎಂಬ ಹಾಗೆ ಕೃಷ್ಣನಿಗೆ ಸಾಟಿಯಾದವ ಕೃಷ್ಣನೇ ಹೌದು. ನೂರಾರು ವಿಧದಲ್ಲಿ ಕೃಷ್ಣ ಬಲು ವಿಶಿಷ್ಟ ಶಕ್ತಿ ಮತ್ತು ವ್ಯಕ್ತಿ. ನೆಚ್ಚಿಕೊಂಡವರನ್ನು ಬೆಳಕಿನಲ್ಲಿ ಮುಂದೆ ಕರೆದೊಯ್ದ ಮಾರ್ಗದರ್ಶಿ.

### ಗೋಪಿಕೆಯರ ಕೃಷ್ಣಪ್ರೇಮ

ಕೃಷ್ಣನ ಮಡದಿಯರು ರುಕ್ಮಿಣೀ , ಸತ್ಯಭಾಮಾ, ನೀಲಾ (ರಾಧೆ), ಮಿತ್ರವಿಂದಾ, ಕಳಿಂದೀ, ಭದ್ರಾ, ಲಕ್ಷಣಾ, ಜಾಂಬವತಿ ಮತ್ತು ಹದಿನಾರು ಸಾವಿರದ ನೂರು ಮಂದಿ. ಅವರಲ್ಲಿ ಹದಿನಾರು ಸಾವಿರದ ನೂರು ಮಂದಿ ನರಕಾಸುರನ ಬಂಧಿಯಾಗಿದ್ದವರು. ಅವರೆಲ್ಲರೂ ಶ್ರೇಷ್ಠರು ಶ್ರೀಕೃಷ್ಣನ ಭಕ್ತೆಯರು. ಕೃಷ್ಣನಿಗೆ ಮಡದಿಯರಾಗಿ ತಮ್ಮ ಜನ್ಮ ಪಾವನಗೊಳಿಸಿಕೊಂಡರು.

ಅಧಿಕಾರ ಸಿಕ್ಕೊಡನೆ ಧರ್ಮ- ಅಧರ್ಮದ ವಿವೇಚನೆಯಿಲ್ಲದೆ, ವಿಧಿ-ನಿಷೇಧಗಳ ಪರಿಜ್ಞಾನವಿಲ್ಲದೆ ತೋಚಿದಂತೆ ವರ್ತಿಸುವುದೇ ಅಸುರರ ಗುಣ.ನರಕಾಸುರನೂ ಇದಕ್ಕೆ ಹೊರತಲ್ಲ. ಸ್ವತಃ ವರಾಹರೂಪಿ ವಿಷ್ಣು ಮತ್ತು ಭೂದೇವಿಯವರ ಪುತ್ರನಿವನು. ತಂದೆ - ತಾಯಿ ಯಾರಾದರೇನು? ಎಂತಹ ದುಷ್ಟನೂ ಮಗನಾಗಿ ಹುಟ್ಟಬಹುದು ಎಂಬುದಕ್ಕೆ ಸಾವಿರಾರು ವರ್ಷಗಳ ಹಿಂದೆಯೇ ಉದಾಹರಣೆಯಾಗಿ ದಾಖಲಾದವನು.

ಅಸುರರಿಗೂ ಅಪಾರ ಶ್ರದ್ಧಾ ಭಕ್ತಿಗಳಿರುತ್ತವೆ ದುಷ್ಟತನದಲ್ಲಿ, ಅಧರ್ಮದ ಆಚರಣೆಯಲ್ಲಿ. ಇವನೂ ಕೂಡಾ ಶ್ರದ್ಧಾ ಭಕ್ತಿಗಳಿಂದ ತಪವನ್ನಾಚರಿಸಿ ಬ್ರಹ್ಮನಿಂದ ತಾನು ಯಾರಿಂದಲೂ ಸಾಯಬಾರದು ಎಂಬ ವರ ಪಡೆದ.ವ್ಯಕ್ತಿಯ ಉದ್ದೇಶವೇ ಅವನ ಅಂತರಂಗಕ್ಕೆ ಹಿಡಿದ ಕನ್ನಡಿ.ಅದರಿಂದಲೇ ಅವನು ಸಜ್ಜನನೋ, ಅಲ್ಲವೋ ಎಂಬುದು ನಿಶ್ಚಯವಾಗುವುದು. ನರಕನು ಮಾತ್ರ ದುರ್ಜನನಾದ. ಸಜ್ಜನರನ್ನು ಪೀಡಿಸಲೆಂದೇ ಸಾವಿಲ್ಲದ ವರ ಪಡೆಯಲು ಬಯಸಿದ. ನರಕನ ನರಕಸದೃಶ ಆಳ್ವಿಕೆ ವಿಜೃಂಭಿಸಲು ಬ್ರಹ್ಮನಿಂದ ಒಂದು ಸಹಿಯೂ, ಮುದ್ರೆಯೂ ಸಿಕ್ಕಿದಂತಾಯಿತು. ಅವನ ದುರಾಡಳಿತ ಎಗ್ಗಿಲ್ಲದಂತೆ ಸಾಗಿತು.

ನರಕನೂ, ಜರಾಸಂಧನೂ ಪ್ರಾಯಃ ಆಪ್ತ ಗೆಳೆಯರು. ಜರಾಸಂಧನು ಎಲ್ಲಾ ರಾಜಕುಮಾರರನ್ನು ಅಪಹರಿಸಿ ಸೆರೆಯಲ್ಲಿಟ್ಟ. ಕ್ಷತ್ರಿಯ ಯುವಕ-ಯುವತಿಯರು ಹರಿಬಂಧನದಲ್ಲಿದ್ದರೆ, ಮುದಿರಾಜರನ್ನು ರಾಜ್ಯಸಹಿತ ವಶಪಡಿಸಿಕೊಳ್ಳುವುದು ಸುಲಭ ಎಂಬುದು ನರಕನದು ಜರಾಸಂಧನ ಉಪಾಯ. ಆದರೆ, ನರಕನದು ಜರಾಸಂಧನಿಗಿಂತಲೂ ದುಷ್ಟಾಲೋಚನೆ. ಅವನು ಎಲ್ಲಾ ರಾಜಕುಮಾರಿಯರನ್ನು ಬಂಧಿಸಿ ಸೆರೆಗಟ್ಟಿದ. ಕುಮಾರಿಯರಿಗೆ ಪಟ್ಟಗಟ್ಟಬಾರದು ಅಥವಾ ಅವರ ಸಂತಾನಕ್ಕೂ ಸಿಂಹಾಸನ ಸಿಗಬಾರದು ಇದು ಅವನ ದುರುದ್ದೇಶ.

ಹೀಗಾಗಿ ನರಕಾಸುರನ ಸೆರೆಯಲ್ಲಿದ್ದವರೆಲ್ಲಾ ಅವಿವಾಹಿತೆಯರು, ಎಲ್ಲರೂ ಗುಣವತಿಯರು. ದುಷ್ಟನ ಆಳ್ವಿಕೆಯಲ್ಲಿ ಯುವ ಕುಮಾರ-ಕುಮಾರಿಯರೆಲ್ಲ ವರ್ಷಗಟ್ಟಲೆ ಸೆರೆಯಲ್ಲಿ!! ತಲೆಮಾರುಗಳನ್ನೇ ನಾಶ ಮಾಡುವ ದುಷ್ಟ ಆಲೋಚನೆ ಇವನದು.

ಹೀಗೆ ಲೋಕ ಕಂಟಕರು ನಾಯಕರಾಗಿ ಅವರ ಉಪಟಳ ಹೆಚ್ಚಾದಾಗಲೇ ಧರ್ಮರಕ್ಷಕರು ಬಾಯ್ಬಿಡುವುದು. ಎಲ್ಲಾ ದೇವತೆಗಳು, ಋಷಿಮುನಿಗಳೂ ಸೇರಿ ಭಗವಾನ್ ವಿಷ್ಣುವಿನಲ್ಲಿ ಪ್ರಾರ್ಥಿಸಿದರು. 'ನರಕಾಸುರನೆಂಬ ಸಮಸ್ಯೆಯನ್ನು ಪರಿಹರಿಸಬೇಕು' ಎಂದು. ನರಕನಿಗೆ ಬ್ರಹ್ಮನ ವರವಿದ್ದುದರಿಂದ ಬ್ರಹ್ಮನಿಗಿಂತ ಹಿರಿಯನಾದ ವಿಷ್ಣುವಿನಿಂದ ಮಾತ್ರ ಅವನಿಗೆ ಮರಣ.

### ಸತ್ಯಭಾಮೆಯ ನೆರವು

ವಿಷ್ಣು ಕೃಷ್ಣನಾಗಿ ಅವತರಿಸಿದಾಗ ನರಕಾಸುರನನ್ನು ಕೊಲ್ಲಲು ಬರುತ್ತಾನೆ. ಜೊತೆಗೆ ಪತ್ನಿ ಸತ್ಯಭಾಮೆ. ಬ್ರಹ್ಮನಿಂದ ನರಕನಿಗೆ ಅನೇಕ ದುರ್ಗಗಳಿಂದ ಕೂಡಿ ಸುಭದ್ರವಾದ ಪ್ರಾಗ್ ಜ್ಯೋತಿಷ(ಅಸ್ಸಾಂ) ಎಂಬ ನಗರವೂ ಉಡುಗೊರೆಯಾಗಿ ಲಭಿಸುತ್ತ. ಅಭೇದ್ಯವಾದ ಎಲ್ಲಾ ದುರ್ಗಗಳನ್ನೂ ಭೇದಿಸಿ ಕೃಷ್ಣನು ಭಾಮೆಯೊಡನೆ ನಗರ ಪ್ರವೇಶಿಸಿದ. ಘೋರ ಯುದ್ಧದಲ್ಲಿ ನರಕನ ಮಂತ್ರಿ - ಪುತ್ರರು ಸತ್ತರು.

ಕೃಷ್ಣನು ಆಯಾಸಗೊಂಡವನಂತೆ ಕಂಡ. ಕೂಡಲೇ ಭಾಮೆಯೇ ಧನುರ್ಬಾಣ ಹಿಡಿದು ನರಕನೊಡನೆ ಹೋರಾಡಿದಳು. ಹೆಣ್ಣು ಕೆರಳಿದರೆ ಕೆಚ್ಚಿಗೂ ಸೈ! ಎಂಬುದನ್ನು ಭಾಮೆ ಎಂದೋ ತೋರಿಸಿಬಿಟ್ಟಳು. ಅಕ್ಷರಶಃ ಭಾಮೆಯ ಪರಾಕ್ರಮಕ್ಕೆ ನರಕಾಸುರ ಹೆದರಿದ. ಅವಳ ಬಾಣಗಳ ದಾಳಿಯ ವೇಗಕ್ಕೆ ಇವನು ಶಸ್ತ್ರ, ಸಾರಥಿ, ರಥವನ್ನೆಲ್ಲಾ ಕಳೆದುಕೊಂಡು ಪರಾಜಿತನಾಗಿ ರಥವನ್ನೆಲ್ಲಾ ಕಳೆದುಕೊಂಡು ಪರಾಜಿತನಾಗಿ ಬರಿಗೈಲಿ ರಣರಂಗದಲ್ಲಿ ನಿಂತುಬಿಟ್ಟ.

### ಕೃಷ್ಣನಿಗಾಗಿ ಕಾದ ನೀರೆಯರು

ಕೃಷ್ಣನು ಭಾಮೆಯ ಅಭೂತಪೂರ್ವ ಶೌರ್ಯ ಸಾಹಸಕ್ಕೆ ಅವಳನ್ನು ಅಭಿನಂದಿಸಿದ. ಕೃಷ್ಣನು ಹೀಗೆ ಹೆಣ್ಣಿನ ಅಸಮಾನ ಸಾಮರ್ಥ್ಯವನ್ನು ಲೋಕಕ್ಕೆ ತಿಳಿಯಪಡಿಸಿದ. ಬಳಿಕ ನರಕನನ್ನು ಚಕ್ರದಿಂದ ತುಂಡರಿಸಿ ಭೂಭಾರ ತಗ್ಗಿಸಿದ.

ನರಕಾಸುರನ ತಾಯಿ, ವಿಷ್ಣುವಿನ ಮಡದಿ ಭೂದೇವಿಯು ಮೈತಾಳಿ ಬಂದು ಕೃಷ್ಣನಿಗೆ ನಮಿಸಿ ಮೊಮ್ಮಗ ಭಗದತ್ತನನ್ನು ಮುಂದೆ ತಂದಳು. ಕೃಷ್ಣನು ಭಗದತ್ತನಿಗೆ ಪಟ್ಟಗಟ್ಟಿದ. ಸ್ವತಃ ಭೂದೇವಿಯೇ ತನ್ನ ದುಷ್ಟ ಪುತ್ರನನ್ನು ಸಂಹರಿಸುವಂತೆ ಪತಿಯಲ್ಲಿ ಬೇಡಿದ್ದಳು. ಲೋಕಕಲ್ಯಾಣಕ್ಕಾಗಿ ಹೆತ್ತ ದುಷ್ಟಮಗನನ್ನು ಕೂಡಾ ಕೈಬಿಡಬೇಕೆಂಬುದನ್ನು ಕಲಿಸಿದ ಶ್ರೇಷ್ಠ, ದಿಟ್ಟ ತಾಯಿಯೀಕೆ, ಮತ್ತೂ ಉತ್ತಮರಾದ ಅನೇಕ ಸ್ತ್ರೀಯರು ಅರಮನೆಯ ಸೆರೆಯಲ್ಲಿ ಬಂಧಿಗಳಾಗಿದ್ದರೆಂದು ತಿಳಿದು, ಅವರನ್ನು ಬಿಡಿಸಲು ಅತ್ತ ಬಂದಾಗ ಕೃಷ್ಣ ಕಂಡಿದ್ದು ಹದಿನಾರು ಸಾವಿರದ ನೂರು ಮಂದಿ ಕುಮಾರಿಯರನ್ನು ಎಲ್ಲರೂ ಶ್ರೇಷ್ಠರು. ಕೃಷ್ಣನ ಭಕ್ತೆಯರು.ಕಷ್ಟಗಳ ಕೂಪದ ಸೆರೆವಾಸದಲ್ಲೂ ವ್ರತನಿಷ್ಠೆಯರಾಗಿದ್ದರು.

ಇವರಲ್ಲಿ ಹಲವಾರು ದೇವಕನ್ಯೆಯರೂ, ಗಂಧರ್ವಕನ್ಯೆಯರೂ ಇದ್ದರು. ಎಲ್ಲರೂ ಹಿಂದಿನ ಜನ್ಮದಲ್ಲಿಯೇ ಭಗವದವತಾರವನ್ನು ನೇರವಾಗಿ ಕಂಡು ಅನುಭವಿಸಿ ಆನಂದಿಸಬೇಕೆಂದು ತೀವ್ರವಾಗಿ ಬಯಸಿದ್ದವರು. ಬಹಳ ಮಂದಿ ಅಗ್ನಿದೇವನ ಪುತ್ರರಾಗಿದ್ದವರು. ಕೃಷ್ಣಾವತಾರದಲ್ಲಿ ಅವನನ್ನು ಪತಿಯಾಗಿ ಪಡೆಯಬೇಕೆಂದು ಆಸೆಪಟ್ಟವರು. ಅದಕ್ಕಾಗಿ ಹೆಣ್ಣಾಗಿ ಹುಟ್ಟ ಬೇಕೆಂದು ದೀರ್ಘಕಾಲ ಉತ್ತಮವಾದ ತಪವನ್ನಾಚರಿಸಿದ್ದರು. ವರ ಪಡೆದ ಬಳಿಕ ಇಂದಿನ ಬದರಿ ಕ್ಷೇತ್ರದಲ್ಲಿ ನಾರಾಯಣನ ಸೇವೆ ಮಾಡಿದರು. ಅಪಾರ ಪುಣ್ಯ ಹೊತ್ತು ರಾಜರ ಕುಲದಲ್ಲಿ ಕ್ಷತ್ರಿಯ ಕನ್ಯೆಯರಾಗಿ ಹುಟ್ಟಿ ಕೃಷ್ಣನಿಗಾಗಿ ಕಾದರು. ಹಾಗೆ ಕಾಯ್ದವರೆಲ್ಲ ನರಕನ ಸೆರೆಯಲ್ಲಿ ಒಂದೆಡೆ ಸೇರಿದ್ದರು.

### ಕಲ್ಯಾಣಕ್ಕಾಗಿ ಕೋರಿಕೆ

ಎಷ್ಟೋ ದಿನಗಳಿಂದ ಅನ್ನ - ಪಾನ - ಸ್ನಾನ ಕಾಣದ ಅವರಿಗೆ ಕೃಷ್ಣ ಕೂಡಲೇ ಅದಕ್ಕೆಲ್ಲಾ ವ್ಯವಸ್ಥೆಮಾಡಿದ. ಕೃಷ್ಣನನ್ನು ಕಂಡ ಆನಂದದಲ್ಲಿ ಅವರೆಲ್ಲ ಮಿಂದು ಹೊಸಬಟ್ಟೆಯುಟ್ಟು ಉಂಡು ಮತ್ತೆ ಕೃಷ್ಣನ ಮುಂದೆ ಬಂದರು. ಅವರೆಲ್ಲರನ್ನೂ ಕೃಷ್ಣನು ತವರಿಗೆ ಸೇರಿಸಲು ಯತ್ನಿಸಿದಾಗ ಯಾವ ಯುವತಿಯೂ ಮನೆಗೆ ಮರಳಲು ಒಪ್ಪಲಿಲ್ಲ. ನರಕನ ಸೆರೆಯಲ್ಲಿದ್ದ ನಮ್ಮನ್ನು ಬೇರೆ ಯಾರೂ ವರಿಸುವುದಿಲ್ಲ. ನೀನೇ ನಮ್ಮನ್ನು ವಿವಾಹವಾಗಿ ಅನುಗ್ರಹಿಸು' ಎಂದು ಪ್ರಾರ್ಥಿಸಿದರು.

ಅವರ ಹುಟ್ಟಿನ ಹಿನ್ನೆಲೆ, ಉದ್ದೇಶ ತಿಳಿದಿದ್ದ ಕೃಷ್ಣ ಎಲ್ಲರನ್ನೂ ವರಿಸಿದ. ಒಬ್ಬೊಬ್ಬರಿಗೂ ಪ್ರತ್ಯೇಕ ಅರಮನೆಯ ವ್ಯವಸ್ಥೆ ಮಾಡಿದ. ಕೃಷ್ಣನು ಅವರ ಬದುಕು ಸಾರ್ಥಕಗೊಳಿಸಿದ. ಕೃಷ್ಣನು ತನ್ನ ಅವತಾರದಲ್ಲಿ ಮಡದಿಯರಾಗಿ ಬಂದ ಹೆಣ್ಣಿಗೆ ಕೊಟ್ಟ ಪ್ರಾಮುಖ್ಯತೆಯನ್ನು ಇಲ್ಲಿ ಗಮನಿಸಬೇಕು. ಭಾಮೆಯ ಪರಾಕ್ರಮ. ಭೂದೇವಿಯ ಧೀರತೆ, ಹದಿನಾರು ಸಾವಿರದ ನೂರು ಮಂದಿಯ ಭಕ್ತಿ - ಪ್ರೇಮಗಳು ಇಲ್ಲಿ ಮನನೀಯವಾಗಿದೆ.

ಶ್ರೀ ಮದ್ಭಗವದ್ಗೀತೆಯಲ್ಲಿ ತಿಳಿಸಿರುವಂತೆ ಶ್ರೀ ಕೃಷ್ಣನ ಸಾನ್ನಿಧ್ಯವಿರುವ ವಿಭೂತಿ ರೂಪಗಳು ಈ ಕೆಳಗಿನಂತಿವೆ

ನೀರಿನ ರುಚಿ
ಸೂರ್ಯನ ಬೆಳಕು
ಭೂಮಿಯ ಪರಿಮಳ
ಅಗ್ನಿಯ ತೇಜಸ್ಸು
ಜೀವಿಗಳ ಜೀವ
ತಪಸ್ವಿಯ ತಪ
ಎಲ್ಲ ಅಸ್ತಿತ್ವಗಳ ಮೂಲ ಆಕರ

ರಾಗ - ಕಾಮ ಯುಕ್ತಬಲಾಶಾಲಿಗಳ ಬಲ
ಆದಿತ್ಯರಲ್ಲಿ - ವಿಷ್ಣು
ನಕ್ಷತ್ರಗಳಲ್ಲಿ - ಚಂದ್ರ
ಜ್ಯೋತಿರ್ಮಯಿನಿ ಕಾಯಗಳಲ್ಲಿ - ಸೂರ್ಯ
ಮರುತರಲ್ಲಿ - ಮರೀಚಿ
ವೇದಗಳಲ್ಲಿ - ಸಾಮವೇದ
ದೇವತೆಗಳಲ್ಲಿ - ಇಂದ್ರ

ಪುರೋಹಿತರಲ್ಲಿ - ಬೃಹಸ್ಪತಿ
ಸೇನಾಧಿಪತಿಗಳಲ್ಲಿ - ಕಾರ್ತಿಕೇಯ
ಸರಸ್ಸುಗಳಲ್ಲಿ - ಸಾಗರ
ಮಹರ್ಷಿಗಳಲ್ಲಿ - ಭೃಗು
ಕಂಪನಗಳಲ್ಲಿ - ಓಂಕಾರ

ವೃಕ್ಷಗಳಲ್ಲಿ - ಅಶ್ವತ್ಥ
ದೇವರ್ಷಿಗಳಲ್ಲಿ - ನಾರದ
ಗಂಧರ್ವರಲ್ಲಿ - ಚಿತ್ರರಥ
ಸಿದ್ಧರಲ್ಲಿ - ಕಪಿಲಮುನಿ

ಗೋವುಗಳಲ್ಲಿ - ಸುರಭಿ
ಪ್ರಜಾಸೃಷ್ಟಿಯ ಕಾರ್ಯಗಳಲ್ಲಿ - ಕಂದರ್ಪ
ಸರ್ಪಗಳಲ್ಲಿ - ವಾಸುಕಿ
ಬಹು ಹೆಡೆಗಳ ನಾಗರಗಳಲ್ಲಿ - ಅನಂತ
ಆಲವಾಸಿಗಳಲ್ಲಿ - ವರುಣ
ಪಿತೃಗಳಲ್ಲಿ - ಅರ್ಯಮಾ

ದಾನವರಲ್ಲಿ - ಪ್ರಹ್ಲಾದ
ನಾಶ ಕಾರಕರಲ್ಲಿ - ಕಾಲ
ಪ್ರಾಣಿಗಳಲ್ಲಿ - ಸಿಂಹ
ಪಕ್ಷಿಗಳಲ್ಲಿ - ಗರುಡ
ಪರಿಶುದ್ಧಗೊಳಿಸುವವರಲ್ಲಿ - ವಾಯು

ಅಕ್ಷರಗಳಲ್ಲಿ - ಅ
ಸಮಾಸಗಳಲ್ಲಿ - ದ್ವಂದ್ವ ಸಮಾಸ
ಹುಟ್ಟಿ ಬೆಳೆಯುವ ಎಲ್ಲದರ - ಉತ್ಪತ್ತಿ ತತ್ತ್ವ
ಮೋಸಗಾರರಲ್ಲಿ - ಜೂಜು
ಸಾಹಸಿಗಳ - ಸಾಹಸ
ತೇಜಸ್ವಿಗಳ - ತೇಜಸ್ಸು

ಜಯಶಾಲಿಗಳ - ಜಯ
ಬಲಿಷ್ಠರ - ಬಲ
ವೃಷ್ಣಿಗಳಲ್ಲಿ - ವಾಸುದೇವ
ಪಾಂಡವರಲ್ಲಿ - ಅರ್ಜುನ
ಋಷಿಗಳಲ್ಲಿ - ಉಶನಾ

ಇಂದ್ರಿಯಗಳಲ್ಲಿ - ಮನಸ್ಸು
ಜೀವಗಳ - ಚೇತನ
ಯಕ್ಷರಾಕ್ಷಸರಲಿ - ಕುಬೇರ
ರುದ್ರರಲ್ಲಿ - ಶಿವ
ವಸುಗಳಲ್ಲಿ - ಅಗ್ನಿ
ಪರ್ವತಗಳಲ್ಲಿ - ಮೇರು
ಅಶ್ವಗಳಲ್ಲಿ - ಉಚ್ಚೈಶ್ರವ
ಆನೆಗಳಲ್ಲಿ - ಐರಾವತ
ಮಾನವರಲ್ಲಿ - ರಾಜ
ಆಯುಧಗಳಲ್ಲಿ - ವಜ್ರಾಯುಧ

ಶಸ್ತ್ರಧಾರಿಗಳಲ್ಲಿ - ರಾಮ
ಮೀನುಗಳಲ್ಲಿ - ಮಕರ
ನದಿಗಳಲ್ಲಿ - ಗಂಗೆ
ವಿದ್ಯೆಗಳಲ್ಲಿ - ಆಧ್ಯಾತ್ಮಿಕ ವಿದ್ಯೆ
ತಾತ್ವಿಕರಲ್ಲಿ - ನಿರ್ಣಾಯಕ ಸತ್ಯ

ದಮನಕೋರರಲ್ಲಿ - ಶಿಕ್ಷೆ
ಜಯವನ್ನು ಅರಸುವವರಲ್ಲಿ - ನೀತಿ
ಗುಹ್ಯ ವಿಜ್ಞಾನಗಳಲ್ಲಿ - ಮೌನ
ಜ್ಞಾನಿಗಳ - ಜ್ಞಾನ ಎಲ್ಲ ಅಸ್ತಿತ್ವಗಳ ಮೂಲ ಬೀಜ

ಈ ದಿವ್ಯ ವಿಭೂತಿಗಳಿಗೆ ಕೊನೆಯೇ ಇಲ್ಲ ; ಇವು ಕೇವಲ ಸಾಂಕೇತಿಕವಾಗಿ ಮಾತ್ರ.

# ರಂಗವಲಿ(ದ) ಜಗನ್ನಾಥದಾಸರು
# (ಕ್ರಿ.ಶ. 1728 - 1809)

- ಡಾ|| ರಾಮಚಂದ್ರದಾಸ್ ಸಿ.ಜೆ.



ಗಾಳಿ ಬಂದಾಗ ತೂರಿಕೋ ಎಂಬಂತೆ ಮಹಾತ್ಮರು ಅವತರಿಸಿದಾಗ,ಅವರು ನೀಡುವ ಮಾರ್ಗದರ್ಶನದಂತೆ ನಡೆದು ಉದ್ಧಾರವಾದವರು ಬಹಳ ಹಾಗೆಯೇ ಅವರನ್ನು ನಿಂದಿಸಿ ದುಷ್ಫಲಗಳನ್ನು ಪಡೆದವರೇನೂ ಕಡಿಮೆ ಇಲ್ಲ.ಹೈದರಾಬಾದ್‌ನ ನಿಜಾಮರು, ವಿಜಾಪುರದ ಸುಲ್ತಾನರು, ಮೈಸೂರಿನ ಹೈದರಾಲಿ, ಆದಿವಾನಿಯ ನವಾಬರ ಕಾಲದಲ್ಲಿ ಉದ್ಭವವಾದ ಕ್ಲಿಷ್ಟ ಪರಿಸ್ಥಿತಿಯಲ್ಲಿ,ಧರ್ಮಾಚರಣೆ ಬಹು ಕಷ್ಟವಾಗಿತ್ತು. ಭಗವಂತನನ್ನು ನಂಬಿ, ಉಪಾಸಿಸುವವರಿಗೆ ಸಾಧನೆ ಮತ್ತು ಜಯ ನಿಶ್ಚಿತ, ಇದಕ್ಕೆ ಉದಾಹರಣೆ ಪ್ರಹ್ಲಾದ, ಈ ಪ್ರಹ್ಲಾದನ ಅನುಜನಾದ ಸಹ್ಲಾದ, ಕರ್ಮಜ ದೇವತೆಯಾಗಿದ್ದು, ಪಾಮರರ ಉದ್ಧಾರಕ್ಕಾಗಿ, ಪುರಂದರರದಾಸರಿಂದ ಪುನರುಧೃತವಾದ ಭಾಗವತ ಧರ್ಮಕ್ಕೆ ನವ ಚೈತನ್ಯವನ್ನುಂಟು ಮಾಡಲು ಅವತರಿಸಿದ ಮಹಾಪುರುಷರು ಇವರು, ಪ್ರಹ್ಲಾದ ರಾಜರಿಂದ ಪಡೆದ ಉಪದೇಶ, ಜ್ಞಾನ ಇವುಗಳನ್ನು ಲೋಕೋಪಕಾರಕ್ಕಾಗಿ ಪೂರ್ಣ ಪ್ರಮಾಣದಲ್ಲಿ ವಿನಿಯೋಗಿಸಲ್ಪಟ್ಟಿದ್ದರಿಂದ, ಹರಿಕಥಾಮೃತ ಸಾರದಂತಹ ಮಹಾನ್ ಗ್ರಂಥದ ಕರ್ತೃಗಳಾಗಿ ಲೋಕಮಾನ್ಯರಾದವರು ಜೀವನಾನುಭವ ಯುಕ್ತ ತತ್ವಜ್ಞಾನ ದ್ಯೋತಕವಾದ 'ತತ್ವಸುವಾಲಿಯಲ್ಲಿ',ಭಗವಂತನನ್ನು ಒಲಿಸಿಕೊಳ್ಳಲು ಅನುಸಂಧಾನ ಪೂರ್ವಕ ಸ್ಮರಣೆಯೊಂದೇ, ಉಪಾಸಕರಿಗೆ ಸಾಧನೆಯೆಂದು, "ಉಂಡು ಉಟ್ಟಿದ್ದೆಲ್ಲ ರಂಗನ ಸೇವೆಯೆನ್ನಿ, ಕಂಡ ಕಂಡದ್ದು ಹರಿ ಪ್ರೀತಿಯೆನ್ನಿ..." ಎಂದಿದ್ದಾರೆ. ಇದರ ಮುಂದುವರಿದ ಭಾಗವೇ ಹರಿಕಥಾಮೃತಸಾರ ಗ್ರಂಥ.ಇದರಲ್ಲಿ ಆದಿಯಿಂದ ಅಂತ್ಯದವರೆಗೂ ಬಿಂಬೋಪಾಸನೆಯನ್ನೇ ಪ್ರತಿಪಾದಿಸಿದ್ದಾರೆ. ಭಗವಂತನು "ಎಲ್ಲರೊಳು ತಾನಿಪ್ಪ, ತನ್ನೊಳಗೆಲ್ಲರನು ಧರಿಸಿಹನು ಅಪ್ರತಿಮಲ್ಲ ಮನ್ಮಥ ಜನಕ." ಎನ್ನುತ್ತಾ ಇಲ್ಲಿ ಭಗವಂತನ ವ್ಯಾಪ್ತತ್ವವನ್ನು "ವಿತ್ತದೇಹಾಗಾರಾ ದಾಂಪತ್ಯ ಮಿತ್ರಾದಿಗಳೊಳಗೆ..ಸತ್ಯ ಸಂಕಲ್ಪಾನುಸಾರದಿ ನಿತ್ಯದಲಿ ತಾ ಮಾಡಿ ಮಾಡಿಪನೆಂದು ಸ್ಮರಿಸುತಿರು" ಎನ್ನುತ್ತಾ ಹರಿಯ ಕರ್ತೃತ್ವವನ್ನು ಮತ್ತು ಅರಿಯದಿದ್ದರು, ಎಮ್ಮೊಳಿದ್ದನವರತ ವಿಷಯಗಳುಂಬ, ಜ್ಞಾನೋತ್ತರದಿ ತನಗರ್ಪಿಸಲು... ಎನ್ನುವಲ್ಲಿ ಪರಮಾತ್ಮನ ನಿಯಾಮ ಕತ್ವ ವನ್ನು ಪ್ರತಿಪಾದಿಸಿದ್ದಾರೆ. ಇದನ್ನೇ ಬಿಂಬಕ್ರಿಯವೆಂಬುದಾಗಿ ವರ್ಣಿಸಿದ್ದಾರೆ.

ಮಹಾನುಭಾವರಾದ ಎಲ್ಲ ದಾಸರಾಯರು ಜೀವನದ ಘಟನೆಗಳು ಪ್ರಮೇಯ ಪುಂಜವಾಗಿರುತ್ತವೆ. ಅವರ ಕೃತಿಗಳಲ್ಲಿ ಈ ಪ್ರಮೇಯಗಳು ಪ್ರತಿಫಲಿತಗೊಂಡಿರುತ್ತವೆ. ಇವರು ಪೂರ್ವ ಜನ್ಮದಲ್ಲಿ ಕುರಿಕಾಯುವವನಾಗಿ ಹುಟ್ಟಿದ್ದು, ಕನಕದಾಸರ ಮಾತಿನಂತೆ, ಶ್ರೀ ವ್ಯಾಸರಾಯರು, ಶ್ರೀ ವಾದಿರಾಜರು, ಶ್ರೀ ಪುರಂದರರದಾಸರಲ್ಲಿ, ನೀವು ಮೂರು ಜನರು "ನಗ್ತಾ, ಅಳ್ತಾ ಇದ್ರಲ್ಲ, ಅದ್ರಾಗೊಂದೀಸು. ಇದ್ರಾಗೊಂದೀಸು ಕೊಟ್ಟುಬಿಡ್ರಿ ಬುದ್ದಿಯೋರಾ" ಎನ್ನುವ ಚಮತ್ಕಾರದ ಮಾತನ್ನು ಕೇಳಿ, ಆ ಮೂವರೂ ನಗುತ್ತಾ "ತಥಾಸ್ತು" ಎಂಬುದಾಗಿ ಅನುಗ್ರಹಿಸಿದರು.ಜಗನ್ನಾಥದಾಸರು ಭಗವದ್ಭಕ್ತರ ಲಕ್ಷಣವನ್ನು ವರ್ಣಿಸುವಾಗ "ನಗುವಾಽರೋ ರೋದಿಸುಽವರೋ, ನಾಟ್ಯಾವಾಡುವರೋ.. ಎಂದಿದ್ದಾರೆ ಇದು ಅವರ ಅನುಭವದ ಮಾತು.

ದೈವಾಂಶ ಸಂಭೂತರಾದ ಆ ನಾಲ್ವರ ಪೂರ್ಣಾನುಗ್ರಹದಿಂದ, ರಾಯಚೂರು ಜಿಲ್ಲೆಯ ಮಾನವಿ ತಾಲೂಕಿನ, ಬ್ಯಾಗವಾಟಗ್ರಾಮದಲ್ಲಿ ದಿನಾಂಕ 27-7-1728ರಂದು, ನರಸಿಂಹಾಚಾರ್ಯರು ಮತ್ತು ಲಕ್ಷ್ಮೀಬಾಯಿಯವರ ಪುತ್ರರಾಗಿ ಅವ

ತಳಿಸಿ, ಶ್ರೀನಿವಾಸ ನಾಮದಿಂದ ಪ್ರಖ್ಯಾತರಾಗಿ ಸಚ್ಛಾಸ್ತ್ರಗಳ ಅಧ್ಯಯನ ಮಾಡಿ, ಶ್ರೀ ರಾಘವೇಂದ್ರತೀರ್ಥರ ಪೀಠಿಗೆಯಲ್ಲಿ ಬಂದಥ ಶ್ರೀ ವರದೇಂದ್ರತೀರ್ಥ ಶ್ರೀಗಳವರಲ್ಲಿ, ವ್ಯಾಸತ್ರಯ ಶ್ರೀ ಮನ್ಯಾಯಸುಧಾದಿ ಗ್ರಂಥಗಳ ಅಧ್ಯಯನ ಪೂರೈಸಿ, ಅಸದೃಶ ಪಾಂಡಿತ್ಯಗಳಿಸಿ, ಶ್ರೀಗಳವರ ಆಜ್ಞೆಯಂತೆ ಗೃಹಸ್ಥಾಶ್ರಮ ಸ್ವೀಕರಿಸಿ ಮಾನವಿಯಲ್ಲಿ ನೆಲೆಸಿದರು. ಬರಬರುತ್ತಾ ಶ್ರೀನಿವಾಸಚಾರ್ಯರು ಕನ್ನಡ ಭಾಷೆಯಲ್ಲಿ ಮಾತನಾಡಿದರೇ ಮೈಲಿಗೆ ಎನ್ನುವಷ್ಟರ ಮಟ್ಟದಲ್ಲಿ ವ್ಯವಹರಿಸುತ್ತಿದ್ದರು. ಇವರಿಗೆ ಕನ್ನಡದಲ್ಲಿ ದೇವರನಾಮ ಇತ್ಯಾದಿಗಳನ್ನು ರಚಿಸುತ್ತಿರುವ ಹರಿದಾಸರೆಂದರೆ ಆಗುತ್ತಿರಲಿಲ್ಲ. ಸ್ವತಃ ಇವರ ತಂದೆಯವರಾದ ನರಸಿಂಹ ದಾಸರನ್ನು ಕೂಡಾ “ನಮ್ಮ ಆಚಾರ್ಯರು ” ಎಂದೇ ಸಂಬೋಧಿಸುತ್ತಿದ್ದರು.

ಶ್ರೀ ವಿಜಯದಾಸರು, ಶ್ರೀ ಗೋಪಾಲದಾಸರು, ವ್ಯಾಸತತ್ವಜ್ಞರೂ, ಕಲ್ಲೂರು ಸುಬ್ಬಣ್ಣದಾಸರು , ದಿವಾನ ತಿಮ್ಮಣ್ಣಯ್ಯನವರು ಇವರ ಸಮಕಾಲೀನರಾಗಿದ್ದು, ಕನ್ನಡದಲ್ಲಿ ಸಾಹಿತ್ಯ ರಚಿಸುತ್ತಿದ್ದರು. ಶ್ರೀನಿವಾಸಾಚಾರ್ಯರ ಯೋಗ್ಯತೆಯನ್ನು ಅರಿತಿದ್ದ ಭೃಗು ಋಷಿಗಳಂಶಜರಾದ ವಿಜಯದಾಸರು ಇವರಿಂದ ಮುಂದೆ ಆಗಬೇಕಾಗಿರುವ ಮಹತ್ಕಾರ್ಯದ ಬಗ್ಗೆ ಚಿಂತಿಸಿ ಎಚ್ಚರಿಸಲು ಬಂದಾಗ, ಅವರ ಮಾತನ್ನು ಧಿಕ್ಕರಿಸಿದ ಪರಿಣಾಮವಾಗಿಕ,ಪರಿಣಾಮ ಶೂಲೆಯಿಂದ ಬಳಲಿ, ತಿರುಪತಿ, ಘಟಿಕಾಚಲದಲ್ಲಿ ಸೇವೆ ಮಾಡಿದರೂ ಪ್ರಯೋಜನವಾಗದೆ ಮಂತ್ರಾಲಯಕ್ಕೆ ಬಂದು ರಾಯರ (ಪ್ರಹ್ಲಾದ ರಾಜರ) ಸೇವೆ ಮಾಡಿದಾಗ, “ಸ್ವೋತ್ತಮ ದ್ರೋಹದ ಪರಿಣಾಮವೇ ಈ ಪರಿಣಾಮ ಶೂಲೆ, ಆದ್ದರಿಂದ, ಚೀಕಲಪರವಿಯಲ್ಲಿರುವ ವಿಜಯದಾಸರಲ್ಲಿ ಶರಣಾದರೆ ಮಾತ್ರ ನಿನಗೆ ಒಳ್ಳೆಯದಾಗುತ್ತದೆ.” ಎಂದು, ಸ್ಪಷ್ಟ ಸೂಚನೆಯಾಗಿ,ವಿಜಯದಾಸರಲ್ಲಿ ಶರಣಾದಾಗ, ವಿಜಯದಾಸರು, “ನಿನ್ನ ಸ್ವರೂಪೋಧಾರಕ ಗುರು ಭಾಗಣ್ಣ ದಾಸರಾದ್ದರಿಂದ ನೀನು ಉತ್ತನೂರಿಗೆ ಹೋಗಿ ಅವರಲ್ಲಿ ಶರಣಾಗು ಎಂದು ಸೂಚಿಸಿದರು. ಭಾಗಣ್ಣದಾಸರು (ಗೋಪಾಲದಾಸರು) ವಿಜಯದಾಸರ ಸೂಚನೆಯಂತೆ ಅವರ ರೋಗ ಗುಣಪಡಿಸಿ,“ಎನ್ನ ಬಿನ್ನಪ ಕೇಳೋ, ಧನ್ವಂತ್ರಿ ದಯಮಾಡೋ,ಸಣ್ಣವನು ಇವ ಕೇವಲ..”ಎಂದು ಪರಮಾತ್ಮನನ್ನು ಸ್ತುತಿಸಿ,ತಮ್ಮ ಆಯುಸ್ಸಿನಲ್ಲಿ 40 ವರ್ಷವನ್ನು, ಅವರಿಗೆ ಧಾರೆಯೆರೆದು, ಅನುಗ್ರಹಿಸಿ, ಪಾಂಡುರಂಗನ ಸೇವೆ ಮಾಡಲು ಸೂಚಿಸಿದರು. ಅದರಂತೆ ಪಂಢರಾಪುರದಲ್ಲಿ ಭೀಮರಥೀ ನದಿಯಲ್ಲಿ ಸ್ನಾನ ಮಾಡಲು ಮುಳುಗು ಹಾಕಿದಾಗ ಒಂದು ಶಿಲೆಯು ಆಚಾರ್ಯರಿಗೆ ದೊರಕಿ, ಅದರಲ್ಲಿ“ಜಗನ್ನಾಥವಿಠಲ”ಎಂದು ಕೆತ್ತಲಾಗಿತ್ತು ಆ ಕ್ಷಣದಿಂದಲೇ ಇವರ ಚರ್ಯೆ ಪೂರ್ಣವಾಗಿ ಬದಲಾಗಿ “ಎಂದು ಕಾಂಬೆನೋ ಪಾಂಡುರಂಗ ಮೂರುತಿಯ”- ಎಂಬುದಾಗಿ ಮೈಮರೆತು ಹಾಡಿ ನರ್ತನ ಮಾಡಿದಾಗ, ಪರಮಾಚ್ಛಾದಕ ತೆರೆಯು ಸರಿಯಿತು.

ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೇ ಸರ್ವ ಸಂಶಯಾಃ ।
ಕ್ಷೀಯಂತೆ ಚಾಸ್ಯ ಕರ್ಮಾಣಿ । ತಸ್ಮಿನ್ ದೃಷ್ಟೇ ಪರಾವರೇ ॥

ಎಂಬ ಉಪನಿಷದ್ವಾಕ್ಯದಂತೆ ಬಿಂಬಾಪರೋಕ್ಷವಾಯಿತು. ಅಂದಿನಿಂದ “ಜಗನ್ನಾಥದಾಸ” ರೆಂದು ಪ್ರಖ್ಯಾತಿ ಹೊಂದಿದರು. ಅವರ ಇಲ್ಲಿಯವರೆಗಿನ ಜೀವನದ ಘಟನೆಗಳು ಅವರ “ಫಲವಿದು ಬಾಳ್ದುದಕೆ…” ಕೃತಿಯಲ್ಲಿ ಪ್ರತಿ ಬಿಂಬಿತವಾಗಿದೆ.

ದಾಸರ ಮುಖ್ಯ ಶಿಷ್ಯರಾದ ಪ್ರಾಣೇಶದಾಸರು ಖಂಡಿತವಾದಿಗಳು, ಅಪರೋಕ್ಷಜ್ಞಾನಿಗಳು, ಕರ್ಜಗಿಯಲ್ಲಿ ಪ್ರಾಪಂಚಿಕ ಸುಖ ಲೋಲುಪನಾಗಿದ್ದ ದಾಸಪ್ಪನನ್ನು ಕುರಿತು ಆದದ್ದಾಯಿತು ಇನ್ನಾದರೂ ಒಳ್ಳೆ ಹಾದಿ ಹಿಡಿಯೋ ಪ್ರಾಣಿ…ಎಂಬುದಾಗಿ ಖಂಡಿಸಿ, ಅವರನ್ನು ತಮ್ಮ ಗುರುಗಳ ಮೂಲಕ, “ಶ್ರೀ ದವಿಠಲ” ದಾಸರನ್ನಾಗಿಸಿ, ಹರಿಕಥಾಮೃತಸಾರಕ್ಕೆ ಫಲಸ್ತುತಿಯನ್ನು ಬರೆಸಲು ವೇದಿಕೆ ಸಿದ್ಧ ಮಾಡಿದರು.

ದಾಸರು ನಿತ್ಯ ಭಜನೆಯ ಸಮಯದಲ್ಲಿ ರಂಗವಲಿಯನ್ನು ಹಾಕಿ, ಅದರಲ್ಲಿ ಭಗವದ್ರೂಪಗಳ ಚಿಂತನೆ ಮಾಡುತ್ತಿದ್ದರು. ಅದು ಅವರ ಉಪಾಸನಾ ಚಕ್ರವಾಗಿರುತ್ತಿತ್ತು. ಆದ್ದರಿಂದಲೇ ಅವರನ್ನು “ರಂಗವಲಿದಾಸರು” ಎಂದು ಸಂಬೋದಿಸುತ್ತಿದ್ದರು. ಅದೂ ಅಲ್ಲದೆ “ ರಂಗವಲಿದದಾಸರು” ಎಂಬುದಾಗಿಯೂ ಹೆಸರಿದೆ. ಅವರಿಗೆ ಅಂಕಿತವು ಪಾಂಡುರಂಗನ ದಯದಿಂದ ಆತನ ಸನ್ನಿಧಿಯಲ್ಲೇ (ಪಂಢರಾಪುರ) ದೊರೆತು, ಪಾಂಡುರಂಗನಿಂದನಲೇ ಔತಣ ಮಾಡಿಸಿಕೊಂಡು ಬಂದಿದ್ದರಿಂದಲೂ, ಇದೂ ಕೂಡಾ ಅನ್ವರ್ಥಕ ನಾಮವಾಗಿದೆ.

ಶ್ರೀ ಜಗನ್ನಾಥದಾಸರ ಪಾಂಡಿತ್ಯ, ಕವಿತಾಪ್ರೌಢಿಮೆ, ಮತ್ತು ಪ್ರಖ್ಯಾತಿ ಇವುಗಳನ್ನು ಕೇಳಿ, ಶ್ರೀ ಸತ್ಯಬೋಧತೀರ್ಥ ಶ್ರೀಗಳು, ಅವರನ್ನು ಕರೆಸಿಕೊಂಡು ಹೆಚ್ಚು ಕಾಲ ತಮ್ಮ ಬಳಿ ಇರಿಸಿಕೊಂಡರು. ಒಮ್ಮೆ ಶ್ರೀಗಳವರು, ಪೂಜಾ ಸಮಯದಲ್ಲಿ ಅವರ ಪೂರ್ವಾಶ್ರಮದಲ್ಲಿನ ಉಪಾಸ್ಯಮೂರ್ತಿ ಭೂವರಾಹ ಮತ್ತು ಪ್ರಸ್ತುತ ಪೀಠದಲ್ಲಿನ ರಾಮ ರೂಪದ ಉಪಾಸನೆ ಬಗ್ಗೆ

ಆಗುತ್ತಿದ್ದ ಗೊಂದಲಕ್ಕೆ ದಾಸರು ಸೂಕ್ತ ಉತ್ತರ ನೀಡಿ ಪರಿಹರಿಸಿದರು. ಆಗ ಶ್ರೀಗಳವರಿಗೆ, ಹರಿದಾಸರಲ್ಲಿ ಭಗವದನುಗ್ರಹ ಅಪರೋಕ್ಷ ಜ್ಞಾನ, ಶಾಸ್ತ್ರ ಪಾಂಡಿತ್ಯ, ಕವಿತಾ ಪ್ರೌಢಿಮೆ ಇತ್ಯಾದಿಗಳು ಸಮ್ಮಿಳಿತವಾಗಿರುವುದೆಂದು ತಿಳಿದು ಸಂತೋಷಪಟ್ಟರು.

ದಾಸರು ಮಾಡಿರುವ ಉಪಕಾರವನ್ನು ಸ್ಮರಿಸದಿದ್ದರೆ ನಾವು ಕೃತಘ್ನರಾಗುತ್ತೇವೆ. ವಿಧಿ, ನಿಷೇಧ, ಮಡಿ, ಮೈಲಿಗೆಗಳ ಬಗ್ಗೆ ಇರುವ ಸಂಶಯಗಳನ್ನು ಪರಿಹರಿಸಿ, ಶ್ರೀ ಹರಿಗೆ ಸರ್ವದಾ ಭೃತ್ಯನಾಗಿರುವುದೇ ಮೂಲ ಧರ್ಮವೆಂದೂ, ಆತನ ಸ್ಮರಣೆಯೇ ಸ್ವರ್ಗ, ವಿಸ್ಮರಣೆಯೇ ನರಕವೆಂದೂ, ಪೂಜೆಯೆಂದರೆ ಜಗತ್ತಿನಲ್ಲಿ ಭಗವಂತನು ನೀಡಿದ ಎಲ್ಲವೂ ಸಾಧನಗಳೇ ಎಂದು ಅನುಸಂಧಾನ ಮಾಡಿಕೊಂಡು ಅರ್ಚಿಸುವುದೇ ಪೂಜೆ ಎಂಬ ಧೈರ್ಯದ ಮಾತುಗಳನ್ನು ಹೇಳುತ್ತಾ, ನಿನಗಿದ್ದ ಚಿಂತೆ ನಮ್ಮಗಿರುದ್ದಗಿಲ್ಲವೇ ಎಂದು ಪ್ರಶ್ನಿಸಿದ್ದಾರೆ. ಜಗತ್ತಿನ ಸಕಲ ಕಾರ್ಯಗಳಲ್ಲಿ ವ್ಯಾಪ್ತನೂ, ಕರ್ತೃವೂ, ನಿಯಾಮಕನೂ ಶ್ರೀ ಹರಿಯೇ ಆದ್ದರಿಂದ ಎಲ್ಲರೂ ಅಸ್ವತಂತ್ರರೇ, ಆದ್ದರಿಂದ ಅಪರಾಧಿ ನಾನೆಂಬುದುಪಚಾರ ಮಾತ್ರ ನಿನಗೆಪರಾಧಿಯೆಂಬೋದಿಳೆಯೊಳು, ಇಳೆಯೊಳು ಇನ್ನುಂಟೇ ಅಪರಾಧಿಯೆಂಬೋದೇ ಅಪರಾಧ" ಎಂಬುದಾಗಿ ಧೈರ್ಯವನ್ನು ತುಂಬಿದ್ದಾರೆ.

ಸಕಲ ಪಾಮರರಿಗೂ ತಾಯಿಯಂತೆ ಮಮತೆಯಿಂದ ತಿದ್ದಿ, ಬುದ್ಧಿ ಹೇಳಿ ಮಾರ್ಗದರ್ಶನ ಮಾಡಿ ಉದ್ಧರಿಸುತ್ತಿದ್ದ ರಂಗವಲಿ(ದ) ದಾಸರು, ನೀಡಿದ ಹರಿಕಥಾಮೃತಸಾರವೆಂಬ ಕಾವ್ಯರತ್ನ, ತತ್ವಸುವಾಲಿ, ಅನೇಕ ಸುಳಾದಿಗಳು, ಕೀರ್ತನೆಗಳನ್ನು ಕೇವಲ ಪಠಿಸದೆ, ಸ್ವಲ್ಪ ಭಾಗವಾದರೂ ಜೀವನದಲ್ಲಿ ಅನುಸಂಧಾನ ಪೂರ್ವಕವಾಗಿ ಅಳವಡಿಸಿಕೊಂಡಲ್ಲಿ, ಅದೇ ನಾವು ದಾಸರಿಗೆ ತೋರಿಸುವ ಗೌರವ, ಆದರ ಭಕ್ತಿ. ಶಾಲಿವಾಹನ ಶಕೆ 1731 ನೇ ಶುಕ್ಲ ಸಂವತ್ಸರದ ಭಾದ್ರಪದ. ಶುದ್ಧ ನವಮಿ, ಭಾನುವಾರ, ಮೂಲ ನಕ್ಷತ್ರಕ್ಕೆ ಸರಿಯಾಗಿ, ಗೋಪಾಲದಾಸರು, ಜಗನ್ನಾಥದಾಸರಿಗೆ ಆಯುರ್ದಾನ ಮಾಡಿದ ಅವಧಿ ಮುಕ್ತಾಯವಾಗಿದ್ದು, ಅಂದು ಸಂಜೆ ಭಜನೆಯಲ್ಲಿ ದಾಸರು "ಸತತ ಗಣನಾಥ ಸಿದ್ಧಿಯ ನೀವ.." ಎಂಬ ಉಗಾಭೋಗವನ್ನು ಹಾಡಿ, ಲಯಚಿಂತನೆ ಮಾಡುತ್ತಾ ಕುಳಿತಾಗ, ಬ್ರಹ್ಮವೇತ್ತರಿಗಾಗುವಂತೆ, ಅವರನೆತ್ತಿಯು ಸಿಡಿದು, ದಾಸರ ನಿರ್ಯಾಣವಾಯಿತು. ಆಗ ಶ್ರೀದವಿಠಲದಾಸರು.

"ತೆರಳಿದರು ಶ್ರೀ ಜಗನ್ನಾಥ ದಾಸಾರ್ಯರು।
ಶಿರಿಪತಿಯ ಸ್ಮರಿಸಿ ಹರಿಪುರಕೆ ಹರುಷದಲಿ ।
ವರಶುಕ್ಲ ವತ್ಸರದ ಭಾದ್ರಪದ ಸಿತಪಕ್ಷ ।
ಹರಿವಾರ ನವಮಿಯಲಿ....।।

ಎಂಬುದಾಗಿ ದುಃಖದಿಂದ ಗದ್ಗದಿತರಾಗಿ ಸ್ತುತಿಸಿದರು. ಮಾನವಿಯಲ್ಲಿ ದಾಸರು ವಾಸ ಮಾಡುತ್ತಿದ್ದ ಮನೆ ಈಗ ದೇವಾಲಯವಾಗಿದೆ. ಅವರು ಕೂಡುತ್ತಿದ್ದ ಸ್ತಂಭಕ್ಕೆ ಮುಖವಾಡವಿಟ್ಟು ಅವರ ಸನ್ನಿಧಾನವೆಂದು ಪೂಜಿಸಲಾಗುತ್ತಿದೆ. ಇದು ಭಾವುಕರ ಪ್ರಯಾಗ ಕ್ಷೇತ್ರವಾಗಿದೆ.

।।ಶ್ರೀ ಕೃಷ್ಣಾರ್ಪಣಮಸ್ತು।।



ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥ ತಿರುಮಲೆ ತಿರುಪತಿ ದೇವಸ್ಥಾನದವರು ಟೋಲ್ ಫ್ರಿ ನಂಬರ್ ಅನ್ನು ಏರ್ಪಡಿಸಿದ್ದಾರೆ. ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ/ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪ್ರದಿಸಬಹುದು.

ತಿರುಮಲೆ ತಿರುಪತಿ ದೇವಸ್ಥಾನಗಳು
**ಟೋಲ್ ಫ್ರಿ ನಂಬರ್**
**18004254141**

**ಈ ಅವಕಾಶವನ್ನು ಎಲ್ಲರೂ ಉಪಯೋಗಿಸಿಕೊಳ್ಳಿ!**
**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

ಭಾಗವತ ಕಥಾಸಾಗರ

# ಭಕ್ತ ಪ್ರಹ್ಲಾದನ ಉಪದೇಶಗಳು

ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ : ಡಿ.ಎಸ್.ಬದ್ರಿನಾಥ್



ಭಕ್ತ ಪ್ರಹ್ಲಾದನು ಸಮಸ್ತ ಸದ್ಗುಣಗಳನ್ನು ಹೊಂದಿರುವವನು. ಗುರುಗಳು ತನ್ನನ್ನು ತನ್ನ ತಂದೆ ಯೆಡೆಗೆ ಕರೆದುಕೊಂಡು ಹೋಗುತ್ತಲೇ ಆತನು ಸಾಷ್ಟಾಂಗವೆರಗಿದ್ದಾನೆ. ಸಮಸ್ತ ಲೋಕಕ್ಕೇ ಎದೆ ಝಲ್ಲೆನಿಸುವ ಹಿರಣ್ಯ ಕಶಿಪುವಿನ ಹೃದಯವೂ ಸಹ ಇದರಿಂದ ಕರಗಿ ಹೋಗಿದೆ. ಆತನು ತನ್ನ ಮಗನನ್ನು ಎತ್ತಿ ಕೊಂಡಿದ್ದಾನೆ,ಆಲಿಂಗಿಸಿದ್ದಾನೆ.ತೊಡೆಯ ಮೇಲೆ ಕೂರಿಸಿ ಕೊಂಡಿದ್ದಾನೆ.ಪುತ್ರಾಲಿಂಗನಾದ ಆನಂದವನ್ನು ಅನುಭವಿಸಿದ ನಂತರ ಆತನು ವಿಕಸಿತವದನನಾಗಿ ಪುತ್ರನೊಂದಿಗೆ ಹೀಗೆ ನುಡಿದಿದ್ದಾನೆ.

"ಪುತ್ರಾ! ಪ್ರಹ್ಲಾದಾ! ಆಯುಷ್ಮಂತನೇ! ಗುರುಗಳ ಬಳಿ ಇಷ್ಟು ಕಾಲ ನೀನೆಷ್ಟೋ ವಿಷಯಗಳನ್ನು ಕೇಳಿ ತಿಳಿದುಕೊಂಡಿದ್ದೀಯೆ! ಆದರೆ ಅದರಲ್ಲಿ ಯಾವ ವಿಷಯವು ನಿನಗೆ ಸರ್ವೋತ್ತಮವಾದುದೆಂದು ಅನಿಸಿದೆಯೋ ಅದನ್ನು ನನಗೆ ಹೇಳುವವನಾಗು"

ತನ್ನ ತಂದೆ ಈ ರೀತಿಯಾಗಿ ಪ್ರೇಮದಿಂದ ಕೇಳುತ್ತಲೇ ಭಕ್ತಪ್ರಹ್ಲಾದನು ಕೂಡಲೇ ನಿರ್ಭಯವಾಗಿ ಹೀಗೆ ಉತ್ತರಿಸಿದ್ದಾನೆ "ವಿಷ್ಣು ಭಗವಂತನ ನಾಮರೂಪಗುಣಾದಿ ಲೀಲೆಗಳನ್ನು ಕೇಳುವುದು, ಸ್ತುತಿಸುವುದು, ಅವುಗಳನ್ನು ಸ್ಮರಿಸುವುದು, ಆ ದೇವೇಶನ ಪಾದಪದ್ಮಗಳನ್ನು ಸೇವಿಸುವುದು, ಆತನನ್ನು ಷೋಡ ಶೋಪಚಾರ ವಿಧಿಗಳಿಂದ ಪೂಜಿಸುವುದು,ನಮಸ್ಕರಿಸುವುದು, ಆತನಿಗೆ ದಾಸನಾಗುವುದು, ಆತನನ್ನೇ ಉತ್ತಮ ಮಿತ್ರನನ್ನಾಗಿ ಮಾಡುವುದು, ತ್ರಿಕರಣ ಶುದ್ಧಿಯಿಂದ ಆತನಿಗೆ ಸಕಲವನ್ನು ಸಮರ್ಪಿಸುವುದು ಇವೇ ಮೊದಲಾದ ಒಂಭತ್ತು ಪರಿಶುದ್ಧ ಭಕ್ತಿ ಯೋಗಗಳೆಂದು ಹೇಳ ಲ್ಪಟ್ಟಿವೆ.ಈ ಒಂಭತ್ತು ಪದ್ಧತಿಗಳ ದ್ವಾರ ಜೀವ ನವನ್ನೇ ಕೃಷ್ಣ ಸೇವೆ ಗೆಂದು ಮೀಸಲಿಡುವ ಮಹನೀಯನೇ ಸರ್ವೋತ್ತಮನು" ಎಂದು ಹೇಳಿದ್ದಾನೆ.

ಪ್ರಹ್ಲಾದನ ಮಾತುಗಳು ಹಿರಣ್ಯಕಶಿಪುವಿಗೆ ತೀವ್ರವಾದ ಕೋಪವನ್ನು ತಂದೊಡ್ಡಿವೆ.ಆತನ ಮುಖವು ಕೋಪೋದ್ರೇಕಗಳಿಂದ ಕೆಂಪೇರಿತು ಆತನು ಕೂಡಲೇ ಕೋಪಾವೇಶದಿಂದ ಗುರುಪುತ್ರರನ್ನು ದೋಷಿಸಲಾರಂಭಿಸಿದ್ದಾನೆ.

ಆಗ ಷಂಡಾಮಾರ್ಕರು ಭಯದಿಂದ ಕುಗ್ಗಿ ಹೋಗಿದ್ದಾರೆ. ಎರಡೂ ಕರಗಳನ್ನು ಜೋಡಿಸಿ ತಮ್ಮ ಅಮಾಯಕತನವನ್ನು ತಿಳಿಸಲೆತ್ನಿಸಿದ್ದಾರೆ. ಪ್ರಹ್ಲಾದನು ಆಡಿದ ಯಾವುದೇ ವಿಷಯವನ್ನವರು ಕಲಿಸಿಲ್ಲವೆಂದೂ, ತಮ್ಮ ಸ್ಥಾನದಲ್ಲಿ ಬೇರೊಬ್ಬರೂ ಸಹಾ ಬೋಧಿಸಿಲ್ಲವೆಂದೂ ತಿಳಿಸಿದ್ದಾರೆ. ಅನಾವಶ್ಯಕವಾಗಿ ಬ್ರಾಹ್ಮಣನಿಂದೆ ಮಾಡುವುದು ಉಚಿತವಾದುದ್ದಲ್ಲವೆಂದು ಹಿತ ನುಡಿದಿದ್ದಾರೆ. ಕೋಪಾಟೋಪಗಳನ್ನು ತೊರೆದು ಅಸಲಿನ ವಿಷಯವೇನೆಂದು ತಿಳಿದುಕೊಳ್ಳಬೇಕೆಂದು ಕೇಳಲು ಯತ್ನಿಸಿದ್ದಾರೆ. ಗುರುಪುತ್ರರ ಮಾತನ್ನು ಕೇಳುತ್ತಲೇ ಹಿರಣ್ಯಕಶಿಪುವಿನ ಕ್ರೋಧವು ಪ್ರಹ್ಲಾದನೆಡೆಗೆ ತಿರುಗಿದೆ. ಗುರುಗಳು ಕಲಿಸದ ಪಾಠವು ನಿನಗೆಲ್ಲಿಂದ ಬಂತೆಂದು ಆತನು ಪ್ರಹ್ಲಾದನನ್ನು ಗದ್ದರಿಸಿ ಕೇಳಲು, ಶ್ರೀ ಹರಿಯ ಸಂರಕ್ಷಣೆಯಲ್ಲಿ ನಿರ್ಭಯನಾಗಿದ್ದ ಆ ಬಾಲಭಕ್ತನು ಧೈರ್ಯದಿಂದ ಹೀಗೆ ಉತ್ತರಿಸಿದ್ದಾನೆ.

"ತಂದೆಯೇ! ಗೃಹಸ್ಥಾಶ್ರಮವನ್ನು ಕೈಗೊಂಡ ವ್ಯಕ್ತಿಗಳು ಇಂದ್ರಿಯ ನಿಗ್ರಹವಿರದ ಕಾರಣಕ್ಕೆ ನರಕಗಾಮಿಗಳಾಗಿ ಅಗೆದ ಆಹಾರವನ್ನೇ ಪದೇ ಪದೇ ಮೆಲುಕು ಹಾಕುತ್ತಿರುತ್ತಾರೆ. ಅಂತಹ ವರಿಗೆ ಇತರರಿಂದ ಬೋಧನೆ ಮಾಡಿಸುವುದರಿಂದಾಗಲೀ, ಸ್ವಯಂ ಕೃತ ಯತ್ನದಿಂದಾಗಲೀ ಅಲ್ಲದೇ ಈ ಎರಡನ್ನು ಒಟ್ಟಿಗೇ ಪ್ರಯೋಗಿಸುವುದರಿಂದಾಗಲೀ ಕೃಷ್ಣ ಪ್ರೇಮ ಹುಟ್ಟಲಾರದು".

"ದಾನವೇಂದ್ರಾ! ವಿಷಯ ಭೋಗಗಳಲ್ಲಿ ಆಸಕ್ತಿ ಹೊಂದಿದವರು ಇಂದ್ರಿಯಾತುರರಾಗಿ ಅಂಧಕಾರವನ್ನೇ ತಮ್ಮ ನಾಯಕನನ್ನಾಗಿ, ಗುರುವನ್ನಾಗಿ ಮಾಡಿಕೊಂಡಿರುತ್ತಾರೆ. ಕುರುಡನನ್ನಾನುಸರಿಸಿ ಹೋಗುವ ಕುರುಡನು ಹಾದಿ ತಪ್ಪಿ ಕಂದರದಲ್ಲಿ ಬೀಳುವಂತೆ, ಇಂದ್ರಿಯಾಸಕ್ತನನ್ನು ಅನುಸರಿಸು ವವನು ಕರ್ಮಪಾಶಬದ್ಧನಾಗಿ ಮರಳಿ ಮರಳಿ ಸಂಸಾರ ಚಕ್ರದಲ್ಲಿ ತಿರುಗುತ್ತಾ ತ್ರಿವಿಧ ತಾಪತ್ರಯಗಳಲ್ಲಿ ಸಿಲುಕುತ್ತಾನೆ.

"ತಂದೆಯೇ ! ಭೌತಿಕ ಕಲ್ಮಷದಿಂದ ಪೂರ್ತಿಯಾಗಿ ಬಿಡಲ್ಪಟ್ಟು ವೈಷ್ಣವರ ಪಾದಧೂಳಿಯಿಂದ ಸ್ನಾನ ಮಾಡುವ ವರೆಗೂ ವಿಷಯಾಸಕ್ತರಿಗೆ ಭಗವಂತನ ಪಾದಪದ್ಮಗಳಲ್ಲಿ



ಅನುರಕ್ತಿಯುಂಟಾಗುವುದು.ಭಾಗವತರ ಪಾದಧೂಳಿಯನ್ನಾ ಶ್ರಯಿಸಿ ಭಗವತ್ಸೇವಾನುರಕ್ತನಾದಾಗಲೇ ಮಾನವರು ಸಕಲ ಅನರ್ಥಗಳಿಂದ ಹೊರಬರಲನುವಾಗುತ್ತದೆ".

ಭಕ್ತ ಪ್ರಹ್ಲಾದನು ಈ ವಿಧವಾಗಿ ಸಮಾಧಾನವೀಯು ತ್ತಲೇ ಹಿರಣ್ಯಕಶಿಪು ಆತನನ್ನು ತನ್ನ ತೊಡೆಯಿಂದ ದೂರಕ್ಕೆ ತಳ್ಳಿದ್ದಾನೆ. ಸುಕುಮಾರ ಶರೀರನಾದ ಪ್ರಹ್ಲಾದನು ಕೆಳಗೆ ಬಿದ್ದಿದ್ದಾನೆ.

ಅಷ್ಟಾದರೂ ಆತನು ನಿರ್ಭಯದಿಂದಿದ್ದಾನೆ. ಎಳ್ಳಷ್ಟೂ ಅಳುಕಿಲ್ಲ. ಹಿರಣ್ಯಕಶಿಪು ಮಾತ್ರ ಬಾಲ ತುಳಿದ ನಾಗರದಂ ತಾಗಿದ್ದಾನೆ. ಯಾರ ಅಗ್ನಿಕುಂಡದಂತಿರುವ ನೇತ್ರಾಗಳನ್ನು ಕಂಡು ಇಂದ್ರಾದಿ ದೇವತೆಗಳು ಸಹಾ ಭೀಭತ್ಸರಾಗುತ್ತಾರೋ ಅಂತಹ ದಾನವೇಂದ್ರನು ಮತ್ತಷ್ಟೂ ಕ್ರೋಧದಿಂದ ತನ್ನ ಭಟ ರನ್ನುದ್ದೇಶಿಸಿ ಹೀಗೆಂದಿದ್ದಾನೆ:

"ಅಸುರರೇ! ಈ ಪ್ರಹ್ಲಾದನನ್ನು ಸಾಧ್ಯವಾದಷ್ಟೂ ಶೀಘ್ರ ವಾಗಿ ನನ್ನೆದುರಿನಿಂದ ಎಳೆದುಕೊಂಡು ಹೋಗಿ. ಬಾಲಕನೆಂದು ಕರುಣಿಸದೇ ಈ ಕೂಡಲೇ ಇವನನ್ನು ಸಂಹರಿಸಿ. ಪ್ರಹ್ಲಾದನು ನನ್ನ ವೈರಿಯಾದ ವಿಷ್ಣುವಿನ ದಾಸನಾಗಿದ್ದಾನೆ. ಕಾರಣ ಯಾವು ದಾದರೊಂದು ರೀತಿಯಲ್ಲಿ ಈತನನ್ನು ವಧಿಸಿಬಿಡಿ".

ತಮ್ಮ ನಾಯಕನ ಮಾತುಗಳು ದಾನವರಲ್ಲಿ ಮತ್ತಷ್ಟು ಉತ್ಸಾಹವನ್ನು ತುಂಬಿವೆ. ಅವರು ಪ್ರಹ್ಲಾದನನ್ನು ದೊರಕ್ಕೆಳೆ ದೊಯ್ದಿದ್ದಾರೆ. ಘೋರರೂಪವಾದ ಅಸುರರು "ತುಳಿಯಿರಿ, ಸಾಯಿಸಿರಿ ಹೊಡೆಯಿರಿ" ಎಂದು ಭೀಕರವಾಗಿ ಕೂಗುತ್ತಾ ಖಡ್ಗಗಳಿಂದ ಶೂಲಗಳಿಂದ ಪ್ರಹ್ಲಾದನ ಮೇಲೆ ವಾರೆಗೈದಿದ್ದಾರೆ. ಆದರೆ ಪ್ರಹ್ಲಾದನು ಮಾತ್ರ ಕಣ್ಣು ಮುಚ್ಚಿಕೊಂಡು ಹೃದಯದಲ್ಲಿ ಅಚ್ಯುತನನ್ನು ನೆನೆ ಯುತ್ತಾ ಧ್ಯಾನಾಸಕ್ತನಾಗಿದ್ದಾನೆ. ಪುಣ್ಯ ಪರಿಪಕ್ವನಾದವನು ಯಾವ ಸತ್ಕಾರ್ಯವೂ ಫಲಿಸದಿರುವಂತೆ, ದಾನವರು ಮಾಡಿದ ಆಯುಧ ಪ್ರಹಾರ ಪ್ರಹ್ಲಾದನ ವಿಷಯದಲ್ಲಿ ಯಾವುದೇ ಪ್ರಭಾವ ಬೀರದೇ ಉಳಿದುಬಿಟ್ಟಿವೆ.ಅಸುರರ ಖಡ್ಗಗಳು ಪ್ರಹ್ಲಾದನನ್ನು ತುಂಡರಿಸದೇ ನಿಂತಿವೆ. ಅವರ ಶೂಲಗಳು ಪ್ರಹ್ಲಾದನನ್ನು ಇರಿಯದೇ ಉಳಿದು ಬಿಟ್ಟಿವೆ. ಅವರ ಅಣಕಗಳು ಪ್ರಹ್ಲಾದನ ಹರಿ ಭಕ್ತಿಯ ಮುಂದೆ ನಿಂತು ಹೋಗಿವೆ. ಅವರ ಭೀಕರ ಕೂಗುಗಳು ಪ್ರಹ್ಲಾದನನ್ನು ಧ್ಯಾನದಿಂದ ವಿಚಲಿತ ಗೊಳಿಸದೇ ಸೋತು ಬಿಟ್ಟಿವೆ. ತಮ್ಮೆಲ್ಲಾ ಪ್ರಯತ್ನಗಳು ವಿಫಲ

ಗೊಳ್ಳುತ್ತಲೇ ಅಸುರರೆಲ್ಲರೂ ಭಯ ಭೀತರಾಗಿದ್ದಾರೆ. ಇಂತಹ ದೊಂದು ಅನುಭವ ಅವರಿಗಾಗಿರಲೇ ಇಲ್ಲ.ಓಡೋಡಿ ಅವರೆಲ್ಲರೂ ಹಿರಣ್ಯಕಶಿಪುವಿನ ಬಳಿ ನಡೆದು ದೆಲ್ಲವನ್ನು ವಿವರಿಸಿದ್ದಾರೆ.ಈ ವಿಷಯವು ದಾನವೇಂದ್ರನನ್ನು ವಿಸ್ಮಿತಗೊಳಿಸಿದೆ. ಆತನಿಗೂ ಸ್ವಲ್ಪ ಭಯವುಂಟಾಗಿದೆ.ದೇವತೆಗಳನ್ನೇ ಗುಡುಗುಡಿಗಿಸಿದ ತನ್ನ ಅಸುರಗಣ ಒಬ್ಬ ಚಿಕ್ಕ ಬಾಲಕನನ್ನು ವಧಿಸಲಾದದ್ದನ್ನು ಕಂಡು ಆತನಿಗೆ ಅತಿ ವಿಚಿತ್ರವೆನಿಸಿದೆ. ಇಷ್ಟಾದರೂ ತನ್ನ ಬಳಿ ಇತರೆ ಉಪಾಯಗಳಿವೆಯೆಂದು ಆತ ಭಾವಿಸಿದ್ದಾನೆ.ಅವುಗಳನ್ನೆಲ್ಲಾ ಒಂದೊಂದಾಗಿ ಪ್ರಯೋಗಿಸಲನುವಾಗಿದ್ದಾನೆ. ಮೊಟ್ಟ ಮೊದಲು ಆ ಎಳಗೂಸನ್ನು ಆನೆಯ ಕಾಲಿಂದ ತುಳಿಸಿದ್ದಾನೆ. ನಂತರ ವಿಷ ಸರ್ಪಗಳಿಂದ ಕಡಿಸಿದ್ದಾನೆ. ಬಳಿಕ ವಿನಾಶಕರ ಮಂತ್ರಗಳನ್ನು ಪ್ರಯೋಗಿಸಿದ್ದಾನೆ. ಆನಂತರ ಎತ್ತರವಾದ ಬೆಟ್ಟಗಳಿಂದ ಆತನನ್ನು ಕಳಕ್ಕೆ ನೂಕಿಸಿದ್ದಾನೆ. ನಂತರ ವಿಷಪ್ರಾಶನ ಮಾಡಿಸಿದ್ದಾನೆ. ನಂತರ ದೊಡ್ಡ ದೊಡ್ಡ ಕಲ್ಲು ಬಂಡೆಗಳಡಿಯಲ್ಲಿ ದೂಕಿಸಿದ್ದಾನೆ. ಉಪವಾಸ ಗೆಡುಹಿದ್ದಾನೆ. ಬೆಂಕಿಯಲ್ಲಿ ಎಸೆದಿದ್ದಾನೆ. ಕುದಿಯುವ ಎಣ್ಣೆಯಲ್ಲಿ ಹಾಕಿಸಿದ್ದಾನೆ.ತಾನು ಕೈಗೊಂಡ ಯಾವುದೇ ಉಪಾಯದಿಂದ ಪ್ರಹ್ಲಾದನ ಯಾವುದೇ ಕೊಂಕು ಅಲುಗದೇ ಇದ್ದದ್ದು ಕಂಡು ಹಿರಣ್ಯಕಶಿಪು ಖಿನ್ನತೆಗೊಳಗಾಗಿದ್ದಾನೆ. ಆತನಿಗೆ ದಿಕ್ಕೇ ತೋಚದಂತಾಗಿದೆ. “ಇವನು ಮರಣಾತೀತನಾದಂತೆ ಕಂಡು ಬರುತ್ತದೆ. ಈತನ ವೈರದಿಂದಲೇ ನನಗೆ ಮರಣ ಸಂಭವಿಸಬಹುದೇನೋ! ” ಎಂಬ ಭಯದಿಂದ ತನಗೆ ತಾನೇ ಅಂದುಕೊಂಡಿದ್ದಾನೆ.ಈ ರೀತಿಯಾಗಿ ನೂರಾರು ಬಗೆಯ ಆಲೋಚನೆಗಳಲ್ಲಿ ಮುಳುಗಿದ ಹಿರಣ್ಯಕಶಿಪುವಿನ ಮುಖವು ಕಳೆಗುಂದಿದೆ. ತಮ್ಮ ಪ್ರಭುವಿಗುಂಟಾಗಿರುವ ಈ ಪರಿಸ್ಥಿತಿಯನ್ನು ಕಂಡು ಷಂಡಾಮಾರ್ಕರಿಗೆ ಸ್ವಲ್ಪ ಭ್ರಾಂತಿಯುಂಟಾಗಿದೆ. ಅವರು ತಮ್ಮ ಪ್ರಭುವನ್ನು ಏಕಾಂತದಲ್ಲಿ ಭೇಟಿ ಮಾಡಿ ಸ್ವಲ್ಪ ಮಟ್ಟಿಗಾದರೂ ಧೈರ್ಯ ಹೇಳಲು ಯತ್ನಿಸಿದ್ದಾರೆ.

“ಪ್ರಭೂ! ನಿನ್ನ ಒಂದು ಹೂಂಕಾರದಿಂದ ದೇವತೆಗಳೆಲ್ಲರೂ ಚದುರಿ ಹೋಗುತ್ತಾರೆಂದು ನಮಗೆ ಗೊತ್ತು. ನೀನು ಮೂಲ್ಲೋಕಗಳನ್ನು ಜಯಿಸಿರುವ ವೀರ. ಅಂತಹವನಿಗೆ ಚಿಕ್ಕ ಬಾಲಕನಾದ ಪ್ರಹ್ಲಾದನ ವಿಷಯದಲ್ಲಿ ಎಳ್ಳಷ್ಟೂ ಭಯಪಡುವ ಅಗತ್ಯವಿಲ್ಲ.ನಮ್ಮ ಕುಲಗುರುಗಳಾದ ಶುಕಾಚಾರ್ಯರು ನಮ್ಮೊಂದಿಗೂ ಇದ್ದಾರೆ. ಅವರು ಬರುವವರೆಗೂ ಈ ಬಾಲಕನನ್ನು ಬಂಧಿಸಿಟ್ಟು ಬಿಡೋಣ. ಅವನು ದೊಡ್ಡವನೇ ಆದಲ್ಲಿ ತನ್ನ ನಡುವಳಿಕೆಯನ್ನು ಖಂಡಿತವಾಗಿ ಪರಿವರ್ತಿಸುತ್ತಾನೆ. ನಮ್ಮ ಗುರಿಯಾನುಸಾರ, ಸ್ವಲ್ಪ ಕಾಲವಾದರೂ ಈತನೂ ಗುರುವಿನ ಸೇವೆ ಮಾಡುತ್ತಾನೆ. ಆದ್ದರಿಂದ ನೀವು ಮಾತ್ರ ಯಾವುದೇ ಆಲೋಚನೆಗೈಯದೇ ಪ್ರಹ್ಲಾದನನ್ನು ನಮ್ಮೊಡನೆ ಕಳುಹಿಸಿ ಕೊಡಿ”

ಗುರುಪುತ್ರರ ಸಾಂತ್ವನದ ನುಡಿಗಳನ್ನು ಕೇಳುತ್ತಲೇ ಹಿರಣ್ಯಕಶಿಪುವಿಗೆ ಸ್ವಲ್ಪ ಉಪಶಮನ ದೊರಕಿದೆ. ತನ್ನ ಸುತನು ಹರಿಭಕ್ತಿಯನ್ನು ಬಿಟ್ಟು ತಿರುಗಿ ತನ್ನ ಮಾರ್ಗಕ್ಕೇ ಮರುಳುತ್ತಾನೆಂದು ಆಸೆಯೂ ಸಹಾ ಚಿಗುರೊಡೆದಿದೆ. ಇನ್ನು ಪ್ರಹ್ಲಾದನಿಗೆ ಬರೀ ಗೃಹಸ್ಥಾಶ್ರಮದ ಪಾಠಗಳನ್ನು ಮಾತ್ರವೇ ಹೇಳಿಕೊಡಬೇಕೆಂದು ಆತನು ಷಂಡಾಮಾರ್ಕರರಿಗೆ ಹೇಳಿದ್ದಾನೆ. ಅವರು ಅದಕ್ಕೆ ಸರಿಯೆಂದು ತಿಳಿಸಿ ಮರಳಿ ತಮ್ಮೊಂದಿಗೆ ಪ್ರಹ್ಲಾದನನ್ನು ಆಶ್ರಮಕ್ಕೆ ಕರೆದೊಯ್ದಿದ್ದಾರೆ.


(-ಸಶೇಷ)



## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್‌ಫೋನ್,ಕೆಮರಾ,ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ.ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ.ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.


- ಕಾರ್ಯನಿರ್ವಹಣಾಧಿಕಾರಿ



# ಅನ್ನಮಯ್ಯನ ಜೀವನ ಚರಿತ್ರೆ

– ಮೂಲ. ಎಂ. ಶಿವ ಪ್ರವೀಣ್

– ಅನುವಾದ ಬಿ. ಪದ್ಮಜ



## ಅನ್ನಮಯ್ಯನಿಗೆ ವೈಷ್ಣವ ಯತಿಗಳು ಪಂಚಸಂಸ್ಕಾರಗಳನ್ನು ನೆರವೇರಿಸಿದ್ದು:-

ಭಕ್ತ ಸುಲಭನಾದ ಆ ಭಗವಂತನು ಈ ಭಕ್ತ ಶಿಖಾಮಣಿಯ ಗಾನ ಮಾಧುರ್ಯಕ್ಕೆ ಪರವಶವನ್ನು ಹೊಂದಿದ. ಒಮ್ಮೆ ತಿರುಮಲೆಯಲ್ಲಿ ನಿವಸಿಸುವ ಘನ ವಿಷ್ಣು ಎಂಬ ವೈಷ್ಣವಯತಿಯ ಸ್ವಪ್ನದಲ್ಲಿ ಸಾಕ್ಷಾತ್ಕರಿಸಿ ತಾಳ್ಳಪಾಕ ಅನ್ನ ಮಯ್ಯ ನನ್ನ ಭಕ್ತ. ಬಾಲಕ, ಬ್ರಹ್ಮಚಾರಿ ಕಿವಿ ಓಲೆಗಳನ್ನು ಧರಿಸಿದ್ದಾನೆ. ನಾನು ಕೇಳದೆಯೇ ರೇಷ್ಮೆಯ ನೂಲುಗಳಿಂದ ಅಲಂಕರಿಸಲ್ಪಟ್ಟ ತಂಬೂರಿಯನ್ನು ಮೀಟುತ್ತಾ ನನ್ನ ಮೇಲೆ ಸಂಕೀರ್ತನೆಯನ್ನು ಹಾಡಿ ನನ್ನ ಮನಸ್ಸನ್ನು ಸಂತೋಷಪಡಿಸುತ್ತಿದ್ದಾನೆ. ನಾಳೆ ನಿನ್ನ ಬಳಿಗೆ ಬರುತ್ತಾನೆ ನೀನು ಕಾಲಹರಣ ಮಾಡದೆ ನನ್ನ ಪರವಾಗಿ ಆತನಿಗೆ ನೀನು ಶಂಖ ಚಕ್ರಾಂಕಿತನನ್ನಾಗಿ ಮಾಡು ಎಂದು ಆದೇಶಿಸಿದನು. ಕೂಡಲೇ ನಿದ್ದೆಯಿಂದ ಎಚ್ಚರಗೊಂಡ ಘನ ವಿಷ್ಣುವು ಸ್ವಾಮಿಯ ಕೃಪೆಯನ್ನು ನೆನೆದು ಆನಂದಗೊಂಡ.

ಸ್ವಾಮಿಯ ಆಜ್ಞೆಯನ್ನು ಪಾಲಿಸಬೇಕೆಂಬ ಅವಸರದಲ್ಲಿ ಮರುದಿನ ಬೆಳಿಗ್ಗೆಯೇ ನಿತ್ಯ ಕರ್ಮಗಳನ್ನು ಮುಗಿಸಿಕೊಂಡು ಕೈಯಲ್ಲಿ ಶಂಖ ಚಕ್ರ ಮೊದಲಾದವುಗಳನ್ನು ಹಿಡಿದುಕೊಂಡು ಅನ್ನಮಯ್ಯನ ಬರುವಿಕೆಗಾಗಿ ಎದರುನೋಡುತ್ತಿದ್ದ. ಅದೇ ಸಮಯದಲ್ಲಿ ಶ್ರೀ ಹರಿಯ ಸಂಕೀರ್ತನೆಗಳನ್ನು ಹಾಡುತ್ತಾ ಘನವಿಷ್ಣುವಿನ ನಿವಾಸದತ್ತ ಅನ್ನಮಯ್ಯ ಆಗಮಿಸಿದ. ಆ ಬಾಲಕನ ರೂಪವನ್ನು ಬಹಳ ಸಂಭ್ರಮದಿಂದ ನೋಡತೊಡಗಿದ ಕನಸಿನಲ್ಲಿ ಸ್ವಾಮಿಯು ಹೇಳಿದಂತೆ ಇದ್ದ ಆ ಬಾಲಕನ ರೂಪು ರೇಖೆಗಳನ್ನು ಗ್ರಹಿಸಿದ ಸ್ವಾಮಿಯ ಆಜ್ಞೆಯನ್ನು ಪಾಲಿಸುತ್ತಿರುವುದಕ್ಕಾಗಿ ಸಂತೋಷಗೊಂಡ. ಆ ಬಾಲಕನನ್ನು ಹತ್ತಿರಕ್ಕೆ ಕರೆದು ಹೆಸರನ್ನು ಕೇಳಿದ. ಆ ಬಾಲಕನು ಆ ಮುನಿಗೆ ಸಾಷ್ಟಾಂಗ ಪ್ರಣಾಮಗಳನ್ನು ಮಾಡಿದ ಗಾಡಾಂಧಕಾರದಲ್ಲಿ ಇದ್ದವನಿಗೆ ಬೆಳಕನ್ನು ಯಾರಾದರೂ ಪರಿಚಯಿಸಬೇಕೆ? ದುಂಬಿಗಳಿಗೆ ಹೂವುಗಳನ್ನು ಯಾರಾದರೂ ಪರಿಚಯಿಸಬೇಕೆ? ಜ್ಞಾನಾರ್ಥಿಗೆ ಸದ್ಗುರುವನ್ನು ಯಾರಾದರೂ ಪರಿಚಯಿಸಬೇಕೆ?

ತನ್ನ ಬಗೆಗೆ ಆ ಬಾಲಕನು ತೋರಿದ ಭಕ್ತಿಗೆ ಘನ ವಿಷ್ಣುವು ಉಬ್ಬಿಹೋದ. ಮುನಿನಾಥನು ಆತನನ್ನು ಮುದ್ದು ಮಾಡಿ ತನ್ನ ಕೈಯಿಂದಲೇ ಮುದ್ರಾ ಧಾರಣೆಯನ್ನು ಮಾಡಿಸಿಕೊಂಡು ಹೋಗುವ ಎಂಬ ಅನ್ನಮಯ್ಯನ ಅಭಿಮತವನ್ನು ಆಲಿಸಿ,ಸ್ವಪ್ನದಲ್ಲಿ ರಮಾಪತಿಯು ಹೇಳಿದ ರೀತಿಯಲ್ಲಿ ವೇದೋಕ್ತ ಪ್ರಕಾರವಾಗಿ ಘನವಿಷ್ಣುವು ಅನ್ನಮಯ್ಯನಿಗೆ ಶಂಖ ಚಕ್ರಾಂಕಿತನನ್ನಾಗಿ ಮಾಡಿದ. ಆ ರೀತಿ ಅನ್ನಮಯ್ಯ ಘನ ವಿಷ್ಣುವೆಂಬ ವೈಷ್ಣವಾಚಾರ್ಯರಿಂದ ಪಂಚ ಸಂಸ್ಕಾರವಂತನಾದ.


## ತಾಳ್ಳಪಾಕಕ್ಕೆ ಹಿಂದಿರುಗಿದ ಅನ್ನಮಯ್ಯ

ಅತ್ತ ತಮ್ಮ ಪುತ್ರನು ಕಾಣದೆ ನಾರಾಯಣಸೂರಿ, ಲಕ್ಕಮಾಂಬರು ಊರೆಲ್ಲಾ ಹುಡುಕಿ, ಸುತ್ತಮುತ್ತಲ ಗ್ರಾಮಗಳಲ್ಲಿ ಹುಡುಕಿದರು. ತಮಗೆ ಪುತ್ರಭಾಗ್ಯವನ್ನು ಕರುಣಿಸಿದ ವೆಂಕಟೇಶನೆ ತಮಗೆ ಪುತ್ರನನ್ನು ಹಿಂದಿರುಗಿಸಬೇಕೆಂದು ದೇವರನ್ನು ನಂಬಿ ತಿರುಮಲೆಗೆ ಸೇರಿದರು ಆ ದಂಪತಿಗಳು. ತಿರುಮಲೆಯಲ್ಲಿ ಸ್ವಾಮಿಯನ್ನು ಭಕ್ತಿಯಿಂದ, ಸಂಕೀರ್ತನೆಗಳಿಂದ ಅರ್ಚಿಸುತ್ತಿರುವ ಅನ್ನಮಯ್ಯನನ್ನು ನೋಡಿದರೂ ತಾಯಿ ಮಗನನ್ನು ನೋಡಿ ಸಂತೋಷಗೊಂಡಳು. ಮನೆಗೆ ಬರಬೇಕೆಂದು ಬೇಡಿಕೊಂಡಳು. ಅನ್ನಮಯ್ಯ ಮನೆಗೆ ಬರುವುದಿಲ್ಲವೆಂದು ಹೇಳಿದ. ತಾಯಿಯ ಮನಸ್ಸು ವಿಲವಿಲನೆ ಒದ್ದಾಡಿತು. ಅರ್ಚಕರು ಆ ತಾಯಿಯ ನೋವನ್ನು ನೋಡಲಾರದೆ ಅನ್ನಮಯ್ಯನಿಗೆ ಬುದ್ಧಿ ಹೇಳಿದರು. ಇಲ್ಲಿನ ಸ್ವಾಮಿಗಳು ನಿಮ್ಮ ಊರಿನಲ್ಲೂ ಇದ್ದಾರೆ ಎಂದರು. ಆದರೂ ಅನ್ನಮಯ್ಯ ಕೇಳಿಸಿಕೊಳ್ಳಲಿಲ್ಲ.

ಆ ದಿನ ರಾತ್ರಿ ಅನ್ನಮಯ್ಯನಿಗೆ ಕನಸಿನಲ್ಲಿ ಸ್ವಾಮಿಯೂ ಸಾಕ್ಷಾತ್ಕಾರಗೊಂಡ ಅಪ್ಪಾ ನಿಮ್ಮ ವಂಶದವರು ವೇದ, ಉಪನಿಷತ್ತುಗಳ ಸಾರವನ್ನು ಇತರರಿಗೆ ಹೇಳಬಲ್ಲ ಸಾಮರ್ಥ್ಯವಿರುವವರು. ದೇಹ (ಶರೀರ) ದೇಹೀ (ಶರೀರವನ್ನು ಹೊಂದಿರುವುದು ) ಬೇರೆ ಎಂದು ತಿಳಿ ಸಮಸ್ತ ಪ್ರಾಣಿಗಳನ್ನು ನಿನ್ನೊಂದಿಗೆ ಸಮಾನವಾದುದೆಂಬ ವಿಷಯವನ್ನು ದೃಷ್ಟಿಯಲ್ಲಿ ಇರಿಸಿಕೋ. ನಿನ್ನ ಸಮಸ್ತ ಜವಾಬ್ದಾರಿ. ಭಾರವನ್ನು ನನ್ನ ಮೇಲೆ ಹೊರಸಿ ನನ್ನನ್ನು ಶರಣು ಬೇಡು. ನಾನು ನಿನಗೆ ಶುಭವನ್ನೇ ಉಂಟು ಮಾಡುತ್ತೇನೆ. ಎಂದು ಬೋಧಿಸಿ "ಕುಮಾರಾ! ತಾಯಿ ಹೇಳಿದ ಮಾತನ್ನು ನಿರಾಕರಿಸದೆ ಆಕೆಯೊಂದಿಗೆ ಹೋಗಿ ಬಾ!'' ಎಂದು ತಿಳಿಹೇಳಿದ. ಅನ್ನಮಯ್ಯ ನಿದ್ದೆಯಿಂದ ಎದ್ದು ಈ ವಿಷಯವನ್ನು ತಂದೆ ತಾಯಿಗಳಿಗೆ ತಿಳಿಸಿದ. ಆ ಸ್ವಪ್ನವನ್ನೇ ಆಜ್ಞೆಯೆಂದು ಭಾವಿಸಿ ತಂದೆ ತಾಯಿಗಳ ಜೊತೆ ತನ್ನ ಊರನ್ನು ತಲುಪಿದ.

## ಅನ್ನಮಯ್ಯನ ವಿವಾಹ:

ತಂದೆತಾಯಿಗಳ ಜೊತೆ ಮನೆಯನ್ನು ಸೇರಿದ ಅನ್ನಮಯ್ಯ ಹರಿಸಂಕೀರ್ತನೆಗಳಿಂದ ಸಮಯವನ್ನು ಕಳೆಯುತ್ತಿದ್ದ ಕೆಲವು ಸಮಯದ ನಂತರ ಆತ ಯೌವ್ವನಕ್ಕೆ ಕಾಲಿರಿಸಿದ. ಲಕ್ಕಮಾಂಬಾನಾರಾಯಣ ಸೂರಿ ದಂಪತಿಗಳು ತಮ್ಮ ಮುದ್ದಿನ ಮಗನಿಗೆ ವಿವಾಹವನ್ನು ಮಾಡಬೇಕೆಂದು ಯೋಚಿಸಿದರು. ವಿವಾಹದ ಪ್ರಯತ್ನದಲ್ಲಿ ಹೆಣ್ಣುಮಕ್ಕಳನ್ನು ಹಡೆದವರಲ್ಲಿ ತಮ್ಮ ಮಗಳನ್ನು ನೀಡಬೇಕೆಂದು ಕೇಳಿಕೊಂಡರು ಆದರೆ ಸದಾ ಪರಧ್ಯಾನದಲ್ಲಿ ಗೋವಿಂದಾ! ಗೋವಿಂದಾ! ಎಂದು ಹಾಡುತ್ತಾ ಗೋವಿಂದನಾಮಗಳ ದಾಸಯ್ಯನಿಗೆ ತಮ್ಮ ಮಗಳನ್ನು ನೀಡಲಾರೆವು ಎಂದು ಹೇಳಿದರು. ಇದರಿಂದ ಲಕ್ಕಮಾಂಬ ನಾರಾಯಣ ಸೂರಿ ದಂಪತಿಗಳು ಅಖಿಲಾಂಡ ಕೋಟಿಬ್ರಹ್ಮಾಂಡ ನಾಯಕನ ಮೇಲೆ ಭಾರವನ್ನು ಹಾಕಿದರು. ಮರುದಿನ ಯಾರು ತಮ್ಮ ಮಗಳನ್ನು ಕೊಡುವುದಿಲ್ಲವೆಂದು ಹೇಳಿದರೋ ಅವರ ಕನಸಿನಲ್ಲಿ ಸ್ವಾಮಿಯು ಕಾಣಿಸಿಕೊಂಡು ಕನ್ಯೆಯನ್ನು ನೀಡಬೇಕೆಂದು ಆಜ್ಞಾಪಿಸಿದರು. ಮರುದಿನ ಬೆಳಿಗ್ಗೆ ತಾವು ಆಡಿದ ಮಾತಿಗೆ ಪಶ್ಚಾತ್ತಾಪಗೊಂಡು ತಮ್ಮ ಮಕ್ಕಳಾದ ಅಕ್ಕಲಮ್ಮ, ತಿರುಮಲಮ್ಮರನ್ನು ಅನ್ನಮಯ್ಯನಿಗೆ ನೀಡಿ ಹಿರಿಯರ ಸಮುಕ್ಷಮದಲ್ಲಿ ವೈಭವದಿಂದ ಮದುವೆಯನ್ನು ನಡೆಸಿದರು.



## ಅಹೋಬಿಲದ ಯಾತ್ರೆ:

ತಿರುಮಲಮ್ಮ, ಅಕ್ಕಲಮ್ಮರೊಂದಿಗೆ ವಿವಾಹ ನಡೆದ ನಂತರ ಅನ್ನಮಯ್ಯ ವೇದಾಂತವಿದ್ಯೆಯನ್ನು ಅಭ್ಯಾಸ ಮಾಡಿ ಅಹೋಬಿಲ ಕ್ಷೇತ್ರಕ್ಕೆ ಹೊರಟ. ಅಲ್ಲಿ ವೈಷ್ಣವಾಚಾರ್ಯನಾದ ಶಠಗೋಪ ಮುನಿಯ ಬಳಿ ವೇದಾಂತ ವಿದ್ಯೆಯನ್ನು ಅಭ್ಯಾಸಮಾಡಿದ. ಬ್ರಹ್ಮವಿದ್ಯೆಯನ್ನು ಕಲಿತ. ಅಂದಿನಿಂದ ಪ್ರತೀದಿನವೂ ಶ್ರೀ ಹರಿಯನ್ನು ಪೂಜಿಸುವುದು ಸೇವಿಸುವುದು, ಕೀರ್ತಿಸುವುದು, ಆಲೋಚಿಸುವುದು, ಧ್ಯಾನಿಸುವುದು, ಮುಂತಾದ ಕೆಲಸಗಳಿಂದ ಅನ್ನಮಯ್ಯ ಕಾಲವನ್ನು ಕಳೆಯುತ್ತಿದ್ದ.

## ಸಂಕೀರ್ತನಾ ಯಜ್ಞ

ಸ್ವಾಮಿಗೆ ಸಮರ್ಪಿಸುವ ಕೈಂಕರ್ಯಗಳ ತನ್ನ ಭೋಗವೆಂದು ಅನ್ನಮಯ್ಯ ಭಾವಿಸುತ್ತಿದ್ದ.ವಾಲ್ಮೀಕಿ ರಾಮಾಯಣದತ್ತ ಒಲವನ್ನು ಬೆಳಸಿಕೊಂಡಿದ್ದ ಅನ್ನಮಯ್ಯ ರಾಮಾಯಣ ಕತೆಗಳನ್ನು ಕೀರ್ತನೆಗಳನ್ನು ಹಾಡುತ್ತಿದ್ದ.ಆ ಗಾನಾಮೃತವನ್ನು ಕೇಳಿಸಿಕೊಂಡವರು ಅನ್ನಮಯ್ಯ ತುಂಬುರನೋ, ನಾರದನೋ ಅಥವಾ ಗಂಧರ್ವನೋ ಆಗಿರಬೇಕು. ಇವನು ಸಾಧಾರಣ ಮಾನವನಲ್ಲವೆಂದು ಪ್ರಶಂಸಿಸುತ್ತಿದ್ದರು.

## ಸಾಳ್ವ ನರಸಿಂಹರಾಯ

ತಾಳ್ಳಪಾಕ ಸಮೀಪದಲ್ಲೇ ಟಂಗಟೂರು ಎಂಬ ಪಟ್ಟಣಕ್ಕೆ ಪರಿಪಾಲಕನಾಗಿ ಸಂಗಮ ವಂಶದ ರಾಜ ಪ್ರತಿನಿಧಿಯಾದ ಸಾಳುವ ನರಸಿಂಹರಾಯ ಅನ್ನಮಯ್ಯನ ಗಾನಾಮೃತದ ಬಗೆಗೆ ತಿಳಿದುಕೊಂಡು. ಅಂತಹ ಮಹಾನುಭಾವನನ್ನು ನೋಡಬೇಕೆಂಬ ಕುತೂಹಲದಿಂದ ಅನ್ನಮಯ್ಯನ ಬಳಿಗೆ ಬಂದು ಗೌರವದಿಂದ ನಮಸ್ಕರಿಸಿದ. ತನ್ನೊಂದಿಗೆ ತನ್ನ ಊರಿಗೆ ಬಂದು ತಮ್ಮ ಆಸ್ಥಾನವನ್ನು ಪಾವನ ಮಾಡಬೇಕೆಂದು ಅನ್ನಮಯ್ಯನನ್ನು ಬೇಡಿಕೊಂಡ. ವೈಷ್ಣವ ಭಕ್ತನನ್ನು ತಿರಸ್ಕರಿಸಬಾರದೆಂದು ಅನ್ನಮಯ್ಯ ತನ್ನ ಸುಮುಖತೆಯನ್ನು ವ್ಯಕ್ತಪಡಿಸಿ, ನರಸಿಂಹರಾಯನು ಏರ್ಪಾಟು ಮಾಡಿದ ಪಲ್ಲಕ್ಕಿಯನ್ನು ಹತ್ತಿ ಟಂಗಟೂರಿಗೆ ಹೊರಟ. ಅಲ್ಲಿಗೆ ತಲುಪಿದ ಬಳಿಕ ಚೆನ್ನಕೇಶವಸ್ವಾಮಿಯನ್ನು ದರ್ಶಿಸಿ ಆ ದೇವಾಲಯದ ಸಮೀಪದಲ್ಲಿ ತಮಗಾಗಿ ಏರ್ಪಡಿಸಿದ್ದ ಬಿಡದಿಗೆ ತೆರಳಿದರು. ಅಂದಿನಿಂದ ನರಸಿಂಹರಾಯ ಅನ್ನಮಯ್ಯನನ್ನು ತನ್ನ ಹಿತೈಷಿಯಾಗಿ, ಗುರುವಾಗಿ, ಬಂಧುವಾಗಿ ಭಾವಿಸಿ ಗೌರವಿಸುತ್ತಿದ್ದ ಪ್ರತಿಯೊಂದು ಕೆಲಸವನ್ನು ಅನ್ನಮಯ್ಯನಿಗೆ ಹೇಳಿ ಮಾಡುತ್ತಿದ್ದ.ಅನ್ನಮಯ್ಯನ ಆಶೀರ್ವಾದದ ಬಲದಿಂದ ಸಾಳುವ ನರಸಿಂಹರಾಯ ಪೆನುಗೊಂಡಕ್ಕೆ ಹೋಗಿ ರಾಜ್ಯ ಪಾಲನೆಯನ್ನು ಮಾಡ ತೊಡಗಿದ. ಅನ್ನಮಯ್ಯನನ್ನು ಆ ನಗರಕ್ಕೆ ಆಹ್ವಾನಿಸಿ, ಗೌರವಿಸಿ, ಜನರಂಜಕವಾದ ಶ್ರೀ ವೆಂಕಟೇಶ್ವರ ಕೀರ್ತನೆಗಳನ್ನು ಒಮ್ಮೆ ಹಾಡಿ, ಕೇಳಿಸಿ, ತಮ್ಮನ್ನು ಧನ್ಯರನ್ನಾಗಿಸಬೇಕೆಂದು ಕೇಳಿಕೊಂಡ.

ಏಮೊಕೋ ಚಿಗುರು ಟಧರಮುನ ಯೆಡನೆಡಮ್ ಗಸ್ತೂರಿ ನಿಂಡೆನು
ಭಾಮಿನಿ ವಿಭೂನಾಕು ವ್ರಾಸಿನ ಪತ್ರಿಕಾ ಕಾದು ಗದಾ
ಕಲಿಕಿ ಚಕೋರಾಕ್ಷಿಕಿಮ್ ಗಡಕಣ್ಣುಲು ಗೆಂಪೈತೊಂಚಿನ
ಚೆಲುವಮಿಪ್ಪುಡಿ ದೇಮೋ ಚಿಂತಿಪರೆ ಚೆಲಲು
ನಲುವುನಮ್ ಬ್ರಾಣೇಶ್ವರೂಪೈ ನಾಟಿನ ಯಾಕೋಣಚೂಪುಲು
ನಿಲುವುನಮ್ ಜೀರುಕಾಂಗ ನಂಟಿನ ನೆಟ್ಟೂರು ಕಾದುಗದಾ! (5-82)

ಎನ್ನುತ್ತಾ ನರಸಿಂಹರಾಯನ ಮಾತನ್ನು ಮನ್ನಿಸಿ ಅನ್ನಮಯ್ಯ ತನ್ನ ಗಾನಾಮೃತವನ್ನು ವೆಂಕಟೇಶಾಂಕಿತವಾದ ಸಂಕೀರ್ತನೆಗಳನ್ನು ಹಾಡಿ ಕೇಳಿಸಿದ, ಪರಿಶುದ್ಧವಾದ ಜೇನಿನಂತೆ ತಿಳಿಯಾದ ಕಬ್ಬಿನ ರಸದಂತೆ ತಂಪಾದ ಮಲಯಮಾರುತದಂತೆ, ಕರ್ಪೂರದ ಸುವಾಸನೆಯಂತೆ ಕಿವಿಗಳಿಗೆ ಅಮೃತಧಾರೆಯಂತೆ ಹಾಲಿನ ಕೆನೆಯಂತೆ ಅನ್ನಮಯ್ಯನ ಗಾನ ಮಾಧುರ್ಯಕ್ಕೆ ಮುಗ್ಧನಾದ ಅಹೋ! ಓಹೋ! ಅದ್ಭುತ! ಎನ್ನುತ್ತಾ ಅನ್ನಮಯ್ಯನನ್ನು ಹೊಗಳಿದ. ಹಲವು ವಿಧಗಳಿಂದ ಸತ್ಕರಿಸಿದ. ಅಂದಿನಿಂದ ಸಾಳುವ ನರಸಿಂಹರಾಯ ಪ್ರತೀದಿನವು ಅನ್ನಮಯ್ಯ ವೆಂಕಟೇಶ್ವರನನ್ನು ಸ್ತುತಿಸುತ್ತಾ ಹಾಡುವ ಕೀರ್ತನೆಗಳನ್ನು ಕೇಳಿಸಿ ಕೊಳ್ಳುತ್ತಾ ಕಾಲವನ್ನು ಕಳೆಯುತ್ತಿದ್ದ.

ಒಮ್ಮೆ ನರಸಿಂಹರಾಯನು ತನ್ನ ರಾಜರಿಕದ ಸ್ವತಃಸಿದ್ಧ ತಾಮಸದಿಂದ ವೆಂಕಟೇಶ್ವರನನ್ನು ಸ್ತುತಿಸುತ್ತಾ ಹಾಡಿದ ರೀತಿಯಲ್ಲೇ ತನ್ನನ್ನು ಕೀರ್ತಿಸುತ್ತಾ ಒಂದು ಹಾಡನ್ನು ಹಾಡು ಎಂದು ಕೇಳಿದ. ಆ ಮಾತನ್ನು ಕೇಳುತ್ತಲೇ ಅನ್ನಮಯ್ಯ ಹರಿ! ಹರಿ! ಎನ್ನುತ್ತಾ

ಬರಮು ಪತಿವ್ರತಾಭಾವಂಬು ಬೂನಿ
ಹರಿಮುಕುಂದುನಿಮ್ ಗೊನಿಯಾಡು ನಾ ಜಿಹ್ವ
ನೀನು ಗೊನಿಯಾಡಂಗ ನೇರ ದೆಂತೈನ
ನನುನೆಟ್ಲು ಪಲಿಕಿತಿ ನೈವೇಚ್ಛಂಪುಮ್‌ಬಲುಕುಂ
ನಾಯಚ್ಯುತಿನಿಂದಕ್ಕೊ ನನ್ನೊಳ ವಿನುತಿ
ಸೆಯುಟ ನಾಕನ್ನ ಚೇಲಿಯಲಿವಾವಿ

(ಅನ್ನಮಾಚಾರ್ಯ ಚರಿತ್ರ ಪುಟ 328)

ಆ ಹರಿಯನ್ನು ಸ್ತುತಿಸುವ ನಾಲಿಗೆಯಿಂದ ಇತರರನ್ನು ಸ್ತುತಿಸುವುದಿಲ್ಲ. ನನ್ನಿಂದ ಈ ನೀಚವಾದ ಪದಗಳನ್ನು ಹೇಗೇ ನುಡಿಯಲಿ? ಶ್ರೀನಿವಾಸನನ್ನು ಬಿಟ್ಟು ಇತರರನ್ನು ಸ್ತುತಿಸುವುದು ನನ್ನ ತಂಗಿಯ ಜೊತೆ ಸಂಸಾರ ಮಾಡುವುದೂ ಒಂದೇ ಎಂದು ಹೇಳಿದ ಅನ್ನಮಯ್ಯ ನರಸಿಂಹರಾಯನ ಮಾತುಗಳನ್ನು ತಿರಸ್ಕರಿಸಿದ.

'ನನಗೆ ನೀನೂ ಬೇಡ. ನಿನ್ನ ಸ್ನೇಹವೇ ನನಗೆ ಬೇಡ' ಎಂದು ಅವನ ಸ್ನೇಹವನ್ನೇ ತಿರಸ್ಕರಿಸಿದ. ಆ ಮಾತಿಗೆ ಕೋಪಗೊಂಡ ನರಸಿಂಹರಾಯ ಅನ್ನಮಯ್ಯನನ್ನು ಬಂಧಿಸಿ ಸಂಕೋಲೆಗಳಿಂದ ಕಟ್ಟಿಹಾಕಬೇಕೆಂದು ಸೇವಕರಿಗೆ ಆಜ್ಞೆ' ಮಾಡಿದ. ಅನ್ನಮಯ್ಯನನ್ನು ಬಂಧಿಸುವುದಕ್ಕೆ ಇಷ್ಟವಿಲ್ಲದಿದ್ದರೂ ಅವರು ರಾಜಾಜ್ಞೆಯನ್ನು ಪಾಲಿಸಬೇಕೆಂದು ಅನ್ನಮಯ್ಯನನ್ನು ಸಂಕೋಲೆಗಳಿಂದ ಬಂಧಿಸಿದರು.

ಅಂಕಟಿ ವೇಳಲ ನಲಪೈಣ ವೇಳಲನು
ತೆಂಕುವ ಹರಿನಾಮಮವೇ ದಿಕ್ಕು ಮರಿಲೇದು
ಕೊರಮಾಲಿ ವೂನ್ನ ವೇಲಾ ಕುಲಮು ಚೇಡಿನ ವೇಳ
ಚೆರವಡಿ ವೊರುಲಚೇಮ್ ಜಿಕ್ಕಿನ ವೇಳಾ
ವೋರಪ್ಪೆನ ಹರಿನಾಮ ಮೊಕ್ಕಟೆ ಗತಿಗಾಕ
ಮರೀಚಿ ತಪ್ಪಿನನ್ನೈನ ಮರಿಳೆದು ತೆರಂಗು
ಸಂಕೇಳ ಬೆಟ್ಟಿನ ವೇಳ ಚಂಪ ಬಿಲಿಚಿನ ವೇಳಾ
ಅಂಕಿಳಿಗಾ ನಪ್ಪುಲವಾ ರಂಗಿನ ವೇಳಾ

ವೆಂಕಟೇಶು ನಾಮಮೆ ವಿಡಿಪಿಂಚ ಗತಿಗಾಕ
ಮಂಕು ಬುದ್ಧಿಮ್ ಬೋರಲಿನ ಮಾರಿಳೆದು ತೆರಂಗು (1-158)

ಎನ್ನುತ್ತಾ ಅನ್ನಮಯ್ಯ ಸಂಕೀರ್ತನೆಯನ್ನು ಹಾಡುತ್ತಲೇ ಬಂಧನದ ಶೃಂಖಲೆಗಳು ಬಿಡಿಸಿಕೊಂಡವು ಕಾವಲುಗಾರರ ಎದೆ ಝಲ್ಲೆಂದಿತು. ಭಯದಿಂದ ಕೂಡಲೇ ರಾಜನ ಬಳಿಗೆ ಹೋಗಿ ವಿಷಯ ವನ್ನು ತಿಳಿಸಿದರು. ರಾಜನು ಅವರ ಮಾತುಗಳನ್ನು ನಂಬಲಿಲ್ಲ. ಹಾಸ್ಯ ಮಾಡಿದ. ಅನ್ನಮಯ್ಯನ ಬಳಿಗೆ ಬಂದು "ಸೇವಕರನ್ನು ಹೆದರಿಸಿ ಮಾಯೆ ಮಾಡುತ್ತಿದ್ದೀ. ನೀನು ಎಷ್ಟೇ ಮಾತುಗಳನ್ನು ಹೇಳಿದರೂ ನಾನು ನಿನ್ನನ್ನು ಬಿಡುವುದಿಲ್ಲ" ಎಂದು ಹೇಳಿ ಪುನಃ ಸಂಕೋಲೆಗಳನ್ನು ತೊಡಿಸಿದ ರಾಜನ ಮೂರ್ಖಬುದ್ಧಿಗೆ ಅನ್ನಮಯ್ಯ ತನ್ನ ಮನಸ್ಸಿನಲ್ಲೇ ನಕ್ಕ. ಸೇವಕರು ಪುನಃ ಅನ್ನಮಯ್ಯನನ್ನು ಸಂಕೋಲೆ ಗಳಿಂದ ಬಂಧಿಸಿದರು. ಮೊದಲೇ ಹೇಳಿದ ಹಾಡನ್ನು ಪುನಃ ಆರ್ತಿಯಿಂದ ಹಾಡುತ್ತಿದ್ದ. ಕಿರುಬೆರಳಿನಷ್ಟು ಇದ್ದ ಮೊಳೆಗಳು ನೆಲದ ಮೇಲೆ ಉದುರಿದುವು. ಈ ಬಾರಿ ರಾಜನೂ ಭಯಗೊಂಡ. ಅನ್ನಮಯ್ಯನ ಪಾದಗಳ ಮೇಲೆ ಬಿದ್ದು ಕಣ್ಣೀರನ್ನು ಹರಿಸಿದ. ಗದ್ಗದಿತವಾದ ಸ್ವರದಿಂದ "ಗುರುವರ್ಯಾ! ಮಾಡಬಾರದ ಪಾಪವನ್ನು ಮಾಡಿದ ನನ್ನನ್ನು ಮನ್ನಿಸಬೇಕೆಂದು ಕೇಳಿಕೊಂಡ. ನೀನೆ ನನ್ನ ವೆಂಕಟೇಶ್ವರನೆಂದು,ತನ್ನ ಮೇಲೆ ದಯೆ ತೋರಬೇಕೆಂದು ಬೇಡಿಕೊಂಡ. ಪನ್ನೀರಿನಿಂದ ಕಾಲುಗಳನ್ನು ತೊಳೆದ ಪಲ್ಲಕಿಯಲ್ಲಿ ಕುಳ್ಳಿರಿಸಿ ತಾನೇ ಸ್ವತಾಹಾ ಪಲ್ಲಕಿಯನ್ನು ಹೊತ್ತುಕೊಂಡ. ಅವನ ಪಶ್ಚಾತ್ತಾಪವನ್ನು ಗಮನಿಸಿದ ಅನ್ನಮಯ್ಯ ಅವನನ್ನು ಮನ್ನಿಸಿ, ನಾಳೆಯಿಂದ ಹರಿಯನ್ನು ಕೀರ್ತಿಸುವವರನ್ನು ಸಾಧಾರಣ ವ್ಯಕ್ತಿಗಳಂತೆ ಭಾವಿಸದೆ ಪರಮ ಪೂಜ್ಯರಂತೆ ಭಾವಿಸಬೇಕೆಂದು ತಿಳಿಸಿದ.

ಇನ್ನೂ "ಧ್ಯಾನ ಮಾಡುವುದರಿಂದ ಕೃತಯುಗದಲ್ಲಿ, ಯಜ್ಞ ಮಾಡುವುದರಿಂದ ತ್ರೇತಾಯುಗದಲ್ಲಿ ಅರ್ಚಿಸುವುದರಿಂದ ದ್ವಾಪರ ಯುಗದಲ್ಲಿ, ನಾಮಸಂಕೀರ್ತನೆಯಿಂದ ಕಲಿಯುಗದಲ್ಲಿ ಆ ಶ್ರೀ ಹರಿಯನ್ನು ಭಕ್ತರನ್ನು ಅನುಗ್ರಹಿಸುತ್ತಾನೆ.ಆದ್ದರಿಂದ ನೀನು ದೇವಾದಿದೇವನಾದ ಶ್ರೀವೆಂಕಟೇಶ್ವರನ ಮೇಲೆ ಭಕ್ತಿಯಿಂದ ಆ ಸ್ವಾಮಿ ಭಕ್ತರ ಮೇಲೆ ಗೌರವ ತೋರಿ ಜೀವನ ನಡೆಸು ಎಂದು ಅವನಿಗೆ ಬುದ್ದಿ ಹೇಳಿ, ಅನ್ನಮಯ್ಯ ತಿರುಮಲೆಗೆ ಹೊರಟುಹೋದ.

ತಿರುಮಲೆಗೆ ತಲುಪಿದ ಅನ್ನಮಯ್ಯ 516 ದ್ವಿಪದ ಪಾದಗಳಿಂದ ಕೂಡಿದ "ಶೃಂಗಾರ ಮಂಜರಿ" ಎಂಬ ದ್ವಿಪದ ಕಾವ್ಯವನ್ನು ರಚಿಸಿ ಶ್ರೀನಿವಾಸನಿಗೆ ಅರ್ಪಿಸಿದ. ಅನೇಕ ಕೀರ್ತನೆಗಳಿಂದ ಸ್ವಾಮಿಯನ್ನು ಸ್ತುತಿಸುವುದರಿಂದ ಅನ್ನಮಯ್ಯ ವಾಕ್ಸುದ್ದಿಯನ್ನು ಪಡೆದು ಅವರ ಮಾತುಗಳಿಗೆ ದಿವ್ಯತ್ವವು ಬಂತು. ಕ್ರಮೇಣ ಅನ್ನಮಯ್ಯ ತಿರುವೆಂಕಟನಾಯಕನಾದ ವೆಂಕಟೇಶ್ವರನ ಆಸ್ಥಾನ ಗಾಯಕನಾದ.

## ಅನ್ನಮಯ್ಯ - ಪುರಂದರದಾಸರು:

ಅನ್ನಮಯ್ಯನಿಗೆ ವೆಂಕಟೇಶ್ವರ ಸ್ವಾಮಿಯಂತೆ ಪುರಂದದಾಸರಿಗೆ ಪಾಂಡುರಂಗ ವಿಠ್ಠಲ ಉಪಾಸ್ಯ ದೈವ. ಇವರು ವ್ಯಾಸರಾಯರ ಶಿಷ್ಯರು. ಹರಿದಾಸ ಸಂಪ್ರದಾಯದ ಅವಲಂಬಕರು. ಕನ್ನಡದಲ್ಲಿ ಪುರಂದರ ವಿಟ್ಠಲನೆಂಬ ಮುದ್ರೆಯೊಂದಿಗೆ ಸುಮಾರು 5 ಲಕ್ಷ ಕೀರ್ತನೆಗಳನ್ನು ಇವರು ರಚಿಸಿರುವಂತೆ ಹೇಳುತ್ತಾರೆ. ಅಂತಹ ಪುರಂದರದಾಸರು ಅನ್ನಮಾಚಾರ್ಯರ ಕೀರ್ತನೆಯ ಪ್ರಾಮುಖ್ಯತೆಯನ್ನು ಸಂಕೀರ್ತನೆಯ ವೈಭವವನ್ನು ತಿಳಿದುಕೊಂಡರು. ಅನ್ನಮಾಚಾರ್ಯರ ಸಂಕೀರ್ತನೆಯ ಪ್ರಭಾವದ ಬಗೆಗೆ ತಿಳಿದುಕೊಂಡ ನಂತರ ಅನ್ನಮಯ್ಯ ಸಾಕ್ಷಾತ್ತು ಶ್ರೀ ಹರಿಯ ಅಂಶವೆಂದು ಗ್ರಹಿಸಿ, ಅವರನ್ನು ದರ್ಶಿಸಬೇಕೆಂದು ಕೊಂಡರು. ತಿರುಮಲೆಗೆ ಬಂದು ಸ್ವಾಮಿಯನ್ನು ಆ ಸ್ವಾಮಿಯ ಭಕ್ತನಾದ ಅನ್ನಮಯ್ಯನನ್ನು ದರ್ಶಿಸಿದರು. ಅನ್ನಮಯ್ಯ ಸಹಾ ಪುರಂದರದಾಸರು ಸಾಕ್ಷಾತ್ತು ಪಾಂಡುರಂಗ ವಿಠ್ಠಲನೆಂದು ಭಾವಿಸಿದರು.

## ಅನ್ನಮಯ್ಯನ ರಚನೆಗಳು:

ಅನ್ನಮಯ್ಯ 32 ಸಾವಿರ ಸಂಕೀರ್ತನೆಗಳನ್ನು ರಚಿಸಿ ಅವೆಲ್ಲವನ್ನೂ ವೆಂಕಟೇಶನಿಗೆ ಅಂಕಿತಗೊಳಿಸಿದರು. ಅವುಗಳಲ್ಲಿ ಕೆಲವು ಯೋಗಮಾರ್ಗಕ್ಕೆ ಸೇರಿದುವು. ಇನ್ನೂ ಕೆಲವು ಶೃಂಗಾರ ಕೀರ್ತನೆಗಳು ಇನ್ನೂ ಕೆಲವು ವೈರಾಗ್ಯ ಪ್ರಧಾನವಾದುವು. ಈ ಕೀರ್ತನೆಗಳೊಂದಿಗೆ ದ್ವಿಪದ ಪ್ರಬಂಧ ರೂಪದಲ್ಲಿ ರಾಮಾಯಣವನ್ನು ವೆಂಕಟಾಚಲ ಮಹಾತ್ಮ್ಯ ಎಂಬ ಸಂಸ್ಕೃತ ಕಾವ್ಯವನ್ನು ಶೃಂಗಾರಮಂಜರಿಯೊಂದಿಗೆ 12 ಶತಕಗಳನ್ನು (ವೆಂಕಟೇಶ್ವರ ಶತಕ ಮಾತ್ರವೇ ಲಭಿಸಿದೆ) ರಚಿಸಿದರು.

## ತಾಳ್ಳಪಾಕ ತಿಮ್ಮಕ್ಕ:

ಅನ್ನಮಾಚಾರ್ಯರ ಮೊದಲ ಹೆಂಡತಿಯಾದ ತಾಳ್ಳಪಾಕ ತಿರುಮಲಾಂಬ. ಈಕೆ ತಿರುಮಲಮ್ಮ, ತಿರುಮಲಕ್ಕ, ತಿಮ್ಮಕ್ಕ ಎಂಬ ನಾಮಾಂತರಗಳು ಇವೆ. ಮೊದಲ ತೆಲುಗು ಕವಯಿತ್ರಿ ಈ ತಾಳ್ಳಪಾಕ ತಿಮ್ಮಕ್ಕ. ಈಕೆ ಬರೆದ ಏಕೈಕ ಗ್ರಂಥ ಸುಭದ್ರಾ ಕಲ್ಯಾಣ. ಇದು 1163 ಪಾದಗಳಿಂದ ಬರೆದ ದ್ವಿಪದ ಕಾವ್ಯ. ಈ ಗ್ರಂಥ ಮಹತ್ತರವಾದುದು. ಈ ಸುಭದ್ರಾ ಕಲ್ಯಾಣಕ್ಕೆ ಆಧಾರ ಮಹಾಭಾರತ. ಅಚ್ಚ ತೆಲುಗಿನಲ್ಲಿ ಈ ಕಾವ್ಯವನ್ನು ಬರೆದು ರಚಿಸಿದ್ದಾಳೆ. ಆಕೆ ತನ್ನ ಗ್ರಂಥದಲ್ಲಿ ಮೊದಲ ನುಡಿಯಲ್ಲಿ ಅರ್ಜುನನ ಕೈಯಲ್ಲಿ ತಿರುಮಲೆಯ ಸಂದರ್ಶನವನ್ನು ಮಾಡಿಸಿದ್ದಾಳೆ. ತನ್ಮೂಲಕ ಶ್ರೀ ವೆಂಕಟೇಶ್ವರನ ಮೇಲಿನ ತನ್ನ ಭಕ್ತಿಯನ್ನು ಪ್ರಕಟಿಸಿದ್ದಾಳೆ. ಸುಭದ್ರೆಯ ಪಾತ್ರವನ್ನು ತಿದ್ದಿರುವ ರೀತಿ ಮೊದಲಾದ ವಿಷಯದಲ್ಲಿ ತಿಮ್ಮಕ್ಕನ ನೈಪುಣ್ಯವನ್ನು ನಂತರದ ತಲೆಮಾರಿನವರಾದ ಚೆಮಕೂರ ವೆಂಕಟಕವಿಯಂತಹವರು ಅನುಸರಿಸಿದರು.

## ಅನ್ನಮಯ್ಯನ ಸಂತತಿ:

ತನ್ನ ಸಂಕೀರ್ತನೆಗಳಿಂದ ತಿರುಮಲೆಯ ವೆಂಕಟೇಶ್ವರನನ್ನು ಅನ್ನಮಯ್ಯ ಮೆಚ್ಚಿಸಿದ. ಶ್ರೀನಿವಾಸನ ಆಶೀರ್ವಾದದಿಂದ ತನ್ನಂತಹಾ ಇಬ್ಬರು ಗಂಡು ಮಕ್ಕಳನ್ನು ಪಡೆದ. ಅವರು ನರಸಯಾಚಾರ್ಯ, ತಿರುಮಲಾಚಾರ್ಯ, ಇಬ್ಬರೂ ಭಕ್ತಿಯಲ್ಲೂ, ಸಾಹಿತ್ಯ ಸೇವೆಯಲ್ಲೂ ತಮ್ಮ ತಂದೆಯನ್ನೇ ಹೋಲುತ್ತಿದ್ದರು.ಪೆದತಿರುಮಲಯ್ಯನೆಂದೇ ಪ್ರಸಿದ್ಧಿ ಪಡೆದ ತಿರುಮಲಾಚಾರ್ಯ ತನ್ನ ತಂದೆಯ ಆಣತಿಯಂತೆ ದಿನಕ್ಕೊಂದು ಸಂಕೀರ್ತನೆಯನ್ನು ಬರೆದು ಶ್ರೀನಿವಾಸನಿಗೆ ಸಮರ್ಪಿಸುತ್ತಿದ್ದನೆಂದು ಪ್ರತೀತಿ. ಶೃಂಗಾರ, ಆಧ್ಯಾತ್ಮ ವೆಂಕಟೇಶ್ವರ ವಚನಗಳು, ಶೃಂಗಾರ ದಂಡಕ, ಚಕ್ರವಾಳ ಮಂಜರಿ, ವೆಂಕಟೇಶ್ವರೋದಾಹರಣಂ, ನೀತಿಸೀಸ ಶತಕ, ಶ್ರೀವೆಂಕಟೇಶ್ವರ ಪ್ರಭಾತಸ್ತವನದಂತಹ ಗ್ರಂಥಗಳ ಬರೆದು ಸ್ವಾಮಿಯ ಸೇವೆಯಲ್ಲಿ ಧನ್ಯನಾದ. ಈತ ತಿರುಮಲೆ ವೆಂಕಟೇಶ್ವರನಿಗೆ ವಿಶಿಷ್ಟವಾದ ಸೇವೆಯನ್ನು ಮಾಡಿರುವಂತೆ ಶಾಸನಾಧಾರಗಳ ಮೂಲಕ ತಿಳಿದು ಬಂದಿದೆ. ಈತನ ಕುಮಾರನಾದ ಚಿನ ತಿರುಮಲಯ್ಯ, ಪೆದ ತಿರುವೆಂಗಳನಾಥ, ತಿರುವೆಂಗಳನಾಥ (ಚಿನ್ನನ್ನ), ಕೋನೇಟಿ ತಿರು ವೆಂಗಳನಾಥನೂ ತಾತನಾದ ಅನ್ನಮಾಚಾರ್ಯ, ತಂದೆಯಾದ ತಿರು ಮಲಚಾರ್ಯರ ಮಾರ್ಗದಲ್ಲೇ ನಡೆದ ಸಾಹಿತ್ಯ ಸೇವೆಯನ್ನು ಮಾಡಿ ದರು. ಅನ್ನಮಯ್ಯನ ಮರಿಮಗ ಚಿನ ತಿರುಮಲಯ್ಯನ ಕುಮಾರ ನಾದ ತಿರುವೆಂಗಳಪ್ಪ. ಅನ್ನಮಯ್ಯ ಮಗಳಾದ ತಿರುಮಲಾಂಬೆಯ ಮಗನಾದ ರೇವಣೂರಿ ವೆಂಕಟಾರ್ಯ ಇವರೂ ತಮ್ಮ ತಾತ, ಮುತ್ತಾ ತಂದಿರಂತೆ ಶ್ರೀವೇಂಕಟೇಶ್ವರನ ಕೃಪೆಗೆ ಪಾತ್ರರಾಗುವಂತಹಾ ಸಂಗೀತ ಸಾಹಿತ್ಯ ಪದಾರ್ಚನೆಯಿಂದ ಸ್ವಾಮಿಯನ್ನು ಸೇವಿಸಿದರು ಧನ್ಯರಾದರು.

ಈ ರೀತಿ ಒಂದು ಬೀಜವು ಹೆಮ್ಮರವಾದಂತೆ ಅನ್ನಮಯ್ಯ ನೊಂದಿಗೆ ಪ್ರಾರಂಭವಾದ ಶ್ರೀನಿವಾಸನ ಸಾಹಿತ್ಯ ಪದಾರ್ಚನೆ, ಸಂಕೀರ್ತನೆಯ ಯಜ್ಞ, ಹೆಚ್ಚು ಕಡಿಮೆ ಅನ್ನಮಯ್ಯನ ನಂತರ ಐದು ತಲೆಮಾರಿನವರೆಗೂ ಮುಂದುವರೆಯಿತು. ಇವರ ಸಾಹಿತ್ಯ ಸೇವೆಗೆ ಶ್ರೀನಿವಾಸನು ಆನಂದದಲ್ಲಿ ಓಲಾಡಿದ. ಅಂತಹಾ ಧನ್ಯತೆಯನ್ನು ಪಡೆದ ಕೇವಲ ತಾಳ್ಳಪಾಕ ವಂಶವನ್ನೇ ಅಲ್ಲದೇ ಪ್ರಂಪಚವನ್ನೆಲ್ಲಾ ಧನ್ಯರನ್ನಾಗಿಸಿದರು ಈ ಮಹಾನುಭಾವರು.

ಇಂತಹಾ ಸಂಕೀರ್ತನೆಯ ವಿರಾಟ್ರೂಪಕ್ಕೆ ಮೂಲಕಾರಣನಾದ ಅನ್ನಮಯ್ಯ 95 ವರ್ಷಗಳ ಪರಿಪೂರ್ಣ ಜೀವನವನ್ನು ನಡೆಸಿ ದುಂದುಭಿ ನಾಮ ಸಂವತ್ಸರದ ಫಾಲ್ಗುಣ ಬಹುಳ ದ್ವಾದಶಿಯಂದು (1503 ಫೆಬ್ರವರಿ 23) ರಂದು ತಮ್ಮ ಆರಾಧ್ಯ ದೈವವಾದ ಶ್ರೀ ವೆಂಕಟೇಶ್ವರನಲ್ಲಿ ಐಕ್ಯನಾದ, ಪದಕವಿತಾಪಿತಾಮಹ, ಸಂಕೀರ್ತನಾಚಾರ್ಯ, ಪಂಚಾ ಗಮ ಸಾರ್ವಭೌಮ, ದ್ರವಿಡಾಗಮ ಸಾರ್ವಭೌಮನಂತಹಾ ಬಿರು ದಾಂಕಿತನಾದ ಅನ್ನಮಯ್ಯ ಚರಿತ್ರೆ ತಿರುಮಲೆಯ ಚರಿತ್ರೆಯಲ್ಲಿ ಎಂದಿಗೂ ಅಳಿಸಲಾರದ ಒಂದು ವಿಶೇಷ ಅಧ್ಯಾಯ.




## ಪರಧನವು ಪ್ರಾಣ ಹಾನಿಯ ಪಾಷಾಣ

ಪರುಲ ಸೊಮ್ಮುಲನ್ನಿ - ಪಾಷಾಣ ಮೈಯುಂಟೆ
ತಾಪತ್ರಯಾದುಲು - ತನಕುಲೇವು.
ಪರುಲ ಸೊಮ್ಮುವಲ್ಲ - ಪ್ರಾಣ ಹಾನವುನುರಾ
ನಾದ ಬ್ರಹ್ಮಾನಂದ - ನಾರೇಯಣಕವಿ.

ಪರರ ಸ್ವತ್ತುಗಳನ್ನು ವಿಷಸಮಾನವಾಗಿ ತಿಳಿಯುವವನಿಗೆ ತಾಪತ್ರಯವೇ ಮೊದಲಾದ ಬಾಧೆಗಳಿರುವುದಿಲ್ಲ. ಪರರ ಒಡವೆಯಿಂದ ಪ್ರಾಣ ಹಾನಿಯಾಗುತ್ತದೆ. "ಪರರ ಸ್ವತ್ತು ಪಾಷಾಣ" ವೆಂಬ ಮಾತಿದೆ. ಮನುಷ್ಯನಾದ ವನು ಯಾವತ್ತೂ ಎಂದಿಗೇ ಆಗಲೀ, ಪರರ ಧನ, ಧಾನ್ಯ, ವಸ್ತುಗಳಿಗೆ ಆಸೆಪಟ್ಟು ಕೆಟ್ಟ ಮಾರ್ಗದಲ್ಲಿ ಅದನ್ನು ಪಡೆದರೆ, ಅದರಿಂದ ತಮ್ಮ ಪ್ರಾಣಕ್ಕೆ ಅಪಾಯವನ್ನುಂಟು ಮಾಡಿ ಕೊಳ್ಳುವುದರಲ್ಲಿ ಯಾವುದೇ ರೀತಿಯ ಸಂದೇಹ ವಿಲ್ಲ.

ಪರರ ಸ್ವತ್ತನ್ನು ದೋಚುವಂತಹ ಸಂದರ್ಭ ದಲ್ಲಿ ಸಿಕ್ಕಿ ಬಿದ್ದು ಜೈಲು ಪಾಲಾಗಬಹುದು. ಇಲ್ಲವಾದಲ್ಲಿ ಪ್ರಾಣವನ್ನು ಕಳೆದುಕೊಳ್ಳ ಬಹುದು. ಆದ್ದರಿಂದ ಇವೆಲ್ಲದರ ತಾಪತ್ರಯ ವಿಲ್ಲದೇ ಇಂತಹವುಗಳಿಂದ ಹೊರ ಬಂದು ನಿಶ್ಚಿಂತೆಯಿಂದಿರು ಎಂಬ ಬುದ್ಧಿ ಮಾತನ್ನು ಹೇಳುವರು.

**ಶ್ರೀ ಹಯಗ್ರೀವ ಜಯಂತಿ**
**03-08-2020**




**ವಿಶುದ್ಧ ವಿಜ್ಞಾನ ಘನ ಸ್ವರೂಪಂ ವಿಜ್ಞಾನ ವಿಶ್ರಾಣನ ಬದ್ಧ ದೀಕ್ಷಂ**
**ದಯಾನಿಧಿಂ ದೇಹಭೃತಾಂ ಶರಣ್ಯ ದೇವಂ ಹಯಗ್ರೀವಮಹಂ ಪ್ರಪದ್ಯೆ**

ನಿರ್ಮಲವಾದ ವಿಜ್ಞಾನವೇ ಸ್ವರೂಪವಾಗಿ ಪಡೆದವನು, ಹಾಗೆ ವಿಜ್ಞಾನವನ್ನು ಅನುಗ್ರಹಿಸುವುದೇ ದೀಕ್ಷೆಯಾಗಿ ಪಡೆದವನು, ದಯೆಗೆ ನಿಧಿ, ಪ್ರಾಣಗಳಿಗೆ ಶರಣು ಹೋಗು ಎಂದು ಶ್ರೀ ಹಯಗ್ರೀವ ದೇವರ ಶರಣು ಬೇಡುತ್ತಿದ್ದೇನೆ.

ಶ್ರೀ ವೇದಾಂತ ದೇಶಿಕರು - ಹಯಗ್ರೀವ ಸ್ತೋತ್ರ- 5

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಶಾಸ್ತ್ರೋಕ್ತವಾಗಿ ಪವಿತ್ರೋತ್ಸವ ನಡೆಯಿತು. ಶ್ರೀ ಶ್ರೀ ಶ್ರೀ ದೊಡ್ಡ ಜೀಯರ್ ಸ್ವಾಮಿ, ಶ್ರೀ ಶ್ರೀ ಶ್ರೀ ಚಿಕ್ಕ ಜೀಯರ್ ಸ್ವಾಮಿಗಳು, ತಿ.ತಿ.ದೇ. ಧರ್ಮಕರ್ತ ಮಂಡಲಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ದಂಪತಿಗಳು, ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್‌ಕುಮಾರ್ ಸಿಂಘಾಲ್ ಐ.ಎ.ಎಸ್., ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ ಧರ್ಮಾರೆಡ್ಡಿ ದಂಪತಿಗಳು, ಉನ್ನತಾಧಿಕಾರಿಗಳು ಪಾಲ್ಗೊಂಡರು.

















**ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಆಲಯದಲ್ಲಿ
ಶಾಸ್ತ್ರೋಕ್ತವಾಗಿ ಶ್ರೀ ವರಲಕ್ಷ್ಮಿ ವ್ರತ ನಡೆಯಿತು.
ತಿ.ತಿ.ದೇ. ಧರ್ಮಕರ್ತ ಮಂಡಲಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ
ದಂಪತಿಗಳು, ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ
ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್., ದಂಪತಿಗಳು,
ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ಪಿ. ಬಸಂತ್ ಕುಮಾರ್,
ಐ.ಎ.ಎಸ್., ದಂಪತಿಗಳು, ಉನ್ನತಾಧಿಕಾರಿಗಳು ಪಾಲ್ಗೊಂಡರು.**



















ತಿರುಪತಿ ಶ್ರೀ ಕೋದಂಡರಾಮ ಸ್ವಾಮಿಯವರ ಆಲಯದಲ್ಲಿ ಶಾಸ್ತ್ರೋಕ್ತವಾಗಿ ನಡೆದ ಪವಿತ್ರೋತ್ಸವದ ದೃಶ್ಯಗಳು.



ತಿರುಚಾನೂರು
ಶ್ರೀ ಪದ್ಮಾವತಿ ಅಮ್ಮನವರ ಆಲಯದಿಂದ
ಶ್ರೀ ವರಲಕ್ಷ್ಮಿ ವ್ರತದ ಸಂದರ್ಭವಾಗಿ
ತಿ.ತಿ.ದೇ.ಯು ಅಂಚೆಶಾಖೆಯ ಮುಖಾಂತರ
ಭಕ್ತರಿಗೆ ಪ್ರಸಾದದ ವಿತರಣೆಯನ್ನು ಮಾಡುತ್ತಿದೆ.





**ಹರಿದಾಸರ ಪರಿವಾರ ಮತ್ತು ದಿನಚರ್ಯೆ:**

೧.ಸಹಜವಾದ ಯಾತ್ರೆ - ಪ್ರವಾಸ

೨.ದಾನ ಧರ್ಮ ಕೊಳ್ಕೊಡುಗೆ.

೩.ರಾಜನಿಗೆ ಯಜಮಾನನಿಗೆ ತಿಳಿಹೇಳುವುದು.

೪.ಕಲೆ,ಸಾಹಿತ್ಯ, ಸಂಗೀತಗಳ ಪ್ರಚಾರ ಮತ್ತು ಪ್ರಸಾರ.

೫.ರಾಷ್ಟ್ರೀಯ ಗ್ರಂಥಗಳನ್ನು ಗೌರವಿಸುವುದು.

೬.ಶಿಷ್ಟರ ರಕ್ಷಣೆ ಮತ್ತು ದುಷ್ಟರ ಶಿಕ್ಷೆಗೆ ಆಗ್ರಹಿಸುವುದು.

೭.ರಾಷ್ಟ್ರಕ್ಕಾಗಿ, ಪ್ರಜೆಗಳಿಗಾಗಿ, ಧರ್ಮಸ್ಥಾಪನೆಗಾಗಿ, ತನು, ಮನ, ಧನ, ತ್ಯಾಗ ಮಾಡಿದವರನ್ನು ಶ್ಲಾಘಿಸುವುದು.

೮.ದುಷ್ಟರಿಂದ,ಪಾಪಿಗಳಿಂದ,ವಚನ ಭ್ರಷ್ಟರಿಂದ ಎಚ್ಚರವಿರಲು ಸಮಾಜದ ಸಜ್ಜನರಿಗಾಗಿ ಒಂದು ವ್ಯವಹಾರ ಸಂಹಿತೆ ರೂಪಿಸಿ ಕಾಲ ಕಾಲಕ್ಕೆ ದೇಶಸಂಚಾರ ಮಾಡಿ ಹೇಳುತ್ತ ಹೋಗುವುದು.

೯.ಬದರಿಯಿಂದ ರಾಮೇಶ್ವರದವರೆಗೆ, ದ್ವಾರಕೆಯಿಂದ-ಪುರಿಯವರೆಗೆ ಇರುವ ಎಲ್ಲ ಜನ ಜೀವನ ಪದ್ಧತಿಯನ್ನು ತಮ್ಮ ಭಾಷೆ ಮತ್ತು ಅನುಭವದ ಮೂಸೆಯಲ್ಲಿ ದಾಖಲಿಸುವುದು.

೧೦.ಸ್ವಚ್ಛತೆ, ಪ್ರಾಮಾಣಿಕತೆ, ರಾಜಾಜ್ಞೆ ಪಾಲನೆ, ಪರಮಾತ್ಮನ ಪ್ರಾರ್ಥನೆ, ಲೋಕಸ್ನೇಹ, ಲೋಕಾನುಭವ.

ಈ ಮೇಲಿನ ದಶಲಕ್ಷಣಗಳನ್ನು ಹೊಂದಿದ ದಾಸರು ರಾಷ್ಟ್ರ ನಿರ್ಮಾಣದಲ್ಲಿ ತಮ್ಮ ಕೊಡುಗೆ ನೀಡಿದ್ದಾರೆ. ಇಂದು ನಾವು ಪಠ್ಯಪುಸ್ತಕಗಳಲ್ಲಿ ಓದುವ ರಾಷ್ಟ್ರ ಚಿಂತಕರು, ಅರ್ಥಶಾಸ್ತ್ರ ಚಿಂತಕರು, ಸಮಾಜಶಾಸ್ತ್ರ ಚಿಂತಕರು,ಮೊದಲಾದವರ ಸಿದ್ಧಾಂತ ಮತ್ತು ಅದರ ಅನುಸರಣೆಯ ವಿಧಾನಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಆ ಎಲ್ಲ ಸಂವೇದನೆಗಳು ಮತ್ತು ಆಶಯಗಳು ಹರಿದಾಸರ ಕೃತಿಗಳಲ್ಲಿಯೂ ಸಿಗುತ್ತವೆ. ಅದನ್ನು ಹೆಕ್ಕಿ ಹೆಜ್ಜೇನಿನಂತೆ ಉಣಬಡಿಸುವ ರಾಷ್ಟ್ರ ಭಕ್ತ ವಿದ್ವಾಂಸರ ಕೊರತೆ ಇದೆ.ಒಂದಷ್ಟು ಸಮಯ, ಸಿದ್ಧಾಂತದ ಅಧ್ಯಯನದ ಅವಶ್ಯಕತೆಯಿದೆ. ಕೆಲವು ಸೌಲಭ್ಯಗಳನ್ನು ಒದಗಿಸಿದರೆ ಪುರಂದರಾದಿ ಹರಿದಾಸರು ಸಮಾಜ ದೃಷ್ಟಾರರು ಮತ್ತು ರಾಷ್ಟ್ರ ನಿರ್ಮಾಪಕರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ ಎಂಬುದನ್ನು ಪ್ರಸ್ತುತಪಡಿಸಬಹುದು. ಏಕೆಂದರೆ ಪುರಂದರದಾಸರು ಒಬ್ಬ ಯಶಸ್ವೀ ಲೇವಾದೇವಿ ಕೆಲಸ ಮಾಡಿದವರು.ಅದಕ್ಕಿಂತ ಯಶಸ್ವಿಯಾಗಿ ಈ ಭಕ್ತಿಯ ಲೇವಾದೇವಿ ಮುಖಾಂತರ ನೈಜ ವೈರಾಗಿಗಳನ್ನು ಗುರುತಿಸುವ ಕ್ರಮ ಕಂಡು ಕೊಂಡವರು. ದುಡಿಯದೇ ದಾಸವೇಶದ ಸೋಗು ಹಾಕಿದ ಮೈಗಳ್ಳರನ್ನು ದುಡಿಮೆಗೆ ಹಚ್ಚಿ ಕರ್ಮ ಸಿದ್ಧಾಂತದ ಪರಧ್ವನಿ ಎತ್ತಿದವರು. ಮುಂದಿನ ಪರಂಪರೆಯ ಜಗನ್ನಾಥದಾಸರು ಮಠಾಧೀಶರನ್ನು ಪರೀಕ್ಷಿಸಿ ಶುದ್ಧ, ಸಾತ್ವಿಕ, ಜ್ಞಾನ, ಭಕ್ತಿ, ವೈರಾಗ್ಯಗಳ ಪರೀಕ್ಷೆಗೆ ಒಳಪಡಿಸಿದರು.ಈ ಕೆಳಗಿನ ಷಟ್ಪದಿಯಲ್ಲಿ ಯತಿ ಹೇಗಿರಬಾರದು. ಸಮಾಜಕ್ಕೆ ಯತಿಯಿಂದ ನೈಜ ಫಲ ಬರಬೇಕಾದರೆ ಹೇಗಿರಬೇಕು ಎಂಬ ಯತಿಗಳ ಆಚಾರ ಸಂಹಿತೆಯನ್ನೇ ನಿರ್ಮಿಸಿದರು. ಇದರಿಂದಾಗಿ ರಾಷ್ಟ್ರ ನಿರ್ಮಾಣಕ್ಕೆ ಮೋಸ ಮಾಡುವ ಯತಿಗಳ ಕಾಟ ತಪ್ಪಿತು.



# ರಾಷ್ಟ್ರ ನಿರ್ಮಾಣ ಹರಿದಾಸರು

- ಡಾ॥ ವಾಸುದೇವ ಅಗ್ನಿಹೋತ್ರಿ



ಕಂಡನೀರೊಳುಮುಳುಗಿ ದೇಹವ
ದಂಡಿಸಲು ಫಲವೇನು ದಂಡ ಕ
ಮಂಡಲಂಗಳಧರಿಸಿ ಯತಿಯೆಂದೆನಿಸಿ ಫಲವೇನು
ಅಂಡಜಾಧಿಪನಂಸಗನ ಪದ
ಪುಂಡಲೀಕದಿ ಮನವಹರ್ನಿಶಿ
ಬಂಡುಣಿಯವ್ವೋಲಿರಿಸಿ ಸುಖಪಡದಿಪ್ಪ ಮಾನವನು

ಇನ್ನೂ ಖಚಿತವಾಗಿ,ತಾರ್ಕಿಕವಾಗಿ ಹರಿದಾಸರ ಕೊಡುಗೆಯನ್ನು ಸೋದಾಹರಣವಾಗಿ ಹೇಳುವುದಾದರೆ, ಹರಿದಾಸರು ಯುಗ ಯುಗಗಳಿಂದ ಬಂದ ಸನಾತನ ಧರ್ಮ ಆರ್ಷೇಯವಾಣಿಯ ಯಾವ ಸಿದ್ಧಾಂತವನ್ನು ಖಂಡಿಸಿಲ್ಲ, ಅಲ್ಲಗಳೆದಿಲ್ಲ, ಹೀಗಾಗಿ ಇವರು ರಾಷ್ಟ್ರದ ಸ್ಥಾಪಿತ ಮೌಲ್ಯಗಳು ಹಾಗೂ ಮಾನ ಬಿಂದುಗಳಾದ ಗಂಗಾ, ಗೀತಾ, ಗಾಯ, ಗುರು, ಗಾಯತ್ರಿ ಇವೆಲ್ಲವುಗಳನ್ನು

ಗುರುತಿಸಿ ಗೌರವಿಸಿ, ಪೂಜಿಸಿದ್ದಾರೆ.

ಜ್ಞಾನ, ಭಕ್ತಿ ವೈರಾಗ್ಯವನ್ನು ಒಪ್ಪಿದ್ದಾರೆ.

ಕಾಯಾ, ವಾಚಾ, ಮನಸಾ-ತನು, ಮನ, ಧನ ಸೇವೆಯನ್ನು ಗೌರವಿಸಿದ್ದಾರೆ.

ವೇದ, ಉಪನಿಷತ್ತು, ರಾಮಾಯಣ,ಭಾರತ, ಭಾಗವತ, ಗೀತೆ ಅಷ್ಟಾದಶ ಪುರಾಣ ಮತ್ತು ಷಟ್‌ಶಾಸ್ತ್ರಗಳನ್ನು ಹಾಗೂ ಪುನರ್ಜನ್ಮದ ಸಿದ್ಧಾಂತವನ್ನು ನಂಬಿದ್ದಾರೆ.

ಪಾಪ ಪುಣ್ಯ ಕರ್ಮ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ.

ಚತುರ್ವಿಧ ಪುರುಷಾರ್ಥಗಳನ್ನು ಗೌರವಿಸಿದ್ದಾರೆ.

ಚತುರಾಶ್ರಮವನ್ನು ಆಚರಿಸಿದ್ದಾರೆ

ಕನ್ನಡದ ಶರಣರಂತೆ, ತಮಿಳಿನ ಆಳ್ವಾರರಂತೆ, ಮರಾಠಿಯ ಸಂತರಂತೆ ಭಾಷಾ ಆಂದೋಲನ ಮಾತ್ರ ಹೊಸದು. ಆದರಲ್ಲಿ ಸಂಗೀತದ ಬೆರಕೆ ದಾಸರು ಮಾಡಿದ ವಿಶಿಷ್ಟ ಪ್ರಯೋಗ.

**ಮಠದಿಂದ ಹೊರಗೆ ಕನ್ನಡದ ಒಳಗೆ ಎಂಬುದು ದಾಸರ ಅಘೋಷಿತ ಸಿದ್ಧಾಂತ**

ಈ ಮೇಲಿನ ಎಲ್ಲ ಅಂಶಗಳು ದಕ್ಷಿಣ ಭಾರತದ ಅದರಲ್ಲೂ ವಿಶೇಷವಾಗಿ ಕಾವೇರಿ ಮತ್ತು ಗೋದಾವರಿ ನದಿಗಳ ಮಧ್ಯದ ಪ್ರದೇಶದಲ್ಲಿ ೧೫ ರಿಂದ ೧೯ನೇ ಶತಮಾನದ ಅವಧಿಯಲ್ಲಿ ರಾಷ್ಟ್ರದ,ನಾಡಿನ ಮೇಲ್ ಸ್ತರದ ಉನ್ನತಿಕೆಯ ದಾಖಲೆಯೇ ಹರಿದಾಸಸಾಹಿತ್ಯ.ಈ ಪ್ರದೇಶದಲ್ಲಿ ರಾಷ್ಟ್ರೀಯ ವಿಚಾರ ಆಡಳಿತ,ಆಕ್ರಮಣ,ಆಂದೋಲನ, ಆಗ್ರಹ, ಇತ್ಯಾದಿಗಳನ್ನು ಹೇಗೆ ಜನ ಜೀವನದಲ್ಲಿ ಬೆರೆತು ಬೇರೂರಿದವು ಅವುಗಳನ್ನು ಅವರ ಹಿತಕ್ಕಾಗಿ ಹೇಗೆ ಉಪಯೋಗಿಸುವಂತೆ ಮಾಡಬಹುದು ಎಂಬ ಶುದ್ಧ, ಸಂಘಟಿತ ಸಾತ್ವಿಕ, ಶಕ್ತಿಮಾನ, ಪ್ರಯೋಗವೇ ದಾಸಸಾಹಿತ್ಯ. ಇದೊಂದು ರೀತಿಯ ವಿಶಿಷ್ಟವಾದ ಆಧ್ಯಾತ್ಮ ಆಧಾರಿತ ಸಾಮಾಜಿಕ ಚಳುವಳಿ ಎಂದು ಹೇಳಬಹುದು.

೧. ವಿಜಯನಗರ ಸಾಮ್ರಾಜ್ಯ

೨. ಮರಾಠಾ ಹಾಗೂ ಪೇಶ್ವೆಯವರ ಆಳ್ವಿಕೆ

೩. ಹೈದ್ರಾಬಾದ ನಿಜಾಮನ ಆಳಿಕೆ.

೪. ಬ್ರಿಟೀಷರ ಆಳ್ವಿಕೆ.

೫. ಸಣ್ಣ ಪುಟ್ಟ ಸಂಸ್ಥಾನಗಳು.

೬. ಮೈಸೂರು ಒಡೆಯರು, ಸುರಪೂರ ಸಂಸ್ಥಾನ ಮುಂತಾದವರು.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಪ್ರಕಟಿಸಿದ ಸಮಗ್ರ ಕೃತಿಗಳನ್ನು ಗಮನಿಸಿದರೆ ಅದರಲ್ಲೇ ಸಿಗುವ ದಾಖಲೆಯಂತೆ ಹೇಳುವುದಾದರೆ ಸುಮಾರು ೧೩೯ ಜನ ಹರಿದಾಸರ ೧೬,೦೦೦ ಕೀರ್ತನೆಗಳು ಲಭ್ಯವಾಗಿದೆ. ಇವರೆಲ್ಲರೂ ಸಮಾಜದ ಒಂದು ಅಂಗವಾಗಿ ಬದುಕಿದ್ದರು ಎನ್ನುವುದು ಪರಮ ಸತ್ಯ. ಅದಲ್ಲದೇ ಕ್ರಿ.ಪೂ. ೬೦೦೦ ವರ್ಷಗಳ ಕೆಳಗಿನ ವೇದಗಳ ವಿಚಾರದಿಂದ ಹಿಡಿದು ೧೯೪೮ರ ಹೈದ್ರಾಬಾದ್ ವಿಮೋಚನೆಯವರೆಗೆ ನಡೆದ ಎಲ್ಲ ಘಟನೆಗಳನ್ನು ಸಮಾಜೋ ಆಧ್ಯಾತ್ಮಿಕ ದೃಷ್ಟಿಯಿಂದ ನೋಡಿದವರು. ಭರತ ಖಂಡದ ವಿಶೇಷತಃ ಕರ್ನಾಟಕದ ಅದರಲ್ಲೂ ಬಹಳಷ್ಟು ಜನ ದಾಸರು ಉತ್ತರ ಕರ್ನಾಟಕದವರಿದ್ದರು. ಅವರು ಸಮಾಜ ಜೀವಿಗಳೇ ಹೊರತು ಸಾಲಗಾರರಲ್ಲ. ಆಯಾ ಕಾಲದ ರಾಜನಲ್ಲಿ ಅನುದಾನವಂತೂ ಇರಲಿ ಆಶ್ರಯವನ್ನೂ ಕೇಳದವರಲ್ಲ. ಇದನ್ನು ಎಲ್ಲ ಹರಿದಾಸರ ಕೃತಿಗಳಲ್ಲಿ ಕಾಣಬಹುದು.

ಹರಿದಾಸರು ಅಧಿಕಾರ, ಆಳ್ವಿಕೆಯಲ್ಲಿರುವ ರಾಜನ ಪಕ್ಷವನ್ನು ವಹಿಸಲಿಲ್ಲ ಅದೇ ರೀತಿ ಶೀತಲಯುದ್ಧ, ಗುಂಪುಗಾರಿಕೆ, ವಿದ್ರೋಹ ಮಾಡುವ ಭಿನ್ನಮತರ ಅಥವಾ ರಾಜನ ದಾಯಾದಿಗಳ ಪಕ್ಷವನ್ನೂ ವಹಿಸಲಿಲ್ಲ. ಆದರೆ ನಾವು ಒಂದು ಮಾತನ್ನು ಗಮನಿಸಬೇಕು. ಹರಿದಾಸರು ಸಾತ್ವಿಕ ಹಾಗೂ ಸಾಮಾನ್ಯ ಜನರಲ್ಲಿ ಮೂಡಿದ ವೈಚಾರಿಕತೆಯ ಪಕ್ಷ ವಹಿಸಿದರು. ಹರಿದಾಸರು ಭೂತವನ್ನು ಮರೆತವರಲ್ಲ ಹಾಗೂ ಭವಿಷ್ಯಗಾರರಲ್ಲ. ಸಾಮಾನ್ಯವಾಗಿ ಆಳರಸರನ್ನು ಓಲೈಸಿದರೆ Prosper ಆಗುತ್ತಾನೆ. ತೀವ್ರವಾಗಿ ವಿರೋಧಿಸಿದರೆ ಪ್ರಸಿದ್ಧನಾಗುತ್ತಾನೆ. ಜಗನ್ನಾಥದಾಸರ ಉದಾಹರಣೆಯನ್ನು ನೋಡಿ

ದರೆ ಒಬ್ಬ ಸಾತ್ವಿಕ ವ್ಯಕ್ತಿಯಾಗಿ ತಾಮಸ ಸ್ವಭಾವದ ರಾಜನನ್ನು ವಿರೋಧಿಸಿ ಮೆರೆದು, ಸನ್ಮಾನವನ್ನು ಪಡೆದು ಆ ರೀತಿಯಲ್ಲಿ ಬಂದ ಸಂಪೂರ್ಣಯಶಸ್ಸನ್ನು ದಾಸ ಪರಂಪರೆಗೆ ಧಾರೆ ಎರೆದರು. ಹೀಗೆ ಹರಿದಾಸರು ಅಗತ್ಯವಿದ್ದಲ್ಲಿ ಕಾಲಕಾಲಕ್ಕೆ ಧರ್ಮ ಎಂದರೆ ದಾಸ ಧರ್ಮವನ್ನು ಉಳಿಸಿದರು. ಒಂದರ್ಥ ದಲ್ಲಿ ಇವರು "ಸಂಭವಾಮಿ ಯುಗೇ ಯುಗೇ" "ಮಮ ತೇಜಾಂಶ ಸಂಭವ" ಎಂಬ ಗೀತಾ ವಾಕ್ಯದ ಮೂರ್ತ ರೂಪ ವೆಂದು ಹೇಳಬೇಕು. ಇಂದಿಗೂ ಕೂಡಾ ಹರಿದಾಸರು ಹೇಳಿದ "ಮೆಲ್ಲನೆ ಮಾಧವನ ಮನವ ಮೆಚ್ಚಿಸಬೇಕು" "ಬೆಲ್ಲವಾಗಿರ ಬೇಕು ಬಂಧುಜನರೊಳಗೆ" ಎಂಬ ಮಾತು ಸತ್ಯ. ಒಟ್ಟಿನಲ್ಲಿ ಹರಿದಾಸರು ರಾಜವಂಶ ಯಾವುದೇ ಇರಲಿ ರಾಜನು ಯಾರೇ ಇರಲಿ ತಮ್ಮ ಪಾಡಿಗೆ ತಾವಿದ್ದರು. ಮಹಾತ್ಮಾ ಗಾಂಧೀಜಿಯವ ರಂತೆ ದೇಶದ ಯಾರೇ ಇರಲಿ ತಮ್ಮ ಪಾಡಿಗೆತಾವಿದ್ದರು. ಮಹಾತ್ಮಾ ಗಾಂಧೀಜಿಯವರಂತೆ ದೇಶದ ಶಾಂತಿ,ಸತ್ಯ, ನೆಮ್ಮದಿ ಮತ್ತು ಸಮೃದ್ಧಿಯನ್ನು ಆಶಿಸಿದವರು. ವೈರಿ ವರ್ಗದ ತೊಂದರೆ ಗಳನ್ನು ಸಹಿಸಿಯೂ ದೈನ್ಯವನ್ನು ಮೆರೆದವರಲ್ಲ, ಬದಲಾಗಿ ಆ ವೈರಿಯ ನಿಯಾಮಕನಾದ ಯಾವುದೋ ಕ್ಷುದ್ರ ದೇವತೆಯನ್ನು ಸರಿಪಡಿಸಲು ಪರಮಾತ್ಮನ ಉಗ್ರನರಸಿಂಹನ ರೂಪವನ್ನು ಆಹ್ವಾನಿಸಿದವರು. ಹೀಗೆ ಅಹೋಬಲ, ಶೂರ್ಪಾಲಿ, ಕೊಪ್ಪರ ತೊರವಿ, ಮುದಗಲ್, ಸಿಂಹಾಚಲ ಮೊದಲಾದ ಕಡೆಗಳಲ್ಲಿಯ ನರಸಿಂಹ ದೇವರು ಹರಿದಾಸರ Veto Power.

ಈ ದೇಶದ ಆರು ಲಕ್ಷ ಹಳ್ಳಿಗಳಲ್ಲಿರುವ ಹನುಮಂತನ ದೇವಾಲಯಗಳು ರಾಷ್ಟ್ರನಿರ್ಮಾಣದ ಗ್ರಾಮೀಣ ಪ್ರಾಥಮಿಕ ಕೇಂದ್ರಗಳು. ನಮ್ಮ ಹಳ್ಳಿಗಳ ಜನಜೀವನ ಪ್ರಾರಂಭವಾಗು ವುದು ಮನೆ ಮುಂದಿನ ರಂಗೋಲಿಯಿಂದ ಹಾಗೂ ಆಯಾ ದಿನದ ಚಟುವಟಿಕೆ ಸಂಪನ್ನಗೊಳ್ಳುವುದು ಹತ್ತಿರದ ದೇವಾ ಲಯದ ಮಹಾಮಂಗಳಾರತಿಯಲ್ಲಿ ಅದರಲ್ಲೂ ಬನ್ನಿ ಹಂಚು ವುದು, ಎಳ್ಳು ಬೆಲ್ಲ ಪರಸ್ಪರ ಹಂಚಿಕೊಳ್ಳುವುದು. ಬೇವು ಬೆಲ್ಲ ತಿನ್ನುವುದು ಇವೆಲ್ಲವುಗಳ ಜೀವಂತ ಸಾಂಸ್ಕೃತಿಕ ಕೇಂದ್ರವೇ ನಮ್ಮ ಗ್ರಾಮಗಳ ಮಂದಿರಗಳು. ಇವೆಲ್ಲವುಗಳು ತಾನಾಗಿಯೇ ನಡೆದ ಘಟನೆಗಳು ಅಲ್ಲ, ಇದರ ಹಿಂದೆ ಲಕ್ಷ - ಲಕ್ಷ ದೇಶಭಕ್ತರ, ಧರ್ಮಬೀರುಗಳ ಅವಿರತ ಪ್ರಯತ್ನವಿದೆ. ಇಂತಹ ಅಜೇಯ ಹಿಂದೂರಾಷ್ಟ್ರ ನಿರ್ಮಾಣದಲ್ಲಿ ಕರ್ನಾಟಕದ ಹರಿದಾಸರ ಸಿಂಹಪಾಲು ಇದೆ. ಇದಕ್ಕಾಗಿಯೇ "ದೇವರು ಕೊಟ್ಟದ್ದು ಮನೆಗೆ, ದೇಶ ಕೊಟ್ಟದ್ದು ಕೊನೆಗೆ, ದಾಸರು ಕೊಟ್ಟಿದ್ದು ನಮಗೆ".

ಹರಿದಾಸರು ತಮ್ಮ ತತ್ಕಾಲೀನ ಸಮಾಜದ ನೆಲ, ಜಲ, ಪಶು, ಪಕ್ಷಿ, ಆಟ, ಪಾಠ, ಹಬ್ಬ ಹರಿದಿನಗಳ ಕಾರ್ಮಿಕ ಮತ್ತು ಸೇವಾಪರ ವರ್ಗ ಹೀಗೆ ಎಲ್ಲ ವಿಷಯ ಮತ್ತು ವಿಚಾರಗಳ ಕಡೆ ಗಮನವಿಟ್ಟಿದ್ದರು. ಬರಗಾಲ ಬಂದಾಗ ಮಳೆರಾಯನಿಗೆ ಪ್ರಾರ್ಥಿಸಿದರು. ಸುಖದ ಕಾಲದಲ್ಲಿ ಜನರು ಮಾಡುವ ಪಾಪ ಕರ್ಮಗಳ ಕುರಿತು ಎಚ್ಚರಿಸಿದರು. ರಾಜನ ಒಳ್ಳೆಯ ಕಾರ್ಯ ಗಳನ್ನು ಮೆಚ್ಚಿದರು. ಆದರೆ ರಾಜನನ್ನು ಎಂದೂ ಹಾಡಿ ಹೊಗ ಳುವ ಭಟ್ಟಂಗಿಗಳಾಗಲಿಲ್ಲ. ಇಲ್ಲಿ ಕನಕದಾಸರ ವಾಕ್ಯವಾದ "ಆತನೊಲಿದ ಮೇಲೆ ಯಾತರ ಕುಲವಯ್ಯ" ಎಂಬುದನ್ನು ನೆನೆಯಬಹುದು. ಒಟ್ಟಿನಲ್ಲಿ ನೀತಿವಂತ ಸುಖೀ ಸಮಾಜದ ರಚನೆ ಮತ್ತು ವ್ಯವಸ್ಥೆಯೇ ರಾಷ್ಟ್ರನಿರ್ಮಾಣ. ಇದನ್ನು ಕರ್ನಾ ಟಕದ ಹರಿದಾಸರು ಅಕ್ಷರಶಃ ಮಾಡಿದರು. ಹೀಗಾಗಿ ಕರ್ನಾ ಟಕದ ಹರಿದಾಸರು ೫ ಶತಮಾನಗಳ ರಾಷ್ಟ್ರನಿರ್ಮಾಣ ಕಾಲ ದಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕಾರ್ಯನಿರ್ವಹಿಸಿ ದರೆಂಬುದು ಸತ್ಯ ಸಂಗತಿ.

ಈ ಎಲ್ಲ ವೈಚಾರಿಕ ಸಹಾಗೂ ವ್ಯವಹಾರಿಕ ತಾತ್ವಿಕ ಸತ್ಯಗಳನ್ನು ಹರಿದಾಸರ ಕೀರ್ತನೆಗಳಲ್ಲಿ ಹೆಕ್ಕಿದ ಈ ಕೆಲವು ಕೀರ್ತನೆಗಳನ್ನು ಉದ್ಧರಿಸಿದ ಸಂಕ್ಷಿಪ್ತ ಪ್ರಬಂಧವಿದು.

**ಆಕರ ಕೀರ್ತನೆಗಳು:**

ಶ್ರೀ ಪಾದರಾಜರು.

೧. ಮೋಸಹೋದೆನಲ್ಲಾ.

ತತ್ಕಾಲೀನ ಸಮಾಜವನ್ನು ಕುರಿತು ಭಕ್ತಿಯಿಂದ ವಿಮುಖರಾಗುತ್ತಿರುವ ಜನರಿಗೆ ನೀತಿ ಹೇಳುತ್ತಾ ತಮ್ಮನ್ನು ತಾವು ಪರಮಾತ್ಮನಲ್ಲಿ ಆತ್ಮ ನಿವೇದನೆ ಭಕ್ತಿಯಿಂದ ಹಾಡುತ್ತಾರೆ.

**ವ್ಯಾಸರಾಯರು**


೧. ಅಂತರಂಗದಲಿ ಹರಿಯ ಕಾಣದಿವ ಹುಟ್ಟು ಕುರುಡನೋ

ಸಮಾಜದಲ್ಲಿ ವ್ಯಕ್ತಿಗಳು ಕುಹಕ ಬುದ್ಧಿಯಿಂದ ತಮ್ಮ ಜಾತಿಯ ಹೆಗ್ಗಳಿಕೆಯಿಂದ ನಡೆಸುವ ಅಂತರಂಗ ಬಹಿರಂಗ ಏಕವಲ್ಲದ ನಡವಳಿಕೆಗೆ ಪ್ರತಿಯಾಗಿ ಬರೆದ ಕೀರ್ತನೆಯಿದು.

೨. ನಂಬಿ ಕೆಟ್ಟವರಿಲ್ಲವೊ ರಂಗಯ್ಯನ ನಂಬದೆ ಕೆಟ್ಟರೆ ಕೆಡಲಿ

ಸಮಾಜದಲ್ಲಿರುವ ಆಸ್ತಿಕ ಭಕ್ತ ಜನರ ಅಚಲ ಶ್ರದ್ಧೆಯನ್ನು ಕದಡುವ ಆಕರ್ಷಣೆಗಳು ಮತ್ತು ಸಂದರ್ಭಗಳು ಬಂದಾಗ ಸಮಾಜದಸ್ವಾಸ್ಥ್ಯಕ್ಕಾಗಿ ಮಾಡಿದ ಕೀರ್ತನೆಯಿದು, ಇವರಿಂದ ಕನಕ ಪುರಂದರಿಗಾಗಿ ಆರೋಗ್ಯವಂತ ಸಮಾಜ ದಲ್ಲಿ ಭಕ್ತಿ ಚಳುವಳಿಯ ವೇದಿಕೆ ಸಿದ್ಧವಾಯಿತು.





# ರಾಯರೇ ನಮ್ಮ ಸಂಪತ್ತು

ಡಾ॥- ಗುರುರಾಜ ಪೋಶೆಟ್ಟಿಹಳ್ಳಿ
-9035618076

ಇಂದು ವಿಶ್ವದೆಲ್ಲಡೆ ಜಾತಿ ಮತ ಪಂಥಗಳ ಹಂಗಿಲ್ಲದೆ ಪೂಜಿಸಲ್ಪಡುವ ಆರಾಧಿಸುವ ಭಕ್ತಿ ಸಾಮ್ರಾಜ್ಯದ ಕೆಲವೇ ಕೆಲವರ ಪೈಕಿ ಮಂತ್ರಾಲಯ ಶ್ರೀ ಗುರುರಾಘವೇಂದ್ರರು ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಇವತ್ತಿಗೂ ಗುರುವಾರ ಬಂತೆಂದರೆ ಅದು ಎಲ್ಲರ ಪಾಲಿಗೆ ಸಡಗರ - ಸಂಭ್ರಮದ ರಾಯರ ನೆನೆಯುವ ಪುಣ್ಯದಿನ. ಅವರ ಜೀವನಗಾದೆ ಭಕ್ತರ ಪಾಲಿಗೆ ಕುಳಿರ್‌ಗಾಳಿಯ ಸ್ಪರ್ಶ,ಎಂದಿಗೂ ಆರದೆ ದೇದೀಪ್ಯಮಾನವಾಗಿ ಉರಿಯುವ ನಂದಾದೀಪ. ಅವರ ದರ್ಶನ ಮಾತ್ರಕ್ಕೆ ಜೀವನದ ಮುಗ್ಗುಲು ಬದಲಾಯಿಸುವ ಸಾಮರ್ಥ್ಯವಿದೆ. ಸರಳ ಆಧ್ಯಾತ್ಮಿಕತೆಯ ಅವರ ಜೀವನ ತತ್ವಗಳು ಅಳುವ ಕಂದನಿಗೆ ಮಾತೆಯಲಾಲಿಯಿದ್ದಂತೆ. ಶ್ರೀ ರಾಘವೇಂದ್ರರು ಮಹಾ ಮಹಿಮರಾಗಲು ಪರಮಾತ್ಮ ಪಾದಾರವಿಂದಗಳಲ್ಲಿ ಸತತ ಸೇವೆಯೇ ಕಾರಣ. ಅಂತೆಯೇ ಅವರ ಶಾಪಾನುಗ್ರಹ ಶಕ್ತಿ ಇನ್ನೊಂದು ಅವರ ಸಿದ್ದಾಂತ ಸಾರಸ್ವತ ಸೇವೆ.

ರಾಯರು, ಈ ಶಬ್ದದಲ್ಲಿ ಅಖಿಲಭೂಮಂಡಲವನ್ನು ಸೆಳೆಯುವ ಮಹಾಶಕ್ತಿ ಇದೆ, ಪರಮಾತ್ಮನ ಪ್ರೀತಿಯನ್ನು ಸಂಪಾದಿಸುವ ಅನುಭೂತಿಯು ಈ ಶಬ್ಧ ಶ್ರವಣದಿಂದ ಆಗುತ್ತದೆ. ಹಾಗಾಗಿ ಈ ಶಬ್ಧ ಮಂಗಲಮಯ, ರಾಯರು ಅಂದರೆ ಪುಣ್ಯದ ಪರ್ವತ, ರಾಯರೆಂದರೆ ಕರುಣೆಯ ಮಡಿಲು,ರಾಯರೆಂದರೆ ಶರಣಾಗತರ ಕಾಮಧೇನು, ರಾಯರೆಂದರೆ ಆಧ್ಯಾತ್ಮಿಕ ಬಾಳಿನ ಜೇನು, ರಾಯರೆಂದರೆ ತತ್ವ ಗ್ರಂಥಭಂಡಾರ, ರಾಯರೆಂದರೆ ತಾಪತ್ರಯ ಪರಿಹಾರ, ನಮಗೆ ರಾಯರೇ ಗತಿ, ರಾಯರೆಂದರೆ ದುರಿತಗಳನ್ನು ಪರಿಹಾರ ಮಾಡಿ ಸನ್ಮಾರ್ಗವನ್ನು ತೋರಿ, ಉತ್ಕೃಷ್ಟವಾದ ಸುಖವನ್ನು ಕೊಡುವವರು ಎಂದು ಚಿಂತನೆ ಮಾಡುವವನೇ ಭಾಗ್ಯಶಾಲಿ, ಜಯಶೀಲ, ಸದ್ಗುಣಶಾಲಿಯಾಗುತ್ತಾನೆ.

ಲೋಕದಲ್ಲಿ ಶಿಷ್ಯರ ಹಣವನ್ನು ದೋಚುವ ಗುರುಗಳೇ ಬಹಳ, ಶಿಷ್ಯರ ಮನಸ್ಸನ್ನು ಅಪಹರಿಸುವ ಗುರುಗಳು ಕಡಿಮೆ. ಶಿಷ್ಯರ ಹೃದಯದ ತಾಪವನ್ನು ಪರಿಹಾರ ಮಾಡುವ ವಿರಳ. ಅಂತಹ ಗುರುಗಳ ಸಾಲಿನಲ್ಲಿ ನಿಲ್ಲಬಲ್ಲ ಸಮರ್ಥ ಧೀಮಂತ ಗುರುಗಳೆಂದರೇ ಶ್ರೀ ರಾಘವೇಂದ್ರರು ಅಗ್ರಮಾನ್ಯರು.

ಭಾಗವತ ಧರ್ಮದ ಸಾರಸರ್ವಸ್ವವನ್ನು ಎತ್ತಿಹಿಡಿದ ಅನೇಕ ಭಕ್ತ ವಿರಕ್ತ ಗ್ರಂಥಕರ್ತರುಗಳ, ಪರಿವ್ರಾಜಕ ಪರಮಹಂಸರುಗಳ, ಜನಮನವನ್ನು ಧರ್ಮಸಾಗರದಲ್ಲಿ ಶಾಶ್ವತವಾಗಿ ನಿಲ್ಲಿಸಿದ ಅನೇಕ ಮಹಾಮಹಿಮ ಮಹನೀಯ ಮೂರ್ತಿಗಳ, ಪಾವನಕೀರ್ತಿಗಳ ಪುಣ್ಯ ಸಂಚಯದ ರಸಘಟ್ಟಿಯ ಅಮೃತ ಫಲವೇ ಇಂದು ಶ್ರೀ ರಾಘವೇಂದ್ರ ಸ್ವಾಮಿಗಳ ನಿರಂತರ ಕರುಣಾ ಪ್ರವಾಹವಾಗಿ ಸಾಕಾರಗೊಂಡಿದೆ. ಆಶ್ರಮ ಸ್ವೀಕಾರವಾದೊಡನೆಯೇ ಹೆಜ್ಜೆಯಿಟ್ಟಲ್ಲಿ ಹಸುರಿನ ಬೆಳೆ, ಹೊನ್ನಿನ ಮಳೆಯನ್ನು, ಜ್ಞಾನದ ಸೆಲೆಯನ್ನು, ದಿಕ್ಕು ದಿಕ್ಕಿನಲ್ಲಿ ಹರಡಿದ ಶ್ರೀ ರಾಘವೇಂದ್ರ ತೀರ್ಥರು ಬೃಂದಾವನ ಪ್ರವೇಶ ಮಾಡಿದ ಮೇಲಂತೂ ತಮ್ಮ ಕೃಪಾಶೀರ್ವಾದದ ಅಕ್ಷಯ ರಕ್ಷಣೆಯಿಂದಾಗಿ ಭಕ್ತಿಯ ಭಾಗೀರಥಿಯನ್ನೇ ನಾಡಿನ ಉದ್ದಗಲಕ್ಕೂ ಹರಿಸಿ ಬಿಟ್ಟಿದ್ದಾರೆ, ತಮ್ಮನ್ನು ನಂಬಿ ಬಂದ ಎಲ್ಲ ವರ್ಗದ ಜನತೆಗೂ, ವಿಶ್ವಾಸ, ನೆಮ್ಮದಿ, ಸಾಂತ್ವಾನ, ಸಮಾಧಾನಗಳು ಅಂತರಂಗದಲ್ಲಿ, ಶಾಶ್ವತವಾಗಿ ದೊರಕುವಂತೆ ತಮ್ಮ ತಪಸ್ಸನ್ನೇ ಧಾರೆಯೆರೆಯುತ್ತಿರುವ ತಪೋನಿಧಿ ಶ್ರೀ ಗುರುಸಾರ್ವಭೌಮರು ಕಲಿಯುಗದ ಕಲ್ಪವೃಕ್ಷ, ಕರೆದವರ ಕಾಮಧೇನು.



ವಿಜಯನಗದರದ ಹಿಂದೂ ಸಾಮ್ರಾಜ್ಯ ಶಿಥಿಲವಾಗುತ್ತಿದ್ದು, ಅಲ್ಲಲ್ಲಿ ಮುಸ್ಲಿಂ ನಾಯಕರು ತಂತಮ್ಮ ಪಾಳೆಯ ಪಟ್ಟುಗಳನ್ನು ಕಟ್ಟಿಕೊಂಡು ಆಳುತ್ತಿದ್ದರು ಇಂಗ್ಲೀಷರು, ಫ್ರೆಂಚರು, ಡಚ್ಚರು, ವ್ಯಾಪಾರದ ನೆವದಿಂದ ಇಲ್ಲಿಗೆ ಬಂದು ಕೈಹಾಕುತ್ತಿದ್ದರು. ಧರ್ಮಪೀಠಗಳು ಸಂಪ್ರದಾಯ ನಿಷ್ಟ ಪಂಡಿತರ ನಡುವೆ ಇದ್ದು ತಂತಮ್ಮ ಸಂಕುಚಿತ ವ್ಯಾಪ್ತಿಯಲ್ಲಿ ಲೋಕ ಸಂಗ್ರಹ ಮಾಡುತ್ತಿದ್ದರು. ಜನ ಸಾಮಾನ್ಯರೊಡನೆ ಅವರ ಸಂಪರ್ಕ ಕಡಿಮೆಯಾಗಿ ಒಂದು ರೀತಿಯ ಕಂದಕವೇರ್ಪಟ್ಟಿತು, ಈ ಕಂದಕಕ್ಕೆ ಸೇತುವೆಯಾಗಿ, ಕನಕ - ಪುರಂದರರಂತೆ ಜನ ಸಾಮಾನ್ಯರ ಬಳಿಗೆ ಆಧ್ಯಾತ್ಮಿಕತೆಯನ್ನು ತಂದವರೇ ಶ್ರೀ ರಾಘವೇಂದ್ರರು.

ಆಧ್ಯಾತ್ಮ ಪ್ರಪಂಚದಲ್ಲಿ ಕೆಲವರದು ಮಿಂಚಿನ ಬಾಳು, ಹಲವರದು ಬಿಸಿಲಿನ ಬದುಕು, ತಾವರೆ ಎಲೆಯ ತೋಯದ ತುಂತುರು ಜೀವನ ಅನೇಕರದು, ಆದರೆ ಎಂದೂ ಕುಂದದ ಕಾಂತಿ ಕೀರ್ತಿ, ನಂದದ ಜ್ಯೋತಿಯಿಂದ ನಾಡಿನ ನಿರಂತರ ನಂದಾ ದೀಪವಾಗಿ ಬೆಳಗಿದ ಪುಣ್ಯದ ಜೀವಿಗಳು ಕೆಲವೇ ಕೆಲವು ಮಂದಿ. ಇಂತಹ ವಿರಳ ವಿಭೂತಿಗಳಲ್ಲಿ ಶ್ರೀ ರಾಘವೇಂದ್ರ ಗುರುಸಾರ್ವಭೌಮರು ಅಗ್ರಮಾನ್ಯರು, ಅವರು ಮಂತ್ರಾಲಯ ಸುಕ್ಷೇತ್ರದಲ್ಲಿ ಸಶರೀರವಾಗಿ ಬೃಂದಾವನ ಪ್ರವೇಶ ಮಾಡಿ 346 ವರ್ಷಗಳಾದರೂ ಅವರ ಕೀರ್ತಿ ಕಾರ್ಯಕ್ಕೆ ಇನ್ನೂ ನವಪ್ರಾಯ! ದಿನಗಳೆದಂತೆ ಅವರ ಕೀರ್ತಿ ಹೆಚ್ಚುತ್ತಲೇ ಇದೆ.

ರಾಯರ ನಾಲ್ಕು ಅವತಾರಗಳಲ್ಲಿ ಏಕಸೂತ್ರತೆ ಇದೆ. ಒಂದೊಂದು ಅವತಾರದ ಕಾರ್ಯ ಇನ್ನೊಂದಕ್ಕೆ ಪೂರಕವಾಗಿದೆ. ಭಾಗವತ ಧರ್ಮಪ್ರಚಾರಕ್ಕೆ ಪ್ರಹ್ಲಾದರಾದರೆ, ಬಲಕಾರ್ಯಕ್ಕೆ ಬಾಹ್ಲೀಕರದಾಯಿತು. ವ್ಯಾಸರಾಜರಲ್ಲಿ ರಾಜನೀತಿ ವ್ಯಾಸದಾಸಸಾಹಿತ್ಯ ಪೋಷಣೆಯ ಗ್ರಂಥ ರಚನೆ ಮುಖ್ಯವಾಯಿತು, ಗುರುರಾಜರಲ್ಲಿ ಇವೆಲ್ಲವೂ ಸಮಾವೇಶಗೊಂಡು ಜೊತೆಗೆ ಸಜ್ಜನರ ಕಲ್ಯಾಣ ಉದ್ಧಾರ ಮುಖ್ಯ ಕಾರ್ಯವಾಗಿದೆ.

ರಾಯರು ಹುಟ್ಟಿದ್ದು ತಮಿಳುನಾಡಿನ ಕಾವೇರಿ ಪುಟ್ಟಣದಲ್ಲಿ, ಶರೀರ ಬೃಂದಾವನ ಪ್ರವೇಶ ಮಾಡಿದ್ದು, ಆಂಧ್ರಪ್ರದೇಶ ಕರ್ನೂಲ್ ಜಿಲ್ಲೆಯ ಮಂತ್ರಾಲಯದಲ್ಲಿ ಅವರು ಬಹುಕಾಲ ಸಂದರ್ಶಿಸಿದ ಕಾರ್ಯಕ್ಷೇತ್ರ ಕರ್ನಾಟಕ. ಮಾನವೀಯತೆಯ ಸಾಕಾರ ಮೂರ್ತಿಯಾದ ಮಹಿಮಾನ್ವಿತನ ಅನುಗ್ರಹ ಪಡೆಯಲು ಜಗತ್ತಿನಾದ್ಯಂತ ಭಕ್ತರು ಮಂತ್ರಾಲಯಕ್ಕೆ ಧಾವಿಸಿ ಬರುತ್ತಾರೆ. ಪ್ರಾಯಃ ಕನ್ನಡಿಗರೇ ಅಸಂಖ್ಯ ಭಕ್ತರಾದುದರಿಂದಲೋ ಏನೋ ಮಂತ್ರಾಲಯದಲ್ಲಿ ಎಲ್ಲೆಂದರಲ್ಲಿ ಕನ್ನಡದ ಕಂಪಿದೆ, ಅನ್ಯ ಭಾಷಾ ರಾಜ್ಯವೊಂದರಲ್ಲಿ ಕನ್ನಡಕ್ಕಿರುವ ಹೆಗ್ಗಳಿಕೆಯೂ ಹೌದು.

ಗುರುಸಾರ್ವಭೌಮರು ಒಂದು ಜಂಗಮಕೋಶವಿದ್ದಂತೆ. ರಾಯರು ವ್ಯಾಖ್ಯಾನಿಸದ ಶಾಸ್ತ್ರಗಳಿಲ್ಲ. ಅವರ ಯಾವ ಗ್ರಂಥಗಳನ್ನು ನೋಡಿದರೂ ಸರ್ವಶಾಸ್ತ್ರಗಳ ಸತ್ವಸಾರವನ್ನು ಎರಕಹಾಕುವ ವಿಲಕ್ಷಣ ವೈದುಷ್ಯವು ರಾಯರೊಬ್ಬರದೇ ಸೊತ್ತು. ದ್ವೈತವಾಜ್ಞ್ಮಯದ ಅಧ್ವರ್ಯುಗಳಾದ ಶ್ರೀ ರಾಘವೇಂದ್ರರು ರಚಿಸಿದ ಉಪಲಬ್ಧ ಗ್ರಂಥಗಳ ಸಂಖ್ಯೆ ಅರ್ಧ ಶತಕದ ಹತ್ತಿರ. ಆಧ್ಯಾತ್ಮ ಜ್ಞಾನ ಪ್ರಪಂಚದಲ್ಲೂ ಸೀಮಾ ಶಕ ಪುರುಷರು. ಅವರ ಶೈಲಿಯನ್ನು ಪರಿಶೀಲಿಸಿದರೆ ರಾಯರ ವ್ಯಾಕರಣ ಪಾಂಡಿತ್ಯವನ್ನು ಹೊಗಳಬೇಕೋ, ಮೀಮಾಂಸಶಾಸ್ತ್ರದ ಪ್ರೌಢಮೆಯನ್ನು ಪ್ರಶಂಶಿಸಬೇಕೋ, ನ್ಯಾಯ ನೈಪುಣ್ಯವನ್ನು ಬಣ್ಣಿಸಬೇಕೋ, ವೇದ ವೈದುಷ್ಯವನ್ನು ಸ್ತುತಿಸಬೇಕೋ, ಧರ್ಮಶಾಸ್ತ್ರ ಪ್ರಾವೀಣ್ಯತೆಯನ್ನು ಕೊಂಡಾಡಬೇಕೋ ಎಂಬುದು ತಿಳಿಯದು.

ಶ್ರೀ ರಾಘವೇಂದ್ರರ ಬದುಕೇ ಅದ್ಭುತ. ಕಾರ್ಯವೇ ಅಪಾರ. ಮನುಕುಲವೇ ಪರಿವಾರ. ಕಷ್ಟಕಳೆಯುವುದೇ ಇಷ್ಟ. ಅವರ ಜೀವನವೇ ವೇದಾಂತ. ಮಾತೇ ತತ್ತ್ವಜ್ಞಾನ. ವಿಶಾಲ ಹೃದಯ ಕೇಳಿದ್ದನ್ನು ಕೊಡುವ ಔದಾರ್ಯ. ಹರಸುವುದೇ ದೃಷ್ಟಿ . ಅವರು ಆಸ್ತಿಕರ ಆಸ್ತಿ. ಬಡವರ ಭಾಗ್ಯ. ಅವರ ಗ್ರಂಥಗಳು ವಿಶ್ವದ ಸಂಪತ್ತು. ಎಲ್ಲರೂ ತನ್ನವರೆನ್ನುವುದು ಸ್ವಭಾವ. ಹರಿಭಕ್ತಿಯೇ ಧೈರ್ಯ. ಎಲ್ಲರಲ್ಲಿ ದೇವರನ್ನು ಕಾಣುವರು. ಅಂತೆಯೇ ಎಲ್ಲರೂ ಅವರಲ್ಲಿ ದೇವರನ್ನು ಕಾಣುವರು. ಮಾನವ ರೂಪದ ದೇವತೆ. ದೇವರಿಂದ ಎಲ್ಲ ಪಡೆದು ಜೀವರಿಗೆ ಹಂಚುವ ದೈವೀಪುರುಷ, ಸತ್ಯ ಧರ್ಮದ ಮೂರ್ತಿ.

ದೇವರ ಅನುಗ್ರಹ, ಧರ್ಮದ ಬದುಕು, ಸತ್ಕರ್ಮದ ಶಕ್ತಿಯೇ ಎಲ್ಲ ಸಮಸ್ಯೆಗಳಿಗೆ ಉತ್ತರ. ಅದೇ ಜೀವನಕ್ಕೆ ಆಧಾರ. ಸಮಸ್ಯೆಗಳು ಅಪಾರ. ಧರ್ಮವೊಂದೇ ಪರಿಹಾರ. ಆರ್ಥಿಕ ಸಮಸ್ಯೆ, ಆರೋಗ್ಯದ ಸಮಸ್ಯೆ, ಸಾಮಾಜಿಕ ಸಮಸ್ಯೆ, ಕೌಟುಂಬಿಕ ಸಮಸ್ಯೆ,ವೈಯುಕ್ತಿಕ ಸಮಸ್ಯೆ, ಸಮಸ್ಯೆಗಳ ಸರಪಳಿಯೇ ಸಂಸಾರ.ಇವಕ್ಕೆಲ್ಲ ಒಂದೇ ಉತ್ತರ. ಸತ್ಯ ಧರ್ಮದಲ್ಲಿ ನಿರತನಾಗುವುದು. ಅಂತೆಯೇ ಸಾವಿರಾರು ವರ್ಷಗಳಲ್ಲಿ ಧಾರ್ಮಿಕ ಆಂದೋಲನಗಳೇ ಆದವು. ಆರ್ಥಿಕ, ಸಾಮಾಜಿಕ ಆಂದೋಲನ ಏಕೆ ಆಗಲಿಲ್ಲ. ಉತ್ತರ : ಧರ್ಮದಿಂದಲೇ ಎಲ್ಲದಕ್ಕೂ ಪರಿಹಾರ ಇದು ಸತ್ಯ, ನಿತ್ಯ, ಇದನ್ನು ಇಂದಿಗೂ ಜಗತ್ತಿಗೆ ಮನಗಾಣಿಸಿ ಕೊಡುತ್ತಿರುವರು ಶ್ರೀ ರಾಘವೇಂದ್ರರು. ಇದೇ ಸನಾತನ ವೈದಿಕ ಸಿದ್ಧಾಂತದ ಜೀವಾಳ. ವೇದಾಂತದ ಚರಮಗುರಿ. ಕೇವಲ ಆರ್ಥಿಕ ಸಮಸ್ಯೆಗಳಿಂದ ಸಂಘರ್ಷವಲ್ಲ, ಆರ್ಥಿಕ ಪರಿಹಾರವೇ ಉತ್ತರವಲ್ಲ. ಧರ್ಮದ ಕೊರತೆಯಿಂದ ಸಮಸ್ಯೆಗಳ ಉದ್ಭವ, ಧರ್ಮದ ಆಚರಣೆಯೇ ಎಲ್ಲದಕ್ಕೂ ಪರಿಹಾರ.

ಇದೇ 'ಧರ್ಮೋ ರಕ್ಷತಿ ರಕ್ಷಿತಃ' ನಮ್ಮ ಧರ್ಮವೇ ನಮ್ಮನ್ನು ಎಲ್ಲ ರೀತಿ ರಕ್ಷಿಸುವುದು ಶ್ರದ್ಧೆ, ಧರ್ಮಗಳು ಕರ್ಮವಾಗಿ ಹರಿಯಬೇಕು. ಇದು ಭಾಗವತ ಧರ್ಮ "ನಾನಾ ಜನಸ್ಯ ಶುಶ್ರೂಷಾ ಕರ್ತವ್ಯಾ" 'ಎಲ್ಲರಿಗೂ ಉಪಕಾರ ಮಾಡುವುದು ದೇವರಿಗೆ ಕೊಡುವ ಕರ ' ಇದು ಮಧ್ವರ ಮಾತು. ಇದು ಶ್ರೀ ರಾಘವೇಂದ್ರರು ಇಂದು ಮಾಡುತ್ತಿರುವ ಕಾರ್ಯ, ಇದೇ 'ಸತ್ಯಧರ್ಮರತತ್ವ' 'ಶ್ರೀ ರಾಘವೇಂದ್ರರ ತತ್ತ್ವ- ಚಿಂತನೆ, ಉಪಾಸನೆ, ಹರಿಯ ಅನುಗ್ರಹಗಳು ಶ್ರೀ ಸಾಮಾನ್ಯರ ಸಮಸ್ಯೆಗಳ ವಿಷಯದಲ್ಲಿ ಕಾಳಜಿವಹಿಸುವಂತೆ ಮಾಡಿದವು. ಆದ್ದರಿಂದ ಪೂಜ್ಯರು ಕಲ್ಪತರುಗಳಾದರು ಶ್ರೀ ರಾಘವೇಂದ್ರ. ರಾಜನೀತಿ, ಆರ್ಥಿಕ ಸಮೃದ್ಧಿ, ಸಾಮಾಜಿಕ ಉತ್ಕರ್ಷ, ಸಕಲ ವಿಧ ಸುಖ, ಉತ್ತಮ ಸ್ಥಿತಿ, ತೀವ್ರ ಹಂಬಲಗಳು ಎಲ್ಲವೂ ಧರ್ಮದ ಅಧೀನ. ಇದು ವೈದಿಕ ಧರ್ಮದ ಮೂಲದೃಷ್ಟಿ. ರಾಯರು ಧಾರ್ಮಿಕ ಮನೋಭಾವ. ಆಸ್ತಿಕ ವಿಚಾರ, ಶುದ್ಧ ಆಚಾರಗಳನ್ನು ಎಲ್ಲರ ಜೀವನದಲ್ಲಿ ಸಚೇತನಗೊಳಿಸುತ್ತಿರುವರು. ಆಧುನಿಕ ವಿಜ್ಞಾನದ ದೃಷ್ಟಿ ಸೃಷ್ಟಿ ಸೌಕರ್ಯಗಳನ್ನು ಮೈಗೂಡಿಸಿಕೊಳ್ಳುವ ಇಂದಿನ ಜೀವನವು ಸತ್ಯ, ಧರ್ಮ, ಸಂಸ್ಕೃತಿ ಸಂಸ್ಕಾರಗಳನ್ನೂ ಅಳವಡಿಸಿಕೊಳ್ಳಬೇಕೆಂಬುದೇ ಶ್ರೀ ರಾಘವೇಂದ್ರ ಹಂಬಲ.ಪ್ರಗತಿ ಪುರೋಗಾಮಿತ್ವಗಳು ಆಧ್ಯಾತ್ಮಿಕ ಆದರ್ಶದ ಸಿದ್ಧಿಯ ರೂಪಗಳಾಗಿರಬೇಕು. ಧರ್ಮದ ಬಲಿಕೊಟ್ಟು ಭೌತಿಕ ಸಮೃದ್ಧಿ ಬೇಡ. ಧರ್ಮವನ್ನು ಎರಡನೇ ಸ್ಥಾನಕ್ಕೆ ನೂಕಬಾರದೆನ್ನುವರು ರಾಯರು.ಆದ್ದರಿಂದ ಸತ್ಯ ಧರ್ಮತರು. ಬದುಕಿನ ಭದ್ರತೆಗೆ, ಸಮೃದ್ಧ ಜೀವನಕ್ಕೆ ಸುಸಂಸ್ಕೃತ ನಾಗರಿಕತೆಗೆ ಸತ್ಯ ಧರ್ಮಗಳೇ ಬುನಾದಿ. ಧರ್ಮ ಬಿಟ್ಟ ದಾರಿ, ಧ್ಯೇಯಗಳು ಕ್ಷಣಿಕ,ಧರ್ಮವೇ ರಕ್ಷಕ. ಇದನ್ನು ಮಾತು,ಕೃತಿ ಗ್ರಂಥಗಳಿಂದ ರಾಘವೇಂದ್ರರು ಉತ್ತರಿಸುತ್ತಿದ್ದಾರೆ.

ಮಾನವ ಶ್ರದ್ಧೆಯು ಧರ್ಮ, ದೈವದ ಶ್ರದ್ಧೆಯನ್ನು ಬತ್ತಿಸಬಾರದು. ಬಿತ್ತಿ ಬೆಳೆಸಬೇಕು. ಮಾತಿಗಿಂತ ಕೃತಿಯೇ ಉತ್ತರಿಸಬೇಕು. ಬೇಲಿ ಇಲ್ಲದ, ಗೋಡೆ ಇಲ್ಲದೇ ಎಲ್ಲರನ್ನೂ ಪ್ರೀತಿಸುವ, ಸತ್ಯವಂತರನ್ನು, ಕಾಯುವ ಸತ್ಯಧರ್ಮರತರು ಶ್ರೀ ರಾಯರು. ದೈವಶ್ರದ್ಧೆಯಿಂದ ಮಾನವಶ್ರದ್ಧೆ ಜೀವನದಲ್ಲಿ ಪ್ರೀತಿ ಬೆಳೆಸುತ್ತಿರುವರು.

ಇತಿಹಾಸ ಕಂಡಿರುವ ಪವಾಡ ಪುರುಷರೆಲ್ಲ ತತ್ವಜ್ಞಾನಿಗಳಲ್ಲಿ ಎಲ್ಲಾ ತತ್ವಜ್ಞಾನಿಗಳು ಪವಾಡ ಪುರುಷರೂ ಆಗಿಲ್ಲ. ಪವಾಡ ಪುರುಷರಿಗೆ ತಮ್ಮ ಪವಾಡಗಳ ತಾತ್ವಿಕ ನೆಲೆಗಟ್ಟು ಏನೆಂದು ಗೊತ್ತಿರುವುದಿಲ್ಲ. ತಮ್ಮನ್ನೇ ದೇವರ ಅವತಾರವೆಂದು ಸಾರುತ್ತಾರೆ. ಭೌತಿಕ ಶರೀರ ಬಿಟ್ಟ ಅನಂತರವೂ ಪವಾಡ ಮಾಡುತ್ತಿರುವ ಅತಿ ವಿರಳ ಮಹಿಮಾನ್ವಿತರಲ್ಲಿ ಒಬ್ಬರು ಶ್ರೀ ರಾಯರು. ರಾಯರ ಪ್ರಭಾವಗಳಿಂದ ಪ್ರಭಾವಿತರಾದ ಜನರ ಸೌಹಾರ್ದತೆಯನ್ನು ಅರ್ಥೈಸಿಕೊಂಡರು. ಪವಾಡಗಳ ಮೂಲಕ ಮಾನವೀಯ ಮೌಲ್ಯಗಳನ್ನು ಜಾಗೃತಗೊಳಿಸಿದರು.



“ಇಂದು ಎನಗೆ ಗೋವಿಂದ” ಹಾಡಿನ ಮೂಲಕ ಹರಿದಾಸರಿಗೆ ಸ್ಫೂರ್ತಿಯಾಗಿ, ವಿಜಯದಾಸರಿಗೆ ದರ್ಶನ ನೀಡಿ, ಗೋಪಾಲದಾಸರಿಗೆ ದಿಕ್ಕಾಗಿ, ಜಗನ್ನಾಥದಾಸರಿಗೆ ದೆಸೆಯಾಗಿ, ಮುಂದೆ ಬಂದ ದಾಸ ಪಂಥದವರಿಗೆ ಪ್ರೇರಕ ಶಕ್ತಿಯಾದವರು ಶ್ರೀ ರಾಘವೇಂದ್ರ ಸ್ವಾಮಿಗಳು, ಭಕ್ತ ವೃಂದವನ್ನು ಭಗವಂತನೆಡೆಗೆ ಕರೆದೊಯ್ಯುವ ಹರಿಗೋಲಾದವರು.

ಶ್ರೀ ರಾಘವೇಂದ್ರರು “ಹೃದಯ-ಬುದ್ಧಿ” ಗಳ ಸಂಗಮವಾದಂತೆ ಇದ್ದವರು. ಇವರಲ್ಲಿ ಭಾವ ಜೀವನವು, ಹರಿತವಾದ ತೀಕ್ಷ್ಣ ಬುದ್ಧಿಯು ಮಧುರವಾಗಿ ಸಮನ್ವಯಗೊಂಡಿತ್ತು, ಅವರು ಶುಷ್ಕ ವೇದಾಂತಗಳಾಗಿರಲಿಲ್ಲ.ಸಾಹಿತ್ಯ ಕಲೆ ಸಂಗೀತಗಳ ಆರಾಧಕರೂ ಆಗಿದ್ದರು.ಜನ್ಮ ತಾಳಿದ್ದು ಸಾಮಾನ್ಯವಾದ ಕುಟುಂಬದಲ್ಲಾದರೂ ಸಾಧನೆ - ತಪಸ್ಸಿನಿಂದ ದೈವತ್ವಕ್ಕೆ ಏರಿದವರು.‘‘ಸಾಧಕ-ಸಂಸಾರಿ ಸಂಸಾರದಲ್ಲಿದ್ದರೂ ಸಂಯಮದಿಂದ ಬದುಕನ್ನು ಹೇಗೆ ಸಾಧಿಸಿ ಸನ್ಯಾಸಿಯಾಗಿ ಬೃಹತ್ ಕುಟುಂಬಿಯಾದ ಎಂಬುದು ಅವರ ಜೀವನಗಾದೆ ನಮಗೆ ಮಾದರಿ. ರಾಘವೇಂದ್ರರು ಭೌತಿಕ ನೆಲೆಯಲ್ಲಿ ಅದೃಶ್ಯರಾದರೂ “ಕುಂದದೆ ವರ ಮಂತ್ರಾಲಯ”ದಲ್ಲಿ ಅದೃಷಿ ಸನ್ನಿಹಿತರಾಗಿದ್ದಾರೆಂದು ಭಕ್ತರ ನಂಬಿಕೆ. ಮಂಚಾಲೆ ಮಂತ್ರಾಲಯವಾದುದು ರಾಘವೇಂದ್ರಸ್ವಾಮಿಗಳು ಇದನ್ನು ತಮ್ಮ ನಿರ್ಣಯ ಕ್ಷೇತ್ರವಾಗಿ ಆರಿಸಿಕೊಂಡ ನಂತರವೇ. ಬೃಂದಾವನಕ್ಕೆಂದು ಭೂಮಿಯನ್ನು ಅಗೆಯುತ್ತಿದ್ದಾಗ ರಾಶಿ ರಾಶಿಯಾಗಿ ಇದ್ದಿಲು ದೊರಕಿತೆಂದು, ಪ್ರಹ್ಲಾದನು ಯಾಗ ಮಾಡಿದ ಸ್ಥಳವೇ ಅದೆಂದೂ ನಂಬಿಕೆಯಿದೆ, ಅಂತೂ ಅವರು ಬೃಂದಾವನವಾದ ಸ್ಥಳ ಮಂತ್ರಸಿದ್ಧಕ್ಷೇತ್ರವೆಂದು ಪ್ರಸಿದ್ಧವಾಯಿತು.ಅವರ ಬೃಂದಾವನಗಳಿರುವೆಡೆಗಳೆಲ್ಲ ಪ್ರದಕ್ಷಣೆ, ನಮನಸ್ತುತಿ,ಮೃತ್ತಿಕಾ ತೀರ್ಥ-ಪಾದೋದಕ ಸೇವನ ಇವು ವ್ಯಾಪಕವಾಗಿ ನಡೆಯುತ್ತಲೆ ಇದೆ.

ಬೃಂದಾವನಕ್ಕೆ ನಾಲ್ಕು ಪಾರ್ಶ್ವಗಳು ಎದುರಿಗೆ ಶ್ರೀ ಲಕ್ಷ್ಮೀನರಸಿಂಹನ ಸನ್ನಿಧಾನ ತನ್ನ ಭಕ್ತರ ಅನಿಷ್ಟ ನಿವೃತ್ತಿ, ಇಷ್ಟ ಪ್ರಾಪ್ತಿ ಶ್ರೀ ನರಸಿಂಹದೇವರ ಕಾರ್ಯ. ಬಂದ ಭಕ್ತರ ಅಪಮೃತ್ಯು ಕಳೆವ ಸ್ವಾಮಿ ಭಕ್ತರನ್ನು ಬೃಂದಾವನದ ಬಲ ಪಾರ್ಶ್ವಕ್ಕೆ ಸಾಗಿಸುತ್ತಾನೆ. ಅಲ್ಲಿ ಸೀತಾ ಸಹಿತ ಶ್ರೀರಾಮ ಚಂದ್ರನ ಸನ್ನಿಧಾನ. ಭಕ್ತ ಜನರ ಬದುಕನ್ನು ಸಮೃದ್ಧಗೊಳಿಸಿ ಅವರ ಅಂತರಂಗದ ಸಂತಾಪಗಳನ್ನು ತೊಲಗಿಸಿ ಅವರನ್ನು ಸಾಧನ ಮಾರ್ಗದಲ್ಲಿ ಮುನ್ನೆಡೆಸುವ ಶ್ರೀರಾಮರೂಪದ ಸನ್ನಿಧಾನ.

ಸಾಧನ ಮಾರ್ಗದಲ್ಲಿ ಸಾಗಿ ಬಂದ ಭಕ್ತರನ್ನು ಆಕರ್ಷಿಸಿ, ಮಾನವ ಬದುಕನ್ನು ಉಜ್ವಲಗೊಳಿಸುವ ವಿದ್ಯೆ-ಅಧಿಕಾರ - ಸೌಂದರ್ಯ - ಆಯುಷ್ಯ ಆರೋಗ್ಯ ಸಂಪತ್ತನ್ನು ಅವರ ಯೋಗ್ಯತಾನುಸಾರವಾಗಿ ಅನುಗ್ರಹಿಸುವ ರಾಯರಲ್ಲಿರುವ ಶ್ರೀ ಕೃಷ್ಣರೂಪ. ಕೃಷ್ಣಾನುಗ್ರಹವನ್ನು ಪಡೆದು ಮತ್ತೊಂದು ಪಾರ್ಶ್ವಕ್ಕೆ ಸಾಗಿಬಂದ ಭಕ್ತರಿಗೆ ಶ್ರೀ ರಾಘವೇಂದ್ರರಲ್ಲಿ ಅಂತರ್ಯಾಮಿಯಾಗಿ ನಿಂತು ‘ವರವೇದ ವ್ಯಾಸನಾಗಿ ವಾಸವಾಗಿ ಇಲ್ಲಿ’ ವೈರಾಗ್ಯ ಭಾಗ್ಯ ವೇದ ಶಾಸ್ತ್ರಗಳ ವಿಶೇಷ ಜ್ಞಾನವನ್ನು ಅನುಗ್ರಹಿಸುವ ರೂಪ. ಮದ್ಭಕ್ತ ಯತ್ರ ಗಾಯಂತಿ ತತ್ರ ತಿಷ್ಟಾಮಿ ನಾರದ ಎಂಬ ಭಗವಂತನ ಉಕ್ತಿ ಶ್ರೀ ರಾಘವೇಂದ್ರ ಬೃಂದಾವನದಲ್ಲಿ ಸಾಕಾರಗೊಂಡಿದೆ.

### ‘ಗುರುವಿನಾಲಯ ಮಂತ್ರಾಲಯ’ ಚಿತ್ರಸಂಪುಟ

ಬೆಂಗಳೂರಿನ ಹರಿದಾಸ ನ್ಯಾಷನಲ್ ಫೌಂಡೇಷನ್ ರವರು ಪ್ರಕಟಿಸಿರುವ ಎಂ.ಎಸ್. ಪ್ರಕಾಶ್ ಕೌಶಿಕ್ ಸಂಪಾದಿಸಿರುವ ‘ಗುರುವಿನಾಲಯ ಮಂತ್ರಾಲಯ’ ಚಿತ್ರಸಂಪುಟದಲ್ಲಿ ಮಂತ್ರಾಲಯದ ಶ್ರೀ ರಾಘವೇಂದ್ರ ಗುರುರಸಾರ್ವಭೌಮರ ಆದರ್ಶ ಜೀವನ, ಪೂರ್ವಾಶ್ರಮ ವಂಶ ಬೀಗಮುದ್ರೆ ಮನೆತನದ ಹಿನ್ನೆಲೆ-ಜೀವನ ವರ್ಣ ಚಿತ್ರ ಶಾಲೆ - ಸಹಸ್ರ ಮಾನದ ಸೂರ್ಯ ಶ್ರೀ ಗುರುರಾಜರಿಂದ ರಚಿತವಾದ ಗ್ರಂಥಗಳು ಅಮರ ಸಂದೇಶ - ಅವರ ನೆಲೆವೀಡು ಮಂತ್ರ ಸಿದ್ಧಿಯ ಕ್ಷೇತ್ರ ಮಂತ್ರಾಲಯದ ಒಳನೋಟ - ತಪೋಭೂಮಿ ಬೃಂದಾವನದ ವೈಶಿಷ್ಟ್ಯ-ಶ್ರೀ ಸಂಸ್ಥಾನದ ಪೂಜಾ ವಿಗ್ರಹಗಳು- ಭಂಡಾರ- ಅಪೂರ್ವರಾಯಸಗಳು - ಶಾಸನಗಳು ಅಂತೆಯೇ ಕರೆದಲ್ಲಿಗೆ ಬಂದು ಅನುಗ್ರಹಿಸುತ್ತಿರುವ ಕರುಣಾಳು ಶ್ರೀ ರಾಯರ ಮೃತ್ತಿಕಾ ಬೃಂದಾವನಗಳ ಸಚಿತ್ರ ಮಾಹಿತಿ - ರಾಯರ ನಂತರ ಪೀಠವನ್ನಾಳಿದ ಮಹೋನ್ನತರು - ಅಂತರಂಗ ಭಕ್ತ ಸಖರು-ಹರಿದಾಸ ಸಾಹಿತ್ಯಕ್ಕೆ ಗುರುರಾಜರ ಕೊಡುಗೆ-ಪರಮಪಾವನ ಚೇತನ ಗುರುರಾಜರನ್ನು ಕೊಂಡಾಡಿದ ಹರಿದಾಸರು - ವಿದೇಶಗಳಲ್ಲಿ ರಾಯರ ಮಹಿಮೆ - ಅಪೂರ್ವ ದೃಶಕಲಾ ವೈಭವದ ಗುರು ನಮನ ಈ ಕೃತಿಯ ಹೆಗ್ಗಳಿಕೆಯಾಗಿದೆ.

ನಡೆದಾಡುವ ರಾಯರೆಂದೇ ಖ್ಯಾತರಾಗಿದ್ದ ಪೂಜ್ಯ ಸುಶಮೀಂದ್ರ ತೀರ್ಥರ 80 ನೇ ವರ್ಧಂತಿಯ ಸಂದರ್ಭದಲ್ಲಿ ಈ ಪುಸ್ತಕ ಪ್ರಕಟನೆಗೆ ಅಂಕುರಾರ್ಪಣೆಗಾಗಿ ಇದೀಗ ಶ್ರೀ ಸುಬುಧೇಂದ್ರ ತೀರ್ಥ ಶ್ರೀ ಪಾದರ ಮಾರ್ಗದರ್ಶನದಲ್ಲಿ ಸರ್ವಾಂಗ ಸುಂದರವಾಗಿ ಮೂಡಿ ಬಂದಿರುವ ಈ ಗುರುಚಿತ್ರಕೋಶವು ಎಲ್ಲಾ ಭಕ್ತಾಭಿಮಾನಿಗಳ ನಿವಾಸಗಳಲ್ಲಿ ಇರಲೇ ಬೇಕಾದ ಕೃತಿರತ್ನ ಎಂಬುದು ಸಂಪಾದಕರ ಅಭಿಮತವಾಗಿದೆ. ವಿವರಗಳಿಗೆ : 98801 81803





## ತಿರುಮಲ ತಿರುಪತಿ ದೇವಸ್ಥಾನಗಳು, ತಿರುಪತಿ

# ಶ್ರೀ ವೇಂಕಟೇಶ್ವರ ಸರ್ವಶ್ರೇಯಸ್ಸು ಟ್ರಸ್ಟ್

'ಮಾನವ ಸೇವೆಯೇ ಮಾಧವ ಸೇವೆ' ಎನ್ನುವ ಗುರಿ ಹೊಂದಿರುವ ತಿ.ತಿ.ದೇವಸ್ಥಾನವು ವಿವಿಧ ಸಾಮಾಜಿಕ ಸಂಕ್ಷೇಮ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದೆ. ಇದರ ಅಂಗವಾಗಿ ಬಾಲಬಾಲೆಯರಿಗೆ ಸಹಾಯಮಾಡುವ ಸಂಕಲ್ಪದೊಂದಿಗೆ 1943 ನೇ ಇಸವಿಯಲ್ಲಿ ಶ್ರೀವೇಂಕಟೇಶ್ವರ ಬಾಲಮಂದಿರ (ತಿರುಪತಿ) ಟ್ರಸ್ಟ್, ತಿ.ತಿ.ದೇ. ಸ್ಥಾಪಿಸಿದೆ. ಈ ಶ್ರೀ ವೇಂಕಟೇಶ್ವರ ಬಾಲಮಂದಿರ ಟ್ರಸ್ಟ್ ಪ್ರಸ್ತುತ ಶ್ರೀವೇಂಕಟೇಶ್ವರ ಜಲನಿಧಿ ಪಥಕಂ, ಕಲ್ಯಾಣಮಸ್ತು ಟ್ರಸ್ಟ್. ಶ್ರೀ ವೇಂಕಟೇಶ್ವರ ಸಮಾಚಾರ ಸಾಂಕೇತಿಕ ಟ್ರಸ್ಟ್‌ಗಳು ಎಲ್ಲವನ್ನು ಸೇರಿಸಿ 'ಶ್ರೀ ವೇಂಕಟೇಶ್ವರ ಸರ್ವಶ್ರೇಯಸ್ಸು ಟ್ರಸ್ಟ್, ಎಂಬುದಾಗಿ ರೂಪ ತಳೆದಿದೆ.

## ಶ್ರೀ ವೇಂಕಟೇಶ್ವರ ಸರ್ವಶ್ರೇಯಸ್ಸು ಟ್ರಸ್ಟ್‌ನ ಗುರಿಗಳು:

1. ಅನಾಥ ಮಕ್ಕಳು,ವೃದ್ಧರು,ನಿರಾಶ್ರಿತರು,ಅಭಾಗ್ಯರು, ಬಡ-ಬಗ್ಗರು, ಬಲಹೀನರ ಅಭಿವೃದ್ಧಿ, ಅವರ ಸಂರಕ್ಷಣೆ, ಅವರ ಸಂಕ್ಷೇಮಕ್ಕಾಗಿ ಧರ್ಮಶಾಲೆಗಳು, ವಸತಿ ಗೃಹಗಳ ಏರ್ಪಾಟು.

   ಅನಾಥರು, ಆರ್ಥಿಕವಾಗಿ ಹಿಂದುಳಿದವರು, ವಿದ್ಯಾರ್ಥಿಗಳಿಗೆ ಆರ್ಥಿಕವಾಗಿ ಸಹಾಯ ಮಾಡುವುದು.

2. ದಿವ್ಯಾಂಗರು, ಮಾನಸಿಕರೋಗಿಗಳಿಗೆ ಉಚಿತ ವೈದ್ಯಕೀಯ ಅನುಕೂಲಗಳನ್ನು ಒದಗಿಸಿ, ಅವರ ಜೀವನದಲ್ಲಿ ಹೊಸದೊಂದು ಆಯಾಮವನ್ನು ಕಲ್ಪಿಸುವುದು. ಈ ಲಕ್ಷ್ಯದಲ್ಲಿ ಕುಲ, ಮತ, ಜಾತಿ,ವರ್ಗ, ವರ್ಣ ಭೇದವಿಲ್ಲದೆ ಎಲ್ಲರನ್ನು ಸಮಾನವಾಗಿ ಸ್ವೀಕರಿಸುವುದು.

3. ಕಿವುಡು, ಮೂಕಮಕ್ಕಳಿಗೆ, ಹುಟ್ಟಿನಿಂದಲೇ ಲೋಪವಿರುವ ಶಿಶುಗಳಿಗೆ ಶಿಶುವಿಹಾರಗಳನ್ನು ಏರ್ಪಾಟು ಮಾಡುವುದು.

4. ಪ್ರವಾಹ - ಬರ ಬಂದು ಪ್ರಕೃತಿ ವಿಪತ್ತುಗಳ ಸಮಯದಲ್ಲಿ ಅಗ್ನಿ ಅನಾಹುತಗಳಿಂದ ಅನಪೇಕ್ಷಿತ ದುರ್ಘಟನೆಗಳ ವೇಳೆಯಲ್ಲಿ ಯಥೋಚಿತವಾದ ಕಾರ್ಯಾಚರಣೆಗಳನ್ನು ಕೈಗೊಳ್ಳುವುದು.

5. ಅಲ್ಲದೇ ವಿಕಲಚೇತನರಾಗಿ ಹುಟ್ಟಿ ತಂತಮ್ಮ ಗ್ರಾಮಗಳಲ್ಲಿ ನೆಲೆಸಿರುವ ಮಕ್ಕಳಿಗೆ ಬೇಕಾಗುವ ಎಲ್ಲಾ ಪರಿಕರಗಳನ್ನು ಒದಗಿಸುವುದು ಮತ್ತು ಅವರನ್ನು ವಿದ್ಯಾವಂತರನ್ನಾಗಿ ಮಾಡುವುದು.

6. ಬದುಕಲು ಅತ್ಯಾವಶ್ಯಕವಾದ ಕುಡಿಯುವ ನೀರನ್ನು ಪ್ರತಿನಿತ್ಯ ತಲುಪಿಸುವುದು. ತಿರುಮಲ ಪಂಚಾಯಿತಿ, ತಿರುಮಲ ಕಾರ್ಪೊರೇಷನ್‌ಗಳಿಗೆ ಬೇಕಾಗುವ ನೀರು ಅಣೆಕಟ್ಟುಗಳನ್ನು ನಿರ್ಮಿಸುವುದು. ನೀರಿನ ಇತರ ಸಮಸ್ಯೆಗಳಿಗೆ ಉಚಿತವಾದ ಕಾರ್ಯಗಳನ್ನು ಮಾಡುವುದು.

7. ಪುಸ್ತಕಗಳಿಂದ ಆರಂಭಿಸಿ ಇಂಟರ್‌ನೆಟ್ ಮತ್ತಿತರ ಆಧುನಿಕ ಉಪಕರಣಗಳಿಂದ ನಮ್ಮ ದೇಶದ ಚರಿತ್ರೆ, ಸಾಂಸ್ಕೃತಿಕ ಸಂಪದಗಳನ್ನು ಮುಂದಿನ ಪೀಳಿಗೆಗೆ ಮುಟ್ಟಿಸುವುದು.

8. ಕ್ರಮಬದ್ಧವಾದ ಶಿಕ್ಷಣ, ನೈತಿಕ ಆದರ್ಶವಾದಗಳಿಂದ ಯುವಕರ ಆತ್ಮವಿಶ್ವಾಸವನ್ನು ಬಲಪಡಿಸುವುದು.

9. ಶ್ರೇಯಸ್ಕರವಾದ ವೈವಾಹಿಕ ಕಾರ್ಯಕ್ರಮಗಳಿಂದ ವಧುವರರು ಗೌರಾವಾಭಿಮಾನಿಗಳಿಂದ ಉನ್ನತ ದಾಂಪತ್ಯ ಜೀವನವನ್ನು ಹೊಂದುವಂತೆ ಮಾಡುವುದು.

10. ಮುಂದಾಗಿ ಕೀರ್ತಿ ಸಾಧನೆಗಳಿಗಾಗಿ ಕಷ್ಟಪಡುತ್ತಿರುವ ವ್ಯಕ್ತಿ ಮತ್ತು ಸಂಘಟನೆಗಳಿಗೆ ಸಹಕಾರ ಕೊಡುವುದು.

11. ಇವೆಲ್ಲವೂ ಅಲ್ಲದೇ, ಮೇಲ್ಕಂಡ ಗುರಿ ಸಾಧಿಸುವಲ್ಲಿ ಯಾವುದೇ ಲಾಭಾಪೇಕ್ಷೆಗೆ ಅವಕಾಶವಿರದಂತೆ ನೋಡುವುದು.

**ಶ್ರೀ ವೆಂಕಟೇಶ್ವರ ಸರ್ವಶ್ರೇಯಸ್ಸು ಟ್ರಸ್ಟ್ ವಿರಾಳದ ವಿವರಗಳು......**

1) ಈ ಪಥಕ ವಿರಾಳಕ್ಕಾಗಿ ಕನಿಷ್ಟ ರೂ. 1000/-

2) ರೂ. 1000/- ಗಿಂತ ಕಡಿಮೆ ವಿರಾಳ ಸ್ವಾಮಿಯವರ ಹುಂಡಿಗೆ, ದಾತರಿಗೆ ಯಾವುದೇ ಸಮಾಚಾರವಿಲ್ಲದೆ ಜಮಾ ಮಾಡಲಾಗುತ್ತದೆ. ಎಲ್ಲಾ ವಿರಾಳವು ಒಂದೇ ಜಾತೀಯ ಬ್ಯಾಂಕ್‌ನಲ್ಲಿ ಡಿಪಾಜಿಟ್ ಮಾಡಬೇಕು. ಅದರ ಮೇಲೆ ಬರುವ ಬಡ್ಡಿಯನ್ನು ಈ ಪಥಕಕ್ಕಾಗಿ ಬಳಸಲಾಗುತ್ತದೆ. "ದಿ ಎಗ್ಸಿಕ್ಯೂಟಿವ್ ಆಫೀಸರ್, ಶ್ರೀ ವೆಂಕಟೇಶ್ವರ ಸರ್ವಶ್ರೇಯಸ್ಸು ಟ್ರಸ್ಟ್ ತಿ.ತಿ.ದೇ. ದೇವಸ್ಥಾನ, ತಿರುಪತಿ, ಎಂಬ ಹೆಸರಿನಿಂದ ಯಾವುದಾದರೂ ಬ್ಯಾಂಕ್‌ನಲ್ಲಿ ಚೆಕ್/ಡಿಮಾಂಡ್ ಡ್ರಾಫ್ಟ್ ಮುಖಾಂತರ ವಿರಾಳವನ್ನು 'ಚೀಫ್ ಅಕೌಂಟ್ಸ್ ಆಫೀಸರ್,ತಿ.ತಿ.ದೇ., ತಿರುಪತಿ - 517501 ಇವರಿಗೆ ಕಳುಹಿಸಬೇಕು.

ಇತರ ವಿವರಗಳಿಗೆ 0877 - 2264258

# ದಾಸ ಸಾಹಿತ್ಯದಲ್ಲಿ ಜೀವ ಪ್ರಭೇದ

ವಿಜ್ಞಾನ ವೈಜಯಂತಿ ೨೦೧೧ ಒಂದು ವಿಶಿಷ್ಟ ಹಾಗೂ ಔಚಿತ್ಯಪೂರ್ಣ ಸಮ್ಮೇಳನ, ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನದ ಸಾಧನೆಯಲ್ಲಿ ಇರುವ ನಮಗೆ ಹಲವಾರು ಅಭಾವಗಳಿದ್ದು ಅವೆಲ್ಲದರ ಮಧ್ಯದಲ್ಲಿ ಪೂರ್ಣತ್ವ ಸಾಧನೆಯೇ ನಮ್ಮ ಗುರಿ. ಪೂರ್ಣತ್ವ ಎಂದರೆ ಭಾರತೀಯ ವೇದಾಂತ ವಿಶೇಷತಃ ದ್ವೈತ ತತ್ವಜ್ಞಾನ,ಮತ್ತು ಹರಿದಾಸ ಸಾಹಿತ್ಯದ ಹಿನ್ನೆಲೆಯಲ್ಲಿ ಹೇಳುವುದಾದರೇ ಅದೇ ಮೋಕ್ಷ ಅಥವಾ ಶಾಶ್ವತ ಸುಖ, ಕರ್ಮ, ಭಕ್ತಿ ಮತ್ತು ಜ್ಞಾನ ಎಲ್ಲಾ ಯೋಗಗಳನ್ನು ದಾಟಿ ಬಂದು ಭಕ್ತಿ ಜ್ಞಾನ, ವೈರಾಗ್ಯಗಳ ಸಾಧನೆಗಾಗಿ ಬಂದ ಸುಲಭೋಪಾಯದ ಮಾರ್ಗವೇ ಕರ್ನಾಟಕ ಹರಿದಾಸ ಸಾಹಿತ್ಯ.

ಈಗ ಸ್ಥಳ ಮತ್ತು ಸಮಯದ ಅಭಾವದಲ್ಲಿ ನೇರವಾಗಿ ವಿಷಯಕ್ಕೆ ಬರೋಣ. ವಿಜ್ಞಾನ ವೈಜಯಂತಿಯ ಉದ್ದೇಶಿತ ವಿಷಯ ಎಂದರೆ - ಜೀವ ಪ್ರಕರಣದ ವಿಶ್ಲೇಷಣೆ. ಈ ವಿಶ್ಲೇಷಣೆಯು ಹರಿದಾಸ ಸಾಹಿತ್ಯಕ್ಕೆ ಸೀಮಿತವಿದ್ದು ಅದರ ಆಕರಗಳಾದ ಆರ್ಷೇಯ ಸಾಹಿತ್ಯವನ್ನು ಅಲ್ಲಲ್ಲಿ ಉದ್ಧರಿಸಬಹುದು. ಈ ನಿಶ್ಚಿತ ಚೌಕಟ್ಟಿನಲ್ಲಿ ನಮ್ಮ ವೈಜ್ಞಾನಿಕ ಪ್ರಬಂಧಕ್ಕಾಗಿ ನಮ್ಮ ಹೈದ್ರಾಬಾದ್ ಕರ್ನಾಟಕದ ದಾಸ ಸಾಹಿತ್ಯದ ಜೋಡೆತ್ತುಗಳೆಂದರೆ, ಒಬ್ಬರು ವೈದ್ಯರು, ಅದರಲ್ಲೂ ಆಲೋಪತಿ ಡಾಕ್ಟರು. ಮತ್ತೊಬ್ಬರು ದಾಸ ಸಾಹಿತ್ಯ ವಿದ್ವಾಂಸರು, ಅದೂ ಬಿ.ಕಾಂ ಹಿನ್ನೆಲೆಯಿಂದ ಬಂದವರು. ಹೀಗಾಗಿ ನಮಗೆ ಒಂದು ನಿಶ್ಚಿತ Vision ಇದೆ, ವಿದ್ವಾಂಸರ ಆಶೀರ್ವಾದ ಇದೆ ಎಂಬ ಆತ್ಮ ನಿವೇದನೆಯೊಂದಿಗೆ ಈ ಪ್ರಬಂಧವನ್ನು ಮಂಡಿಸುತ್ತಿದ್ದೇವೆ.

ಹರಿದಾಸ ಸಾಹಿತ್ಯದಲ್ಲಿ ಪಂಚಭೇದ ಮತ್ತು ತಾರತಮ್ಯಗಳ ಪೂರ್ಣ ಪ್ರಮಾಣದ ವಿವರಣೆ ಮತ್ತು ವಿಶ್ಲೇಷಣೆ ಇದೆ. ಒಂದೆರಡು ಕಡೆ ನಿಂದಾಸುತ್ತಿಯಂತೆ ಕಂಡು ಬಂದರೂ ಅದರ ಒಳತಿರುಳು ಪಂಚಭೇದವೇ ಆಗಿದೆ. ಪ್ರಸ್ತುತ ಪ್ರಬಂಧಕ್ಕೆ ಜೀವ-ಜೀವ ಭೇದ.

ಹರಿದಾಸ ಸಾಹಿತ್ಯದ ಪ್ರಥಮ ಘಟ್ಟದಲ್ಲಿ ಪುರಂದರ ದಾಸರು, ಕನಕದಾಸರು, ದ್ವಿತೀಯ ಘಟ್ಟದಲ್ಲಿ ವಿಜಯದಾಸರು, ಗೋಪಾಲದಾಸರು ಜಗನ್ನಾಥದಾಸರೇ ಮೊದಲಾದವರು ಬಹಳ ಸೂಕ್ಷ್ಮವಾಗಿ ಜೀವದ ಸಾಧನೆ ಮತ್ತು ಸಿದ್ಧಿಗಳನ್ನು ಕುರಿತು ಸಾರಿ ಹೇಳಿದ್ದಾರೆ. ಒಂದೆರಡು ಕಡೆ ಜೀವಿ ಮಾಡುವ ಸಮಯದ ವ್ಯರ್ಥ ದೋಷ, ಮತ್ತು ನ್ಯೂನತೆಗಳನ್ನು ಖಂಡಾಖಂಡಿತವಾಗಿ ಹೇಳಿದ್ದಾರೆ. ಇನ್ನೂ ಕೆಲವು ಕಡೆಗಳಲ್ಲಿ ಶಿಕ್ಷೆಯೋ ಎಂಬಂತೆ ಅವರಿಗಾಗುವ ಅಪಾಯ ತೊಂದರೆ, ನಷ್ಟ, ಮತ್ತು ಶಾಶ್ವತ ನರಕಗಳನ್ನು ಕುರಿತು ಎಚ್ಚರಿಸಿದ್ದಾರೆ. ಪ್ರಾರಂಭಿಕ ಘೋಷ ವಾಕ್ಯ. ಎಂದರೆ ಜೀವವೂ ಸಂಸಾರದಲ್ಲಿ ಈಸಬೇಕು ಇದ್ದು ಜಯಿಸಬೇಕು. ತಾನು ಇರುವದು ಮಾತ್ರವಲ್ಲ ಸಮಾಜ ಜೀವಿಯಾಗಿ ಎಂಬಂತೆ ಸರ್ವಹಿತಕಾರಿಯಾಗಿ ಬಾಳಬೇಕು. ಎಂದರೆ ಆ ಜೀವಕ್ಕೆ ನಾನು ಸಮಾಜದಲ್ಲಿ ಇದ್ದೇನೆ, ಇತರರು ನನ್ನನ್ನು ನೋಡುತ್ತಿದ್ದಾರೆ.ಅನುಸರಿಸಲೂಬಹುದು ಎಂಬ ಜಾಗೃತ ಜೀವನ ಅವನದಾಗಿರಬೇಕು. ಅದನ್ನೇ ಪುರಂದರದಾಸರು-ಮೂರ್ಖರಾದರು ಜನರು ಲೋಕದೊಳಗೆ, ಧರೆಯೊಳು ದುರ್ಜನರು ಜಾಲಿಯ ಮರದಂತೆ, ರಂಗನೊಲಿಯನೋ ಭಕ್ತರ ಸಂಗ ದೊರೆಯದೆ ಎಂದು ಎಲ್ಲ ಜೀವಿಗಳಿಗೆ ಎಚ್ಚರಿಸಿದ್ದಾರೆ.

ಜೀವ ಎಂದರೆ ಪ್ರಾಣ - ಒಂದು ಪಕ್ಷಿಗೆ ಹೋಲಿಸುತ್ತಾ ಅದು ಹಾರಿ ಹೋಯಿತು ಎಂದು ಹೇಳುವುದುಂಟು. ಇದು ಸಾಮಾನ್ಯ ಜನರ ದೃಷ್ಟಿಯಲ್ಲಿ ಉದಾಹರಣೆ ಆದರೆ ವೈದಿಕ ಸಾಹಿತ್ಯದಲ್ಲಿ ವೈಜ್ಞಾನಿಕವಾಗಿ ಪ್ರಾಣ ಎಂದರೆ ಪ್ರಾಣ ವಾಯು ಎಂದು ಅದೇ ಜೀವದ ಮೂಲಾಧಾರವೆಂದು ಜೀವರ ಉತ್ತಮನೇ ಮುಖ್ಯಪ್ರಾಣನೆಂದು ಮತ್ತು ಜೀವೋತ್ತಮನೆಂದು ಕರೆದಿದ್ದಾರೆ. ಜೀವಕ್ಕೆ ಮುಖ್ಯ ಚೇತನವಾದ ವಾಯುವನ್ನು ಶ್ರೀಮದಾಚಾರ್ಯರು (ಸ್ವತಃ ಅವರು ಅದರ ಅವತಾರ ಪುರುಷರಾಗಿದ್ದು) ದೈವಿ ಮಟ್ಟಕ್ಕೆ ಏರಿಸಿದರು. ಇದನ್ನು ಕನ್ನಡದಲ್ಲಿ ಸಮರ್ಥವಾಗಿ ಸರಳವಾದ ಸಾಹಿತ್ಯದಲ್ಲಿ ತಂದವರು ಹರಿದಾಸರು, ವಿಜಯದಾಸರ ಪವಮಾನ ಪವಮಾನ ಜಗದಪ್ರಾಣ ಎಂಬ ಕೀರ್ತನೆ ಇಂದು ವೈಜ್ಞಾನಿಕ ವಿಶ್ಲೇಷಣೆಯನ್ನು ಮಾಡುತ್ತಾ ಸುಮಧುರವಾದ ರೀತಿಯಲ್ಲಿ ಎಲ್ಲ ತಾಂತ್ರಿಕ ಆವಿಷ್ಕಾರಗಳಿಗೆ ಹೊಂದಿಕೊಂಡು ಮತ್ತು ಒಗ್ಗಿಕೊಂಡು ಅಜೇಯವಾದ ಜೀವ ಪ್ರಬಂಧವನ್ನು ಘೋಷಿಸುವ ಕಹಳೆಯ ಶ್ರೀಕಾರವಾಗಿದೆ. ಇದನ್ನು ಆಬಾಲವೃದ್ಧರು, ಸರ್ವಮತೀಯರು, ಸಹಜವಾಗಿ ಹೇಳಿ ಕೇಳಿ ಆನಂದಿಸುವರು ಎಂದರೆ ಅವರ ಜೀವ ಖುಷಿ

ಪಡುತ್ತದೆ. ಆಯಾ ಜೀವಗಳ ಸ್ವರೂಪ, ಪ್ರವೃತ್ತಿ ಮತ್ತು ಯೋಗ್ಯತೆಗೆ ಅನುಸಾರವಾಗಿ ಅಗತ್ಯ ಮತ್ತು ಬೇಡಿಕೆಗಳಿಗನು ಗುಣವಾಗಿ ಸಾಮಾಜಿಕ ಜೀವಿಗಳಿಗೆ ಜೀವ ಪರಿಕಲ್ಪನೆ ಜ್ಞಾನ ಸಿಗುತ್ತದೆ. ಹರಿದಾಸರು ಯಥೇಚ್ಛವಾಗಿ ತಮ್ಮ ಕೀರ್ತನೆ ಮತ್ತು ಸುಳಾದಿಗಳಲ್ಲಿ ಇದನ್ನು ಸಿದ್ಧಮಾಡಿದ್ದಾರೆ. ಪ್ರಾಣಕ್ಕೆ ಐದು ಪ್ರಭೇಧಗಳು. ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ಇವೆಲ್ಲ ವೈಜ್ಞಾನಿಕವಾಗಿ ಬೇರೆ ಬೇರೆಯಾಗಿದ್ದು ಬೇರೆ ಬೇರೆ ರೀತಿಯಲ್ಲಿ ಕೆಲಸ ಮಾಡುತ್ತ ಜೀವನ ಸಾಗಿಸುತ್ತವೆ ಎಂದು ಹರಿದಾಸರು ಹೇಳಿದ್ದಾರೆ.

ಇನ್ನೂ ಮುಂದೆ ಗೋಪಾಲದಾಸರು ಜೀವಿಯಲ್ಲಿ ಪಂಚಪ್ರಾಣಗಳಿಂದ ನಡೆಯುವ ಇತರ ವ್ಯಾಪಾರಗಳನ್ನು ಈ ರೀತಿ ಹೇಳಿದ್ದಾರೆ.

"ಆರಾರು ಎರಡು ಸಾವಿರ ದಾರೀಲಿ ಹೋಗಿ ಬರುವರು।
ಆರು ಮೂರು ಮೂರು ಸಾವಿರದಾರುನೂರು ನಿತ್ಯದಿ।
ಆರು ನಾಲ್ಕು ಮಂದಿ ಹಿರಿಯ ಪಾರುಪತ್ಯದಾರರಿದಕೆ।
ಆರು ಎರಡು ವಿಧದಲೆನ್ನ ಗಾರುಮಾಡುತ್ತಿಪ್ಪರೋ।।

6x6x2= 72 ಸಾವಿರ ನಾಡಿಗಳಲ್ಲಿ ವಾಯುದೇವರು 6x3+3= 21= 21600 ಶ್ವಾಸಜಪಮಾಡುತ್ತಾ ನಮ್ಮ ಶರೀರದಲ್ಲಿ ಸಂಚರಿಸುವರು ಎಂದು ಗೋಪಾಲದಾಸರು ಸಮೀಕರಣ ನೀಡಿದ್ದಾರೆ.

"ಏಸು ಕಾಯಂಗಳ ಕಳೆದು ಎಂಬತ್ನಾಲ್ಕು ಲಕ್ಷ ಜೀವ ರಾಶಿಯನ್ನು ದಾಟಿ ಬಂದ ಈ ಶರೀರ" ಎಂದು ಕನಕದಾಸರು ಹೇಳಿದಂತೆ ಜೀವ ಪ್ರಭೇಧವನ್ನು ಕುರಿತು ಇದು ವಿಶ್ಲೇಷಣೆಯಾಗಿದೆ. ಏಕಕೋಶ ಜೀವಿಯಿಂದ ಮುಂದೆ ಬರಬರುತ್ತಾ ಸಸ್ಯ, ಕ್ರಿಮಿ ಮತ್ತು ಪ್ರಾಣಿಗಳನ್ನು ದಾಟಿ ಉತ್ಕರ್ಷ ಹೊಂದಿ ಜೀವಿಯು ಮಾನವನಾಗಿ ಹುಟ್ಟುತ್ತಾನೆ.

ಸರ್ವೋತ್ತಮನಾದ ಹರಿಯು ಆ ಜೀವಿಗಳನ್ನು ಭೂಲೋಕಕ್ಕೆ ಕಳುಹಿಸುತ್ತಾನೆ. ಜೀವಿಗಳು ತಮ್ಮ ಇಂದ್ರಿಯಗಳು, ಮನಸ್ಸು, ಬುದ್ಧಿ ಮತ್ತು ವಿವೇಕಗಳನ್ನು, ಪ್ರಕೃತ್ತಿಲ್ಲಿಯ ಸತ್ವ, ರಜ, ತಮ, ಗುಣಗಳೊಂದಿಗೆ ಯೋಗ್ಯತಾನುಸಾರವಾಗಿ ಪ್ರತಿಕ್ರಯಿಸಿ ತಮ್ಮ ತಮ್ಮ ಸ್ವರೂಪಗಳನ್ನು ಪ್ರವೃತ್ತಿಗಳನ್ನು ಹೊಂದುತ್ತಾರೆ. ಈ ಪ್ರವೃತ್ತಿಲ್ಲಿ ಇರುವ ಬೇಧವೆ, ಜೀವ - ಜೀವ ಭೇದವಾಗಿ ಪ್ರಪಂಚಕ್ಕೆ ಕಾಣುತ್ತದೆ. ಇದನ್ನು ಹರಿದಾಸರು ತಮ್ಮ ಕೀರ್ತನೆಗಳಲ್ಲಿ ಸಜ್ಜನರು-ದುರ್ಜನರು-ವಿವೇಕಿಗಳು ಅವಿವೇಕಿಗಳು, ಪುಣ್ಯವಂತರು-ಪಾಪಿಗಳು,ಮರುಳರು-ಮಹಾತ್ಮರು, ಸಾಧಕರು-ಕ್ಷುಲ್ಲಕರು, ಸಹನಶೀಲರು-ಮುಂಗೋಪಿಗಳು, ಕರ್ಮಜೀವಿಗಳು-ಸೋಮಾರಿಗಳು ಎಂದು ಪ್ರಪಂಚದಲ್ಲಿ ಕಾಣುವ ಜೀವ ಪ್ರಭೇಧಗಳನ್ನು ಹೇಳಿದ್ದಾರೆ.

ಇಂತಹ ಅಧಮರ ಅಥವಾ ಪಾಪಿಗಳ ಉದ್ಧಾರಕ್ಕಾಗಿ ಹರಿದಾಸರುಗಳು ಭಾಗವತದ ನವವಿಧ ಭಕ್ತಿಗಳಲ್ಲಿ ಒಂದಾದ ಸ್ಮರಣೆ ಎಂಬ ಸರಳ ಮಾರ್ಗವನ್ನು ತೋರಿಸಿದ್ದಾರೆ. ಹರಿಯೊಲುಮೆಯಿಂದ ಅಂಬರೀಶ, ಗಜೇಂದ್ರ, ಅಜಾಮಿಳ, ಪ್ರಹ್ಲಾದ, ಧ್ರುವ, ದ್ರೌಪದಿ, ವಿದುರ ಮೊದಲಾದವರಂತೆ ಎಲ್ಲ ಸಾಮಾನ್ಯ ಜೀವಿಗಳು ಉದ್ದಾರ ಮಾರ್ಗವನ್ನು ಅನುಸರಿಸಬಹುದು.

ಕಲಿಯುಗದೊಳು ಹರಿನಾಮವ ನೆನೆದರೆ-

ತಾನೊಬ್ಬನೇ ಏಕೆ ತನ್ನ ಕುಲಕೋಟಿಯನ್ನೂ ಉದ್ಧಾರ ಮಾಡಿಕೊಳ್ಳಬಹುದು.

"ಧರ್ಮವೇ ಜಯವೆಂಬ ದಿವ್ಯಮಂತ್ರ"
"ಹರಿ ಸರ್ವೋತ್ತಮ ವಾಯು ಜೀವೋತ್ತಮ"


# ಹೆಲ್ಮೆಟ್ ತಪ್ಪದೇ ಧರಿಸಬೇಕು



**ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.**

**ಹೆಲ್ಮೆಟ್ ಧರಿಸಿ ವಾಹನ ನಡೆಸಿ**

# ಶ್ರೀ ಕೃಷ್ಣನ ವಿಶ್ವರೂಪ ದರ್ಶನ



ಶ್ರೀಮತಿ. - ಎ. ಗೀತಾ ವೀರರಾಘವನ್

ಶ್ರೀ ಕೃಷ್ಣನು ತನ್ನ ಅವತಾರ ಕಾಲದಲ್ಲಿ ಮೂರು ರೀತಿಯ ವಿಶ್ವರೂಪ ದರ್ಶನವನ್ನು ಪ್ರಕಾಶಿಸಿದ್ದಾನೆ. ಮೊದಲಿಗೆ ಪುಟ್ಟ ಮಗುವಾಗಿದ್ದಾಗ ಯಶೋದೆಗೆ ಬಾಯಿಯಲ್ಲಿ ಏನಿದೆ ತೋರಿಸೆಂದಾಗ ಅವಳಿಗೆ ದಿಗ್ಭ್ರಮೆ ಆಗುವಂತೆ ಸಪ್ತಲೋಕಗಳನ್ನೂ ತನ್ನ ಬಾಯಿಯಲ್ಲಿ ತೋರಿಸಿದನು.

ಎರಡನೆಯದಾಗಿ ಹಸುಗಳನ್ನು ಮೇಯಿಸಲು ಗೋಪಾಲಕರೊಡನೆ ಶ್ರೀಕೃಷ್ಣನು ಕಾಡಿಗೆ ಹೋಗಿದ್ದಾಗ ಶ್ರೀ ಕೃಷ್ಣನು ಸ್ವಲ್ಪ ದೂರದಲ್ಲಿದ್ದಾಗ ಅವನು ಬರುವಷ್ಟರಲ್ಲಿ ಬ್ರಹ್ಮನು ಗೋಕುಲದ ಎಲ್ಲಾ ಹಸು ಕರುಗಳನ್ನು ಮತ್ತು ಗೋಪ ಬಾಲಕರನ್ನೆಲ್ಲಾ ಕದ್ದು ಮುಚ್ಚಿಟ್ಟನು. ಆಗ ಶ್ರೀ ಕೃಷ್ಣನು ತಾನೇ



ಆ ಎಲ್ಲಾ ಹಸು ಕರುಗಳು,ಗೋಪಬಾಲಕರ ರೂಪವನ್ನು ಧರಿಸಿ ಒಂದು ವರ್ಷ ಕಾಲ ಎಲ್ಲಾ ಗೋಪಾಲಕರ ಮನೆಯಲ್ಲಿ ಇದ್ದು ತಮ್ಮ ಹಸು ಕರುಗಳು ಗೋಪ ಬಾಲಕರ ಸದ್ಗುಣಗಳಿಗೆ ಬೆರಗಾಗುವಂತೆ ಮಾಡಿ ಬ್ರಹ್ಮನಿಗೆ ತನ್ನ ವಿಶ್ವರೂಪ ದರ್ಶನ ತೋರಿದನು. ಮೂರನೆಯದಾಗಿ ಯುದ್ಧರಂಗದಲ್ಲಿ ಅರ್ಜುನನಿಗೆ ತೋರಿಸಿದ ಅತ್ಯಂತ ಪ್ರಖ್ಯಾತವಾದುದು ಈ ವಿಶಿಷ್ಟವಾದ ವಿಶ್ವರೂಪದರ್ಶನ.

ಯುದ್ಧ ರಂಗದಲ್ಲಿ ಅರ್ಜುನನು ತನ್ನ ಸಾರಥಿಯಾಗಿದ್ದ ಮಾಧವನಿಗೆ ಎರಡು ಸೇನೆಗಳ ಮಧ್ಯದಲ್ಲಿ ತನ್ನ ರಥವನ್ನು ನಿಲ್ಲಿಸಲು ಕೇಳಿದನು. ಅಂತೆಯೇ ಶ್ರೀ ಕೃಷ್ಣನು ಮುಗುಳ್ನಕ್ಕು ರಥವನ್ನು ಎರಡು ಸೇನೆಗಳ ಮಧ್ಯೆ ನಿಲ್ಲಿಸಿ ತನ್ನ ಮಾಯಾಜಾಲವನ್ನು ಬೀಸಿದನು.ಆಗ ಅರ್ಜುನನು ಎಲ್ಲೆಲ್ಲೂ ತನ್ನ ಬಂಧು ಬಾಂಧವರನ್ನು ಕಂಡು ವಿಚಲಿತನಾಗಿ ತಾನು ಯುದ್ಧ ಮಾಡುವುದಿಲ್ಲವೆಂದು ತನ್ನ ಬಾಣಗಳನ್ನು ಬಿಸುಟು ಅತ್ಯಂತ ದುಃಖಿತನಾಗುತ್ತಾನೆ. ಅರ್ಜುನನ್ನು ಅವನ ಸ್ವಧರ್ಮವಾದ ಕ್ಷತ್ರಿಯ ಧರ್ಮವಾದ ಯುದ್ಧಕ್ಕೆ ಪ್ರೋತ್ಸಾಹಿಸುವ ನೆಪದಲ್ಲಿ ಶ್ರೀ ಕೃಷ್ಣನು ಲೋಕಕ್ಕೆ ಗೀತೋಪದೇಶದ ಅಮೃತಧಾರೆ ಎರೆದನು.

ಶ್ರೀ ಕೃಷ್ಣನು ಅರ್ಜುನನಿಗೆ ಅನೇಕ ವಿಚಾರಗಳನ್ನು ತಿಳಿಸಿ ತನ್ನ ವಿಭೂತಿ ಯೋಗವನ್ನು ವಿಸ್ತಾರವಾಗಿ ತಿಳಿಸುತ್ತಾನೆ. ಅದನ್ನು ಸ್ವಾಮಿ ತಿಳಿಸದಿದ್ದರೆ ಬೇರೆ ಹೇಗೂ ಮಾನವರು ತಿಳಿಯಲು ಸಾಧ್ಯವಿಲ್ಲ.ಅದನ್ನೆಲ್ಲಾ ಕೇಳಿದ ಅರ್ಜುನನು ಶ್ರೀ ಕೃಷ್ಣನು ತನಗೆ ಸಖ ಬಂಧು ಮಾತ್ರವಲ್ಲದೆ ಈ ಲೋಕದ ಸೃಷ್ಟಿಕರ್ತಾ, ಸಂರಕ್ಷಕ ಮತ್ತು ಸಂಹಾರಕನೆಂದು ದೃಢವಾಗಿ ತಿಳಿಯುತ್ತಾನೆ. ಆಗ ಅವನು ಪರಮ ಪುರುಷ ಪುರುಷೋತ್ತಮನಾದ ಶ್ರೀಕೃಷ್ಣನನ್ನು ನಾನು ನಿನ್ನನ್ನು ನನ್ನ ಸಖ, ಬಂಧು ಎಂದು ತಿಳಿದಿದ್ದೆ. ಆದರೆ "ನೀನು ಈ ಲೋಕದ ಸೃಷ್ಟಿಕರ್ತ, ಸಂರಕ್ಷಕ ಮತ್ತು ಸಂಹಾರಕ ಎಂದು ನಿನ್ನನ್ನು ಬಿಟ್ಟು ಉಳಿದೆಲ್ಲವೂ

ನಿನ್ನಿಂದ ಉಂಟಾಗುವುದೆಂದು ಅರಿತೆ. ಸಾಧ್ಯವಾದರೆ ನನಗೆ ನಿನ್ನ ಆ ರೂಪವನ್ನು ತೋರಿಸು ಎಂದು ಪ್ರಾರ್ಥಿಸಿದನು."

ಆಗ ಕರುಣಾಸಾಗರನಾದ ಶ್ರೀಕೃಷ್ಣನು ತನ್ನ ಬಂಧು, ಸಖ ಮತ್ತು ಭಕ್ತನಾದ ಅರ್ಜುನನಿಗೆ ನಿನ್ನ ಈ ಮಾಂಸ ಚಕ್ಷುಸ್ಸುಗಳಿಂದ (ಕಣ್ಣುಗಳು) ಆ ನನ್ನ ದಿವ್ಯ ರೂಪವನ್ನು ನೋಡಲು ಸಾಧ್ಯವಿಲ್ಲ. ನಾನು ನಿನಗೆ ದಿವ್ಯವಾದ ಚಕ್ಷುಸ್ಸು ಗಳನ್ನು ಪ್ರಧಾನ ಮಾಡುತ್ತೇನೆ. ಅದರಿಂದ ನೀನು ಆ ರೂಪ ವನ್ನು ನೋಡುವಂತಾಗು ಎಂದು ಹೇಳಿದನು.

ಈ ಲೋಕದಲ್ಲಿ ಇರುವುದೆಲ್ಲಾ ಎರಡು ಬಗೆ. ಕೆಲವು ನಮ್ಮ ಕಣ್ಣಿಗೆ ಕಾಣುವಂತಹುದು.ಕೆಲವು ಕಾಣಲಾರ ದಂತಹವು.ಮಾನಸಿಕವಾಗಿ ಧ್ಯಾನದಿಂದ ಎಲ್ಲರೂ ಭಗವಂತ ನನ್ನು ಮನಸ್ಸಿನಲ್ಲಿ ಕಾಣಬಹುದು. ಆದರೆ ಅರ್ಜುನನು ಸ್ವಾಮಿಯ ಸೃಷ್ಟಿ ಕಾರ್ಯ ಕಲ್ಯಾಣಗುಣಗಳು, ಸಂರಕ್ಷಣೆ, ಸಂಹಾರ ಕಾರ್ಯ ಎಲ್ಲವನ್ನೂ ಸ್ವಾಮಿಯ ದಿವ್ಯ ಅಲಂಕಾರ ಗಳೊಡನೆ ಮಂಗಳಕರನಾದ ಅವನ ದಿವ್ಯ ದೇಹದ ಒಂದು ಅಂಶದಲ್ಲಿ ನೇರವಾಗಿ ಕಾಣುವ ಭಾಗ್ಯಶಾಲಿಯಾದನು.

ಭಗವಂತನು ಅಪಾರವಾದ ಅಗಾಧವಾದ ಅತ್ಯಂತ ಆಶ್ಚರ್ಯಕರವಾದ ಅತ್ಯದ್ಭುತ ವಿಶ್ವರೂಪವನ್ನು ತನ್ನ ದೇಹದ ಒಂದಂಶದಲ್ಲಿ ಅರ್ಜುನನಿಗೆ ತೋರಿದನು. ಈ ಅದ್ಭುತ ವಿಶ್ವರೂಪದ ವರ್ಣನೆ ಗೀತಾಶಾಸ್ತ್ರದ ಹನ್ನೊಂದನೆ ಅಧ್ಯಾಯ ದಲ್ಲಿ ಅತ್ಯಂತ ಮನಮೋಹಕವಾಗಿ ವಿವರಿಸಿದೆ.

ವೈಶ್ವಾನರ ವಿದ್ಯೆ ಹೇಳುವಾಗ ಭಗವಂತನು ಈ ರೂಪ ದಲ್ಲಿದ್ದಾನೆ. 'ಭೂಃ ಪಾದೌ..ಚಂದ್ರ ಸೂರ್ಯೌ ಚ ನೇತ್ರೆ' ಎಂದೆಲ್ಲಾ ಹೇಳಿದೆ. ಅರ್ಜುನನು ಶ್ರೀ ಕೃಷ್ಣನು ಅನುಗ್ರಹಿಸಿದ ದಿವ್ಯ ದೃಷ್ಟಿಯಿಂದ ಆ ಸ್ವಾಮಿಯ 'ಯೋಗಮೈಶ್ವರಂ' - ಅಸಾ ಧಾರಣವಾದ ಅದ್ಭುತವಾದ ರೂಪವನ್ನು ಅತ್ಯಂತ ವಿಸ್ಮಯಾ ವಿಷ್ಟನಾಗಿ ನೋಡಲಾರಂಭಿಸಿದನು.ಎಷ್ಟು ನೋಡಿದರೂ ಮುಗಿಯಲಾರದಂತಹ ಅನಂತ ದಿವ್ಯಾದ್ಭುತ ರೂಪ. ವಿವಿಧ ವಾದ ವಿಚಿತ್ರವಾದ ಸಮಸ್ತ ಜಗತ್ತನ್ನೂ ತೋರಿಸಿ ಕೊಟ್ಟನು.ಶ್ರೀ ಕೃಷ್ಣನು ಅತ್ಯಂತ ತೇಜೋಮಯನಾಗಿ ಪ್ರಕಾಶಿಸಿದನು. ಸಹಸ್ರ ಸಹಸ್ರ ಸೂರ್ಯರು ಒಂದೆಡೆ ಏಕ ಕಾಲದಲ್ಲಿ ಉದ ಯಿಸಿದರೂ ಸಮಾನವಾಗಲಾರದಂತಹ ಅದ್ಭುತ ತೇಜೋ ರಾಶಿಯಾಗಿತ್ತು ಆ ಸರ್ವೇಶ್ವರನ ರೂಪ.

ಈ ವಿಶ್ವರೂಪದಲ್ಲಿ ಶ್ರೀ ಕೃಷ್ಣನು ಲೋಕಗಳಲ್ಲಿ ಸಹಸ್ರ ಸಹಸ್ರ ವರ್ಷಗಳಲ್ಲಿ ಏನೆಲ್ಲವನ್ನೂ ಕಾಣಬಹುದೋ ಶಾಸ್ತ್ರ ಗಳಿಂದ ಏನೆಲ್ಲಾ ತಿಳಿದು ಬರುವುದೋ ಎಲ್ಲದರ ಅಮೋಘ ದರ್ಶನ ನೀಡಿದನು.

ಸ್ವಾಮಿಯ ನಾಲ್ಕು ವ್ಯೂಹಗಳ ದಿವ್ಯ ದರ್ಶನ ವಾಯಿತು. ಭಗವಂತನ ನಾಲ್ಕು ವ್ಯೂಹಗಳು ವಾಸುದೇವ, ಸಂಕರ್ಷಣ, ಪ್ರದ್ಯುಮ್ನ,ಅನಿರುದ್ಧ ನಾಲ್ಕು ವರ್ಣಗಳನ್ನು ಉಳ್ಳದ್ದು. ಅವು ಒಂದು ಭಾಗದಲ್ಲಿ ಬೆಳ್ಳಗಿರುವುದು, ಒಂದು ಕಡೆ ಕೆಂಪು, ಒಂದು ಕಡೆ ಹಳದಿ ಒಂದು ಪುಷ್ಪ ವರ್ಣವುಳ್ಳದ್ದು. ಆಯಾ ವ್ಯೂಹಗಳಲ್ಲಿ ಫಲವನ್ನು ಅಪೇಕ್ಷಿಸುವವರಿಗೆ ಆಯಾ ರೂಪ ಗುಣಗಳಲ್ಲಿ ಫಲಗಳನ್ನು ನೀಡಿ ಅನುಗ್ರಹಿಸುತ್ತಾನೆ.

ಅಸಂಖ್ಯಾತವಾದ ಮುಖಮಂಡಲಗಳು, ಆ ಮಂಡಲ ಗಳಲೆಲ್ಲಾ ಎರಡೆರಡರಂತೆ ಅಸಂಖ್ಯಾತ ನೇತ್ರಗಳೂ, ಅನೇಕ ಬಾಹುಗಳೂ ಸೌಗಂಧ್ಯ ಸೌಕುಮಾರ್ಯ ಉಳ್ಳ ಅನೇಕ ಆಭ ರಣಗಳು, ಎಲ್ಲವನ್ನೂ ನಿಯಮಿಸುತ್ತಿರುವ ಕಾಲ ಸ್ವರೂಪಿ ಯಾಗಿರುವುದರಿಂದ ಪ್ರಜ್ವಲಿಸುವ ಅನೇಕ ದಿವ್ಯ ಆಯುಧಗಳು, ಅನೇಕ ದಿವ್ಯ ಮಾಲೆಗಳೂ, ಅನೇಕ ದಿವ್ಯ ಗಂಧ ಲೇಪನಗಳೂ ಸರ್ವ ಆಶ್ಚರ್ಯಮಯವಾದುದು. ಈ ರೂಪವನ್ನು ಹಿಂದೆ ಎಂದೂ ಯಾರೂ ಕಾಣಲಿಲ್ಲ ಮುಂದೆಯೂ ಯಾರೂ ಕಾಣುವ ಸಂಭವವಿಲ್ಲ ಅರ್ಜುನನೊಬ್ಬನೇ ಕಂಡಿದ್ದ.

ಆ ರೂಪದಲ್ಲಿ ಅರ್ಜುನನು ದೇವಾಸುರರ ಪ್ರತಿಕ್ರಿಯೆ ಕಂಡನು, ದೇವತೆಗಳು ಸಂತೋಷ ಪಟ್ಟು ಸ್ತೋತ್ರ ಮಾಡಿದರು. ಅಸುರರು ನಡುಗಿ ಓಡಿದರು.ಆ ರೂಪದಲ್ಲಿ ತೇಜಸ್ಸು ಜ್ವಲಿ ಸುತ್ತಿತ್ತು.ಕಾಲತ್ರಯಗಳಾದ ಭೂತ ವರ್ತಮಾನ ಭವಿಷ್ಯತ್ತು ಗಳನ್ನು ನಿಯಮಿಸುವ ಅದ್ಭುತ ರೂಪಿಯಾಗಿದ್ದನು ಸ್ವಾಮಿ. ಎಲ್ಲೆಲ್ಲಿಯೂ ಎಲ್ಲಾ ದಿಕ್ಕುಗಳಲ್ಲಿಯೂ ಆ ವಿಶ್ವ ರೂಪಿಯ ಮುಖ ಮಂಡಲಗಳು ವಿಜೃಂಭಿಸುತ್ತಿತ್ತು.ನಭ ಸ್ಪರ್ಶವಾಗಿ ಎಲ್ಲೆಡೆಯೂ ಸ್ವಾಮಿಯ ತೇಜಸ್ಸು ಅತ್ಯಂತ ಆಶ್ಚರ್ಯಕರವಾಗಿ ಜ್ವಲಿಸುತ್ತಿತ್ತು. ಆ ಅದ್ಭುತ ದಿವ್ಯ ಮಾಲೆಗಳೂ ದಿವ್ಯ ಆಭರಣಗಳೂ ದಿವ್ಯ ಆಯುಧಗಳೂ ದಿವ್ಯ ಅದ್ಭುತ ವಸ್ತುಗಳೂ ಅತ್ಯಂತ ತೇಜೋ ಮಯನಾದ ಆ ವಿಶ್ವರೂಪಿಗೆ ಅತ್ಯಂತ ಉಚಿತವಾಗಿತ್ತು. ಆದಿ ಅಂತ ರಹಿತವಾದ ಸ್ವಾಮಿ ಎಲ್ಲೆಲ್ಲೂ ತಾನೇ ತಾನಾಗಿ ವಿಜೃಂಭಿ ಸಿದನು.

ಆ ಸ್ವಾಮಿಯ ವಿಗ್ರಹದ ಒಂದಂಶದಲ್ಲಿ ಅತ್ಯುದ್ಭುತ ತೇಜೋ ರೂಪದಲ್ಲಿ ಅತ್ಯಂತ ಆಶ್ಚರ್ಯಕರವಾದ ಮಾಲೆ ಗಳೇನು ಶಾಸ್ತ್ರಗಳೇನು ಆಯುಧಗಳೇನು ಆಭರಣಗಳೇನು ದಿವ್ಯ ಗಂಧ ಪುಷ್ಪಗಳೇನು ಎಲ್ಲವೂ ವಿಸ್ಮಯಕರವಾಗಿತ್ತು

ತ್ರಿವಿಕ್ರಮ ರೂಪಿಯಾದ ಸ್ವಾಮಿ ಭೂಮಿಯನ್ನು ಅಳೆದಾಗ ಅವನ ಪಾದಗಳು ಎಲ್ಲಾ ಲೋಕಗಳನ್ನೂ ಆವರಿಸಿತ್ತು. ಈ ವಿಶ್ವರೂಪದಲ್ಲಿ ಆದಿ ಅಂತ್ಯರಹಿತವಾಗಿ ಸ್ವಾಮಿಯ ತೇಜಸ್ಸು ಎಲ್ಲೆಲ್ಲಿಯೂ ಆವರಿಸಿತ್ತು. ಸಹಸ್ರ ಸಹಸ್ರ ಸೂರ್ಯನು ಏಕಕಾಲದಲ್ಲಿ ಒಂದೇ ಸ್ಥಳದಲ್ಲಿ ಉದಯಿಸಿದರೆ ಎಂತಹ ತೇಜಸ್ಸು ಇರುವುದೋ ಅದನ್ನು ಮೀರಿದ ತೇಜಸ್ಸು ಸ್ವಾಮಿಯ ದಿವ್ಯ ಮಂಗಳ ವಿಗ್ರಹದಲ್ಲಿತ್ತು.

ಆ ವಿಶ್ವರೂಪದಲ್ಲಿ ಸ್ವಾಮಿಯ ದಿವ್ಯ ಮಂಗಳ ವಿಗ್ರಹದಲ್ಲಿ ವಿವಿಧವೂ ವಿಚಿತ್ರವೂ ಆದ ದೇವತೆಗಳೂ ಮನುಷ್ಯರೂ ಸ್ಥಾವರಗಳೂ ತಿರ್ಯಕ್ಕುಗಳೂ ಎಲ್ಲವೂ ಅಡಗಿದ್ದವು. ಇವೆಲ್ಲವೂ ಭೋತೃವರ್ಗ, ಸ್ವಾಮಿಯ ಸೇವೆಗಾಗಿಯೇ ಮೀಸಲಿರುವವರು. ಅಲ್ಲದೆ ಪೃಥ್ವೀ ಅಂತರಿಕ್ಷ ಪಾತಾಳ ಮುಂತಾದ ಅವನ ಅನೇಕ ಭೋಗಸ್ಥಾನಗಳು, ಮತ್ತು ಭೋಗೋಪಕರಣಗಳಾದ ಇಂದ್ರಿಯ ಮುಂತಾದವುಗಳು ಎಲ್ಲವೂ ಇದ್ದುವು. ಆಧಾರವಾದ ಪಾದಗಳು ಎರಡು, ಮಧ್ಯಭಾಗ (ಕಟಿ ಪ್ರದೇಶ) ಒಂದು. ಆದರೆ ಅನೇಕ ಬಾಹುಗಳು, ಉದರಗಳು, ಅಸ್ತ್ರಗಳು ಎಲ್ಲೆಲ್ಲೂ ಅನಂತರೂಪ.

ಎಲ್ಲಿ ನೋಡಿದರೂ ವಿಶ್ವರೂಪ ವಿಶ್ವತೋಮುಖ, ವಿಶ್ವೇಶ್ವರ. ಆವಿಶ್ವೇಶ್ವರನಲ್ಲಿ ದ್ವಾದಾಶಾದಿತ್ಯರು, ಅಷ್ಟವಸುಗಳು, ಏಕಾದಶ ರುದ್ರರು ಇಬ್ಬರು ಅಶ್ವಿನಿ ದೇವತೆಗಳು, ಪ್ರಾಣಿಪಕ್ಷಿ ಜಾತಗಳು, ಚತುರ್ಮುಖಬ್ರಹ್ಮ ಅವನ ಕಟ್ಟಾಳೆ ಅನುಸರಿಸುತ್ತಿರುವ ಈಶ್ವರನು, ನಲವತ್ತೊಂಬತ್ತು ಮರುತ್ತುಗಳು ದೇವರ್ಷಿ ಪ್ರಮುಖರು ಎಲ್ಲ ಋಷಿಗಳೂ ವಾಸುಕಿ ತಕ್ಷಕ ಎಲ್ಲರೂ ಕಂಡರು.

ದೇವತೆಗಳು ಅತ್ಯಂತ ಭಕ್ತಿಯಿಂದ ಅವನನ್ನು ಸುತ್ತಿಸಿದರು ಅಸುರರು ಹೆದರಿ ಓಡುತ್ತಿದ್ದರು.

ಸ್ವಾಮಿ ಪ್ರಳಯ ಕಾಲ ಅಗ್ನಿಯಂತೆ ಎಲ್ಲವನ್ನೂ ಸಂಹರಿಸಲು ಉದ್ಯುಕ್ತವಾದ ಅತಿ ಘೋರವಾದ ಸಂಹಾರಕ ರೂಪವನ್ನು ಪ್ರಕಾಶಿಸಿದನು. ಕೋರೆ ಹಲ್ಲುಗಳಿಂದ ಅವನ ಬಾಯಿಗಳು ಭಯಂಕರವಾಗಿತ್ತು. ಅರ್ಜುನನಿಗೆ ದಿಕ್ಕು ತೋಚದಂತಾಯಿತು. ಧೃತರಾಷ್ಟ್ರನ ಮಕ್ಕಳಾದ ದುರ್ಯೋಧನ ಮುಂತಾದವರು ಹಾಗೆಯೇ ಭೀಷ್ಮ, ದ್ರೋಣ, ಕರ್ಣಾದಿಗಳೂ ಮತ್ತು ಎರಡೂ ಕಡೆಯ ರಾಜರ ಸಮೂಹಗಳು ಸ್ವಾಮಿಯ ಭಯಂಕರ ಕೋರೆ ಹಲ್ಲುಗಳ ನಡುವೆ ತಾವಾಗಿಯೇ ತ್ವರೆಯಿಂದ ಪ್ರವೇಶಿಸುತ್ತಿದ್ದರು. ಅವರಲ್ಲಿ ಕೆಲವರು ಪುಡಿ ಪುಡಿಯಾದ ಶಿರಸ್ಸುಗಳು ಸ್ವಾಮಿಯ ಹಲ್ಲುಗಳ ಸಂದುಗಳಲ್ಲಿ ಸಿಕ್ಕಿ ಹಾಕಿಕೊಂಡಿದ್ದವು. ನದಿಗಳು ಸಮುದ್ರದ ಕಡೆಗೆ ಧಾವಿಸು ವಂತೆ ಕಾಣುತ್ತಿತ್ತು. ಆ ರಾಜುರಗಳ ಸಮೂಹವನ್ನು ಜ್ವಾಲೆಯನ್ನು ಕೆದರುವ ಬಾಯಿಗಳಿಂದ ನುಂಗುತ್ತಾ ಕೋಪ ವೇಗದಿಂದ ಅವರ ರಕ್ತದಿಂದ ಸಿಕ್ತವಾದ ತುಟಿಗಳನ್ನು ಮತ್ತೆ ಮತ್ತೆ ನೆಕ್ಕುತ್ತಾ ಅತಿ ಭಯಂಕರನಾಗಿದ್ದನು. ಸಮಸ್ತ ಜಗತ್ತೂ ದಹಿಸುತ್ತಿತ್ತು.

ಆ ಭಯಂಕರ ದೃಶ್ಯವನ್ನು ಕಂಡ ಅರ್ಜುನನು ಭಯದಿಂದ ನಡುಗಿದನು. ಸ್ವಾಮಿಯನ್ನು ತನ್ನಲ್ಲಿ ಪ್ರಸನ್ನನಾಗಿ ತನ್ನ ಮೊದಲಿನ ಸುಂದರ ರೂಪವನ್ನು ತೋರಿಸಬೇಕೆಂದು ಪ್ರಾರ್ಥಿಸಿದನು.

ಈ ವಿಶ್ವರೂಪವನ್ನು ಕಂಡ ಅರ್ಜುನನು ಆನಂದ ಆಶ್ಚರ್ಯ ಭಯಗಳಿಂದ ರೋಮಾಂಚನಗೊಂಡನು. ಸ್ವಾಮಿಯನ್ನು ತಾನು ಸಖನೆಂದು ಭಾವಿಸಿ ಹಾಸ್ಯ ಮಾಡಿರುವುದು ತನಗೆ ಸಮಾನನಂತೆ ಕಂಡಿರುವುದು ಮುಂತಾದ ಅಪರಾಧಗಳಿಗಾಗಿ ತನ್ನನ್ನು ಕ್ಷಮಿಸಬೇಕೆಂದು ಪ್ರಾರ್ಥಿಸಿದನು.

ಅರ್ಜುನನು ಲೋಕದ ಎಲ್ಲಾ ಮಾನವರಂತೆ ದೇಹಾತ್ಮ ಭ್ರಮೆಯಲ್ಲಿ ಸಿಲುಕಿದ್ದನು ಮತ್ತು ತಾನು ತನ್ನ ಬಂಧುಗಳ ಸಂಹಾರ ಮಾಡುತ್ತಿದ್ದೇನೆ ಎಂದು ತಿಳಿದಿದ್ದನು.

ಶ್ರೀ ಕೃಷ್ಣನು ಈ ಅತ್ಯದ್ಭುತ ವಿಸ್ಮಯಕಾರಿ ಅತ್ಯಂತ ವಿಶಿಷ್ಟ ವಿಶ್ವರೂಪದಲ್ಲಿ ತಾನು ಪರಬ್ರಹ್ಮ ಪರಮಾತ್ಮ ಸೃಷ್ಟಿ ಸಂರಕ್ಷಣ ಸಂಹಾರ ಮಾಡುವ ಸರ್ವೇಶ್ವರನೆಂದು ತಿಳಿಸಿಕೊಟ್ಟನು.

ಈ ವಿಶ್ವರೂಪವನ್ನು ಯುದ್ಧರಂಗದ ಮಧ್ಯದಲ್ಲಿ ಅರ್ಜುನನು ಮಾತ್ರ ಕಂಡನು. ಬೇರೆಯಾರಿಗೂ ಗೋಚರಿಸಲಿಲ್ಲ. ಸಂಜಯನು ವ್ಯಾಸರ ಪ್ರಸಾದದಿಂದ ಈ ಅದ್ಭುತವನ್ನು ಕಾಣುವ ಇನ್ನೊಬ್ಬ ಭಾಗ್ಯಶಾಲಿಯಾದನು.

ಸ್ವಾಮಿ ತೋರಿದ ಈ ವಿಶ್ವರೂಪ ದರ್ಶನಕ್ಕೆ ಎಲ್ಲಾ ಆಚಾರ್ಯರೂ ಎಲ್ಲಾ ಭಕ್ತರೂ ಅತ್ಯಂತ ಪರವಶರಾಗಿದ್ದಾರೆ. ಇದನ್ನು ಓದಿದ ಯಾರೊಬ್ಬರೂ ಪರವಶರಾಗದಿರಲು ಸಾಧ್ಯವಿಲ್ಲ.

ಅಂತಹ ವಿಶಿಷ್ಟ ವಿಶ್ವರೂಪಿಯಾದ ಶ್ರೀ ಕೃಷ್ಣನು ಪರಸ್ವರೂಪಿಯಾದ ಶ್ರೀಮನ್ನಾರಾಯಣ. ಆ ಶ್ರೀ ಕೃಷ್ಣ ಪರಮಾತ್ಮನ ಪಾದಗಳಿಗೆ ನಾವೆಲ್ಲರೂ ಭಕ್ತಿಯಿಂದ ನಮಿಸಿ ನಮ್ಮೆಲ್ಲರನ್ನೂ ಸಂರಕ್ಷಿಸಿ ವಿಶ್ವಕ್ಕೆ ಶಾಂತಿ ಸಮಾಧಾನಗಳನ್ನು ತಂದು ಕೊಡಲು ಪ್ರಾರ್ಥಿಸೋಣ.

# ಪಾಠ-7 ಸಂಸ್ಕೃತ ಕಲಿಯೋಣ...!!

- ನಿರ್ವಹಣೆ - ಡಾ॥ ಸಮುದ್ರಾಲ ಲಕ್ಷ್ಮಣಯ್ಯ & ಕಿರಣ್‌ಭಟ್

| | | | |
|---|---|---|---|
| ध् + न = ध्न | ಢ್ + ನ = ಢ್ನ | ब् + द = ब्द | ಬ್ + ದ = ಬ್ದ |
| ध् + म = ध्म | ಢ್ + ಮ = ಢ್ಮ | ब् + ब = ब्ब | ಬ್ + ಬ = ಬ್ಬ |
| ध् + य = ध्य | ಢ್ + ಯ = ಢ್ಯ | ब् + भ = ब्भ | ಬ್ + ಭ = ಬ್ಭ |
| ध् + र = ध्र | ಢ್ + ರ = ಢ್ರ | ब् + य = ब्य | ಬ್ + ಯ = ಬ್ಯ |
| ध् + व = ध्व | ಢ್ + ವ = ಢ್ವ | ब् + र = ब्र | ಬ್ + ರ = ಬ್ರ |
| न् + ख = न्ख | ನ್ + ಖ = ನ್ಖ | ब् + स = ब्स | ಬ್ + ಸ = ಬ್ಸ |
| न् + त = न्त | ನ್ + ತ = ನ್ತ | भ् + न = भ्न | ಬ್ + ನ = ಬ್ನ |
| न् + थ = न्थ | ನ್ + ಥ = ನ್ಥ | भ् + य = भ्य | ಭ್ + ಯ = ಭ್ಯ |
| न् + द = न्द | ನ್ + ದ = ನ್ದ | भ् + र = भ्र | ಭ್ + ರ = ಭ್ರ |
| न् + ध = न्ध | ನ್ + ಧ = ನ್ಧ | भ् + व = भ्व | ಭ್ + ವ = ಭ್ವ |
| न् + न = न्न | ನ್ + ನ = ನ್ನ | म् + न = म्न | ಮ್ + ನ = ಮ್ನ |
| न् + प = न्प | ನ್ + ಪ = ನ್ಪ | म् + प = म्प | ಮ್ + ಪ = ಮ್ಪ |
| न् + म = न्म | ನ್ + ಮ = ನ್ಮ | म् + ब = म्फ | ಮ್ + ಭ = ಮ್ಭ |
| न् + य = न्य | ನ್ + ಯ = ನ್ಯ | म् + भ = म्ब | ಮ್ + ಬ = ಮ್ಬ |
| न् + र = न्र | ನ್ + ರ = ನ್ರ | म् + फ = म्भ | ಮ್ + ಫ = ಮ್ಫ |
| न् + व = न्व | ನ್ + ವ = ನ್ವ | म् + म = म्म | ಮ್ + ಮ = ಮ್ಮ |
| प् + त = प्त | ಪ್ + ತ = ಪ್ತ | म् + य = म्य | ಮ್ + ಯ = ಮ್ಯ |
| प् + न = प्न | ಪ್ + ನ = ಪ್ನ | म् + र = म्र | ಮ್ + ರ = ಮ್ರ |
| प् + प = प्प | ಪ್ + ಪ = ಪ್ಪ | म् + ल = म्ल | ಮ್ + ಲ = ಮ್ಲ |
| प् + म = प्म | ಪ್ + ಮ = ಪ್ಮ | य् + य = य्य | ಯ್ + ಯ = ಯ್ಯ |
| प् + य = प्य | ಪ್ + ಯ = ಪ್ಯ | य् + व = य्व | ಯ್ + ವ = ಯ್ವ |
| प् + र = प्र | ಪ್ + ರ = ಪ್ರ | र् + क = र्क | ರ್ + ಕ = ರ್ಕ |
| प् + ल = प्ल | ಪ್ + ಲ = ಪ್ಲ | र् + च = र्च | ರ್ + ಚ = ರ್ಚ |
| प् + व = प्व | ಪ್ + ವ = ಪ್ವ | र् + छ = र्छ | ರ್ + ಛ = ರ್ಛ |
| प् + स = प्स | ಪ್ + ಸ = ಪ್ಸ | र् + ज = र्ज | ರ್ + ಜ = ರ್ಜ |
| फ् + य = फ्य | ಫ್ + ಯ = ಫ್ಯ | र् + झ = र्झ | ರ್ + ಝ = ರ್ಝ |
| फ् + र = फ्र | ಫ್ + ರ = ಫ್ರ | र् + ट = र्ट | ರ್ + ಟ = ರ್ಟ |
| ब् + ज = ब्ज | ಬ್ + ಜ = ಬ್ಜ | र् + ठ = र्ठ | ರ್ + ಠ = ರ್ಠ |

र् + ड = र्ड
र् + ढ = र्ढ
र् + ण = र्ण
र् + त = र्त
र् + थ = र्थ
र् + द = र्द
र् + ध = र्ध
र् + न = र्न
र् + प = र्प
र् + फ = र्फ
र् + ब = र्ब
र् + भ = र्भ
र् + य = र्य
र् + र = र्र
र् + ल = र्ल
र् + व = र्व
र् + श = र्श
र् + ष = र्ष
र् + स = र्स
र् + ह = र्ह
ल् + क = ल्क
ल् + ग = ल्ग
ल् + प = ल्प
ल् + भ = ल्भ
ल् + म = ल्म
ल् + य = ल्य
ल् + ल = ल्ल
ल् + व = ल्व
व् + य = व्य
व् + र = व्र
श् + च = श्च
श् + म = श्म

ರ್ + ಡ = ರ್ಡ
ರ್ + ಢ = ರ್ಢ
ರ್ + ಣ = ರ್ಣ
ರ್ + ತ = ರ್ತ
ರ್ + ಥ = ರ್ಥ
ರ್ + ದ = ರ್ದ
ರ್ + ಧ = ರ್ಧ
ರ್ + ನ = ರ್ನ
ರ್ + ಪ = ರ್ಪ
ರ್ + ಫ = ರ್ಫ
ರ್ + ಬ = ರ್ಬ
ರ್ + ಭ = ರ್ಭ
ರ್ + ಯ = ರ್ಯ
ರ್ + ರ = ರ್ರ
ರ್ + ಲ = ರ್ಲ
ರ್ + ವ = ರ್ವ
ರ್ + ಶ = ರ್ಶ
ರ್ + ಷ = ರ್ಷ
ರ್ + ಸ = ರ್ಸ
ರ್ + ಹ = ರ್ಹ
ಲ್ + ಕ = ಲ್ಕ
ಲ್ + ಗ = ಲ್ಗ
ಲ್ + ಪ = ಲ್ಪ
ಲ್ + ಭ = ಲ್ಭ
ಲ್ + ಮ = ಲ್ಮ
ಲ್ + ಯ = ಲ್ಯ
ಲ್ + ಲ = ಲ್ಲ
ಲ್ + ವ = ಲ್ವ
ವ್ + ಯ = ವ್ಯ
ವ್ + ರ = ವ್ರ
ಶ್ + ಚ = ಶ್ಚ
ಶ್ + ಮ = ಶ್ಮ

श् + य = श्य
श् + र = श्र
श् + ल = श्ल
श् + व = श्व
श् + श = श्श
ष् + क = ष्क
ष् + ट = ष्ट
ष् + ठ = ष्ठ
ष् + प = ष्प
ष् + म = ष्म
ष् + य = ष्य
ष् + व = ष्व
ष् + ष = ष्ष
स् + क = स्क
स् + ख = स्ख
स् + त = स्त
स् + थ = स्थ
स् + न = स्न
स् + फ = स्फ
स् + म = स्म
स् + य = स्य
स् + र = स्र
स् + व = स्व
स् + स = स्स
ह् + ण = ह्ण
ह् + न = ह्न
ह् + म = ह्म
ह् + य = ह्य
ह् + र = ह्र
ह् + ल = ह्ल
ह् + व = ह्व

ಶ್ + ಯ = ಶ್ಯ
ಶ್ + ರ = ಶ್ರ
ಶ್ + ಲ = ಶ್ಲ
ಶ್ + ವ = ಶ್ವ
ಶ್ + ಶ = ಶ್ಶ
ಷ್ + ಕ = ಷ್ಕ
ಷ್ + ಟ = ಷ್ಟ
ಷ್ + ಠ = ಷ್ಠ
ಷ್ + ಪ = ಷ್ಪ
ಷ್ + ಮ = ಷ್ಮ
ಷ್ + ಯ = ಷ್ಯ
ಷ್ + ವ = ಷ್ವ
ಷ್ + ಷ = ಷ್ಷ
ಸ್ + ಕ = ಸ್ಕ
ಸ್ + ಖ = ಸ್ಖ
ಸ್ + ತ = ಸ್ತ
ಸ್ + ಥ = ಸ್ಥ
ಸ್ + ನ = ಸ್ನ
ಸ್ + ಪ = ಸ್ಪ
ಸ್ + ಫ = ಸ್ಫ
ಸ್ + ಮ = ಸ್ಮ
ಸ್ + ಯ = ಸ್ಯ
ಸ್ + ರ = ಸ್ರ
ಸ್ + ವ = ಸ್ವ
ಸ್ + ಸ = ಸ್ಸ
ಹ್ + ಣ = ಹ್ಣ
ಹ್ + ನ = ಹ್ನ
ಹ್ + ಮ = ಹ್ಮ
ಹ್ + ಯ = ಹ್ಯ
ಹ್ + ರ = ಹ್ರ
ಹ್ + ಲ = ಹ್ಲ
ಹ್ + ವ = ಹ್ವ

# ಋಷಿ ಪಂಚಮಿ ವ್ರತ





**- ವೆಂಕಟ ರಾಘವನ್ . ಎಸ್**

**9845793917**


ಬ್ರಹ್ಮ ದೇವರು ಸೃಷ್ಟಿಕರ್ತ ಮೂಲ ಚೇತನ ಪರಬ್ರಹ್ಮ. ಕಾರ್ಯ ಬ್ರಹ್ಮ ಜಗತ್ತಿನ ಆತ್ಮ ಹಿರಣ್ಯ ಗರ್ಭ. ಬ್ರಹ್ಮನ ಮನಸ್ಸಿನಿಂದ ಸೃಷ್ಟಿಯಾದವರು ಸನಕ, ಸನಂದನ, ಸನಾತನ ಮತ್ತು ಸನತ್ಕುಮಾರರು.ಬ್ರಹ್ಮಪುತ್ರರು ಸಾಕ್ಷಾತ್ ಬ್ರಹ್ಮದೇವರಿಂದ ಬ್ರಹ್ಮಜ್ಞಾನ ಪಡೆದವರು. ಬ್ರಹ್ಮ ಜ್ಞಾನದಿಂದ ಮಹದಾನಂದ ಸ್ಥಿತಿಯನ್ನು ಪಡೆದರು. ಬ್ರಹ್ಮದೇವರು ಸೃಷ್ಟಿ ಕಾರ್ಯದಲ್ಲಿ ಸಹಾಯ ಮಾಡುವಂತೆ ಸ್ಥಿತಿಯನ್ನು ಪಡೆದರು. ಬ್ರಹ್ಮದೇವರು ಸೃಷ್ಟಿ ಕಾರ್ಯದಲ್ಲಿ ಸಹಾಯ ಮಾಡುವಂತೆ ಕೇಳಿದಾಗ ನಿರಾಕರಿಸಿ ತಪಸ್ಸು ಮಾಡಲು ತೆರಳಿದರು. ನಂತರ ಬ್ರಹ್ಮ ದೇವರಿಂದ ಪ್ರಜಾಪತಿಗಳಾಗಿ ಜನಿಸಿದರು ಮಾರಿಚಿ, ಅತ್ರಿ, ಅಗ್ನಿರಸ, ಫುಲಸ್ತ್ಯ, ಫುಲಹ, ಕೃತು, ವಶಿಷ್ಠ, ದಕ್ಷ, ಭೃಗು ಮತ್ತು ನಾರದರು. ಬ್ರಹ್ಮ ದೇವರ ನೇತ್ರಗಳಿಂದ ಮರೀಚಿ, ಹೃದಯದಿಂದ ಭೃಗು, ತಲೆಯಿಂದ ಅಂಗೀರಸ, ವ್ಯಾನವಾಯುವಿನಿಂದ ಫುಲಹ, ಉದಾನ ವಾಯುವಿನಿಂದ ಫುಲಸ್ತ್ಯ, ಸಮಾನ ವಾಯುವಿನಿಂದ ವಸಿಷ್ಠ ಅಪಾನದಿಂದ ಕ್ರತು, ಕಿವಿಗಳಿಂದ ಅತ್ರಿ, ಪ್ರಾಣದಿಂದ ದಕ್ಷ, ತೊಡೆಯಿಂದ ನಾರದ, ನೆರಳಿನಿಂದ ಕರ್ದಮ ಉತ್ಪನ್ನವಾದರು ಮತ್ತು ಸಂಕಲ್ಪದಿಂದ ಸಮಸ್ತ ಸಾಧನೆಗಳ ಸಾಧನೆಯಾದ ಧರ್ಮ ಉದ್ಭವಿಸಿತು. ಬ್ರಹ್ಮ ದೇವರು ದೇಹದ ಅರ್ಧ ಭಾಗ ಸ್ತ್ರೀ ಮತ್ತು ಅರ್ಧ ಭಾಗ ಪುರುಷನಾಗಿ, ಸ್ತ್ರೀ ಗರ್ಭದಿಂದ ಸರ್ವ ಸಾಧನ ಸಮರ್ಥ ಉತ್ತಮ ಜೋಡಿ ಸ್ವಾಯಂಭುವ ಮನುವು ಮತ್ತು ಶತರೂಪಾ ಜನಿಸಿದರು.

ಋತಮದ ಕಡೆ ಪಯನಿಸುವವರು ಋಷಿ. ಋತಮು ಎಂದರೆ ಪರಮ ಸತ್ಯ ಜ್ಞಾನ. ಇಹಪರಗಳಿಗೆ ಸಂಬಂಧಿಸಿದ ಸಂಪೂರ್ಣ ಜ್ಞಾನ ಪಡೆದು, ಪರಮಾತ್ಮನನ್ನು ದರ್ಶಿಸಿದ ದ್ರಷ್ಟರು ಋಷಿ. ಋಷಿ ಯೋಗದ ಶಕ್ತಿಯಿಂದ ದೀರ್ಘಾಯುಷ್ಯವನ್ನು ಹೊಂದಿದವರು.ವೇದ ಜ್ಞಾನ, ಬ್ರಹ್ಮಜ್ಞಾನ ಪಡೆದು ಮಹಾ ತಪಃಶಕ್ತಿ ಉಳ್ಳವರು. ದೇವಲೋಕದಲ್ಲಿ ಪ್ರತಿಷ್ಠೆ ಹೊಂದಿದ ಋಷಿಗಳು ದೇವರ್ಷಿ ಎಂದು ಕರೆಯುವರು. ಋಷಿ ಸ್ಥಾಯಿಯಿಂದ ಉತ್ತಮ ಸಾಧನೆಯಿಂದ ಮಹರ್ಷಿ ಆಗುವರು.ರಾಜರಾಗಿ ಋಷಿತ್ವವನ್ನು ಪಡೆದಾಗ ರಾಜರ್ಷಿ ಎಂದು ಕರೆಯುವರು. ವೇದ ಜ್ಞಾನ, ವೇದ ಮಂತ್ರಗಳು, ಶ್ಲೋಕದ ಅರ್ಥ, ಜನ್ಮ ಕರ್ಮಗಳ ರಹಸ್ಯಗಳನ್ನು ತಿಳಿಸಿ ಮಾನವ ಸಮಾಜಕ್ಕೆ ದಾರಿ ತೋರಿದವರು ಋಷಿಗಳು.ಋಷಿಗಳಲ್ಲಿ ಸಪ್ತ ಋಷಿಗಳಿಗೆ ಪ್ರತಿಷ್ಠ ಸ್ಥಾನವಿದೆ.ಬ್ರಹ್ಮ ದೇವರ ಒಂದು ಹಗಲು ಒಂದು ಕಲ್ಪ, ಒಂದು ಕಲ್ಪದ ಸಮಯದಲ್ಲಿ ಹದಿ ನಾಲ್ಕು ಮನ್ವಂತರಗಳು ಒಂದು ಕಲ್ಪದಲ್ಲಿ ಸಾವಿರ ಚತು ರ್ಯುಗಗಳು. ಒಂದೊಂದು ಮನ್ವಂತರದಲ್ಲೊ ಏಳು ಋಷಿಗಳು ಸಪ್ತರ್ಷಿಗಳ ಪದವಿಯನ್ನು ಅಲಂಕರಿಸುವರು. ಮನ್ವಂತರಗಳು ಸ್ವಾಯಂಭುವ,ಸ್ವಾರೋಚಿಷ, ಉತ್ತಮ, ತಾಮಸ, ರೈವತ, ಚಾಕ್ಷುಷ, ವೈವಸ್ವತ. ಈಗ ನಡೆಯುತ್ತಿರುವ ಕಾಲ ವೈವಸ್ವತ ಮನ್ವಂತರ. ಮುಂಬರುವ ಮನ್ವತಂತರಗಳು ಸಾವರ್ಣಿ, ದಕ್ಷಸಾವರ್ಣೀ, ಬ್ರಹ್ಮಸಾವರ್ಣಿ, ಧರ್ಮ ಸಾವರ್ಣೀ, ರುದ್ರಸಾವರ್ಣಿ ಮತ್ತು ಇಂದ್ರಸಾವರ್ಣೀ. ಆರು ಮನ್ವಂತರುಗಳು ಕಳೆದು ಹೋಗಿ ಏಳನೆಯ ವೈವಸ್ವತ ಮನ್ವಂತರ ನಡೆಯುತ್ತಿದೆ.

ವಿವಸ್ವಂತರ ಪುತ್ರ ಶ್ರಾದ್ಧದೇವ, ಈಗಿನ ಮನು. ಇವರಿಗೆ ಇಕ್ಷ್ವಾಕು , ನಭಗ ಮುಂತಾದ ಹತ್ತು ಮಂದಿ ಮಕ್ಕಳು. ಆದಿತ್ಯ, ವಸು. ವಿಶ್ವೇದೇವರೆಂಬುವರು ದೇವಗಣಗಳು. ಪುರಂದರನೆಂಬುವ ಇಂದ್ರ , ಕಶ್ಯಪ, ಅತ್ರಿ, ವಸಿಷ್ಠ ವಿಶ್ವಾಮಿತ್ರ, ಗೌತಮ, ಜಮದಗ್ನಿ, ಮತ್ತು ಭಾರದ್ವಾಜರೆಂಬುವರು ಸಪ್ತರ್ಷಿಗಳು, ಒಂದೊಂದು ಮನ್ವಂತರದಲ್ಲಿಯೂ ಭಗವಂತ ಕೆಲವು ಅವತಾರ ಎತ್ತಿ ದುಷ್ಟ ಶಿಕ್ಷಣ, ಶಿಷ್ಟ ರಕ್ಷಣ ಮಾಡುತ್ತಾನೆಂಬ ನಂಬಿಕೆಯಿದೆ. ವ್ರತ, ಪೂಜೆ ಮಾಡುವಾಗ ತಿಥಿ, ವಾರ, ವ್ಯಾವಹಾರಿಕ ಸಂವತ್ಸರ ಹೆಸರು, ಋತು, ಮನ್ವಂತರ ಪ್ರವರ ಹೇಳುವುದನ್ನು

ಗಮನಿಸಬಹುದು. ಒಂದೊಂದು ಮನ್ವಂತರಕ್ಕೆ ಏಳು ಋಷಿಗಳು ಇರುವರು. ವೈವಸ್ವತ ಮನ್ವಂತರಕ್ಕೆ ಸಪ್ತ ಋಷಿಗಳು ಕಶ್ಯಪರು, ಅತ್ರಿ, ಭಾರಧ್ವಾಜ, ವಿಶ್ವಾಮಿತ್ರ, ಗೌತಮ, ವಶಿಷ್ಠ ಮತ್ತು ಜಮದಗ್ನಿ. ಪುರಾ ವಿಷಯಾನ್ ನಯತೀತಿ ಪುರಾಣಂ! ಪೂರ್ವ ಸಂಪ್ರದಾಯವಾದ ಧರ್ಮಾದಿ ವಿಷಯಗಳನ್ನು ತಿಳಿಸುವುದು ಪುರಾಣ. ಇತಿಹಾಸ ವೇದ ಧರ್ಮಗಳನ್ನು ತಿಳಿಸಿ ವಿಸ್ತರಿಸುವ ಗ್ರಂಥಗಳು ಪುರಾಣಗಳು.

ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ ।
ವಂಶಾನು ಚರಿತಂಚೇತಿ ಪುರಾಣ ಪಂಚಲಕ್ಷಣಂ ॥

ಆದಿ ಸೃಷ್ಟಿ ಬ್ರಹ್ಮದೇವರಿಂದ ತದನಂತರ ನಡೆದ ಸೃಷ್ಟಿ. ರಾಜ, ಋಷಿ ವಂಶಗಳ ವಿವರ, ಸ್ವಾಯಂಭುವ ಚತುರ್ದಶ ಮನ್ವಂತರಗಳು ಸೇರಿದ ಐದು ಲಕ್ಷಣಗಳನ್ನು ಹೊಂದಿದ ಗ್ರಂಥ ಪುರಾಣ. ವೇದವ್ಯಾಸರು ಅಷ್ಟಾದಶ (ಹದಿನೆಂಟು) ಪುರಾಣಗಳನ್ನು ರಚಿಸಿದ್ದಾರೆ. ವೇದಗಳ ಎಲ್ಲ ಮಂತ್ರಗಳಲ್ಲಿ ಛಂದಸ್ಸು, ಋಷಿ ಮತ್ತು ಉಪಾಸನೆ ಮಾಡುವ ದೇವತೆ ಇರುವರು. ಮಂತ್ರ ವಿನಿಯೋಗ ಮಾಡುವಾಗ ಸ್ಮರಿಸಬೇಕು. ಋಗ್ವೇದದ ಮೊದಲನೆಯ ಶ್ಲೋಕವೇ ಗಾಯತ್ರಿ ಛಂದಸ್ಸಿನಿಂದ ಕೂಡಿದ ಮಂತ್ರ, ಗಾಯತ್ರಿ ಮಂತ್ರಕ್ಕೆ ಛಂದಸ್ಸು-ಗಾಯತ್ರಿ, ಋಷಿ - ವಿಶ್ವಾಮಿತ್ರ ಮತ್ತು ದೇವತೆ-ಸವಿತ. ಇಲ್ಲಿ ಮಂತ್ರ ಜಪಿಸುವಾಗ ವಿಶ್ವಾಮಿತ್ರ ಋಷಿಯನ್ನು ಮಾನವಾಳಿಗೆ ಮಂತ್ರ ಜ್ಞಾನ, ಬೋಧನೆ ಮಾಡಿದಕ್ಕೆ ಕೃತಜ್ಞತಾ ಪೂರ್ವಕ ನೆನೆಯುವುದನ್ನು ಗಮನಿಸಬಹುದು. ಭಾರತೀಯ ಧರ್ಮ ಮಹೋನ್ನತವಾದದ್ದು. ಪರಿಪೂರ್ಣ ಮಾನವೀಯತೆ ಇಂದ ತುಂಬಿ ತುಳುಕುತ್ತದೆ. ಧರ್ಮವನ್ನು ರಕ್ಷಿಸಿದರೆ, ಆ ಧರ್ಮ ನಮ್ಮನ್ನು ರಕ್ಷಿಸುತ್ತದೆ ಎಂಬುವ ವಿಶ್ವಾಸದಿಂದ ನಡೆಯುವ ಭಾರತೀಯ ಸಮಾಜ. ಧರ್ಮವೆಂದರೆ ಧರಿಸಿರುವುದು ಎಂದು ಅರ್ಥ. ಆಚರಣೆ ಮಾಡುವುದು ಆಚಾರ. ಆಚರಣೆಯಲ್ಲಿ ಆತ್ಮಬಲ, ಆಧ್ಯಾತ್ಮಿಕ ಫಲ,ಸಮಯೋಗ ಜೀವನ ಸಾಫಲ್ಯವನ್ನು ಸಾಧಿಸುವ ಸದಾಚಾರವೇ ಧರ್ಮ.

### ಧರ್ಮಪಾಲನೆ ಮತ್ತು ಸದಾಚಾರ:

ಆಚಾರಃ ಪರಮೋ ಧರ್ಮಃ ಆಚಾರಃ ಪರಮಂ ತಪಃ ।
ಆಚಾರಾತ್ ವರ್ಧತೇಹ್ಯಾಯುಃ ಆಚಾರಾ ತಪ ಸಂಕ್ಷಯಃ॥

ಆಚಾರವೇ ಪರಮ ಧರ್ಮ. ಆಚಾರವೇ ಹೆಮ್ಮೆ. ಆಚಾರದಿಂದ ಆಯುಷ್ ವೃದ್ಧಿ ಮತ್ತು ಪಾಪಕ್ಷಯ ಆಗುವುದು, "ಸದಾಚಾರಂ ಧರ್ಮಮೂಲಮ್". ಸದಾಚಾರವೇ ಧರ್ಮಕ್ಕೆ ಮೂಲ ಎನ್ನುವುದು ಪಂಡಿತರ ಹಿತಬೋಧೆ, ಮಾನವ ಜನ್ಮ ದುರ್ಲಭ. ಜೀವಕೋಟಿಯಲ್ಲಿ ಮಾನವರು ಸಮುನ್ನತ, ಸುಕೃತಾ, ಬುದ್ಧಿ, ವಿವೇಕ ಸಂಸ್ಕಾರ ಉಳ್ಳವರು. ಮನುವುನಿಂದ ಮಾನವ ಸಂತತಿ. ಪ್ರಕೃತಿಯಲ್ಲಿ ಸಹಜೀವನ ನಡೆಸುವವರು ಮಾನವರು. ಆಲೋಚನೆ, ಆಚಾರ, ಉಪಚಾರ, ಆನಂದ ಭೂತಿಯನ್ನು ಅನುಭವಿಸಲು, ಹಂಚಿಕೊಳ್ಳಲು ಭಾವನೆ ಉಳ್ಳವರು. ಮನುವುನಿಂದ ಮಾನವ ಸಂತತಿ. ಪ್ರಕೃತಿಯಲ್ಲಿ ಸಹಜೀವ ನಡೆಸುವವರು ಮಾನವರು. ಪ್ರಕೃತಿಯನ್ನು ಆರಾಧಿಸುವರು. ಆಚಾರ ಮೂಲದಿಂದ ಇರುವ ಧರ್ಮವನ್ನು ಅನುಸರಿಸಬೇಕು. ಧರ್ಮದಿಂದ ಸಂಸಾರ ಸಾಗರವನ್ನು ದಾಟಬಹುದು. ಭುವಿಗೆ ಒಂಟಿಯಾಗಿ ಬಂದು ಬದುಕನು ನಡೆಸಿ, ಸಮಾಜದಲ್ಲಿ ಬಾಳಿ, ಸಮೈಕ್ಯ ಜೀವನದ ಅನುಭೂತಿ ಪಡೆದು ಅಂತ್ಯದಲ್ಲಿ ಒಬ್ಬಂಟಿಗನಾಗಿಯೇ ಮರಳಿ ಪರಲೋಕಕ್ಕೆ ತೆರಳುವನು ಆದರೆ ಧರ್ಮ ಜೊತೆಯಾಗಿ ಪರಲೋಕದಲ್ಲೂ ನೆರಳಂತೆ ಇರುವುದು ವಿಶೇಷ. ಭಾರತೀಯ ಧಾರ್ಮಿಕ ವ್ಯವಸ್ಥೆ ತುಂಬ ಬಲೋಪೇತ! ಬ್ರಹ್ಮಚರ್ಯ,ಸಾರಸ್ಯ ವಾನಪ್ರಸ್ಥ, ಸನ್ಯಾಸ ಎಂದು ಚತುರ್ವಿಧ ಆಶ್ರಮ ವಾಸ ಮತ್ತು ಅದರಲ್ಲಿ ಆಚರಿಸುವ ವಿಧಿವಿಧಾನವನ್ನು ಪಾಲಿಸುವ ಸದಾಚಾರ ಸಂಪತ್ತನ್ನು ವಿವರಿಸಿದ್ದಾರೆ. ಗೃಹಸ್ಥ ಆಶ್ರಮದಲ್ಲಿ ತನ್ನ ಧರ್ಮಾಚರಣೆಯಿಂದ ಋಣ ವಿಮುಕ್ತಿ ಕೈವಲ್ಯ ಮುಕ್ತಿಯನ್ನು ಸಾಧಿಸಿಕೊಳ್ಳುವನು. ವೇದ ಪಠಣ ಮಾಡುವುದರಿಂದ ಬ್ರಹ್ಮಯಜ್ಞ ತರ್ಪಣದಿಂದ ಪಿತೃಯಜ್ಞ ಕ್ರತು ಹೋಮಗಳಿಂದ ದೈವಯಜ್ಞ ಬಲಿ ಅನ್ನದಿಂದ ಭೂತಯಜ್ಞ ಅತಿಥಿ ಸತ್ಕಾರದಿಂದ ಮಾನುಷ ಯಜ್ಞ ಈ ರೀತಿಯಾಗಿ ಪಂಚ ಮಹಾಯಜ್ಞಗಳನ್ನು ಮಾಡುವ ಅವಕಾಶ, ಅದೃಷ್ಟ ಮಾನವರು ಪಡೆದಿದ್ದಾರೆ. ಈ ಕ್ರಮದಲ್ಲಿ ತ್ರಿವಿಧ ಋಣಗಳನ್ನು ಸೂಚಿಸಿದ್ದಾರೆ. ಮೂರು ಋಣಗಳು ದೇವಋಣ, ಋಷಿಋಣ, ಪಿತೃಋಣ. ಈ ಮೂರು ಋಣಗಳನ್ನು ವಿಧಿಯಿಂದ ತೀರಿಸಿಕೊಳ್ಳಲು ಸೂಚಿಸಿದ್ದಾರೆ. ಮಾನವ ಜನ್ಮ ಸಫಲವಾಗಲು ಮಾನವ ಕೃತ ಕರ್ಮ ಫಲಿಸಲು ಮಹೋನ್ನತವಾದ ಋಣ ವಿಮುಕ್ತಿಯಿಂದ ಕೈವಲ್ಯ ಮುಕ್ತಿ ಜೀವನ ಪ್ರಾಪ್ತಿ ಆಗುವುದು ಎಂಬುವ ವಿಶ್ವಾಸ.

### ದೇವ ಋಣ:

ಎಲ್ಲ ಜೀವಿಗಳು ಭಗವಂತನಿಗೆ ಋಣಗ್ರಸ್ಥರು. ಹೇಗೆಂದರೆ ಈ ಪ್ರಕೃತಿ. ಜೀವಿಗಳು ಪಂಚಭೂತಗಳಿಂದ ಜೀವಿಸುವುವು. ನೆಲ, ಆಕಾಶ, ನೀರು, ಅಗ್ನಿ ಮತ್ತು ಗಾಳಿ. ಈ ಪಂಚಭೂತಗಳಿಂದಲೇ ಜೀವನ. ಪಂಚಭೂತಗಳಿಗೆ ಅಧಿಪತಿ ಪರಮಾತ್ಮ. ಪರಮಾತ್ಮ ವಿಶ್ವ ಯಶಸ್ಸಿಗೆ, ಜೀವನಕ್ಕೆ ಒದಗಿದ ಅನುಕೂಲದ ಮೂಲಾಧಾರ ಪ್ರಕೃತಿ. ಒದಗಿಸಿದ ಪ್ರಕೃತಿ ಮತ್ತು

ಜೀವನ ಭಗವಂತನ ಸೃಷ್ಟಿ. ಹೀಗಾಗಿ ಆತ್ಮಾರ್ಪಣೆ ಮಾಡಿಕೊಳ್ಳಬೇಕು. ಆದರೆ ಸಂಸಾರದಲ್ಲಿ ಕುಟುಂಬ ಬಂಧನ ಮಾನವನ ಮನಸ್ಸನ್ನು ಅನುದಿನ ತನ್ನ ಕರ್ಮಗಳಲ್ಲಿ ಮುಳುಗಿಸಿ ಕಾಲಚಕ್ರದಲ್ಲಿ ಸಮಯವೆಲ್ಲ ಕಳೆದು ಹೋಗುವುದು. ಮನಸ್ಸನ್ನು ಬಿಗಿ ಹಿಡಿದು ಪ್ರಕೃತಿಯಲ್ಲಿ ಪರಮಾತ್ಮನನ್ನು ದರುಶನ ಮಾಡಬೇಕು. ಭಗವಂತನ ಆರಾಧನೆ, ಅರ್ಚನೆ, ಹೋಮಗಳಿಂದ ದೈವಋಣ ತೀರಿಸಿಕೊಳ್ಳಬೇಕು.

**ಋಷಿಋಣ:**

ಋಷಿಪುಂಗವರನ್ನು ಪೂಜಿಸುವುದರಿಂದ ಋಷಿ ಋಣ ತೀರುವುದು. ಆತ್ಮ ಜ್ಞಾನಿಗಳು, ಬ್ರಹ್ಮಜ್ಞಾನಿಗಳು. ವೇದ ವೇದಾಂತ ಶಾಸ್ತ್ರ, ರಹಸ್ಯಗಳನ್ನು ಶೋಧನೆ ಮಾಡಿ ಸಾಧನೆ ಮಾಡಿದವರು ಋಷಿಗಳು. ತಪೋನಿಧಿ, ಮಂತ್ರ ಶಕ್ತಿ ಸಮನ್ವಿತರು ಋಷಿಗಳು! ಎಷ್ಟೋ ರಚನೆಗಳನ್ನು, ಭಾಷ್ಯಗಳನ್ನು ಮಾಡಿದ್ದಾರೆ. ವಿಶ್ವಕಲ್ಯಾಣವೇ ತಮ್ಮ ಪರಮ ಕರ್ತವ್ಯವಾಗಿ ಭಾವಿಸಿ ಜಪ, ತಪ, ಸತ್ಕರ್ಮ, ಹೋಮ ಎಲ್ಲವೂ ಮಾಡುವರು. ಧರ್ಮವನ್ನು, ದೈವತ್ವವನ್ನು, ಆತ್ಮ ನಿತ್ಯತತ್ವ, ಸತ್ಯಶೀಲತೆಗಳನ್ನೂ ಸಾಹಿತ್ಯದ ರೂಪದಲ್ಲಿ ಸಮಾಜಕ್ಕೆ ಕೊಡುಗೆ ಕೊಟ್ಟಿರುವವರು ಋಷಿಗಳು. ಅಂತಹ ಮೂಲ ಪುರುಷರು ಗುರುಗಳಾಗಿ ಭಾವಿಸಿ ಮಾನವರು ತಮ್ಮ ಗೋತ್ರ ರೂಪದಲ್ಲಿ ನೆನೆಯುತ್ತಲೇ ಇದ್ದಾರೆ. ಇಂತಹ ಮಹರ್ಷಿಯರನ್ನು ಪೂಜಿಸಿ, ಸ್ಮರಿಸಿ ಋಣ ವಿಮುಕ್ತರಾಗುವ ಮಾರ್ಗ ಋಷಿ ಪಂಚಮಿ ಪೂಜೆ, ಭಾದ್ರಪದ ಶುದ್ಧ ಪಂಚಮಿ ದಿನ. ಋಷಿ ಪಂಚಮಿ ಎನ್ನುವ ಪರ್ವದಿನ 'ವೇದಗಳು ಅಪೌರುಷೇಯ, ಅಂದರೆ ಮಾನವರು ರಚಿಸಿದ್ದಲ್ಲ. ಚತುರ್ಮುಖ ಬ್ರಹ್ಮದೇವ ರಿಂದ ಪ್ರಕಟವಾದ ವೇದಮಂತ್ರರಾಶಿಯನ್ನು ದರ್ಶಿಸಿದ ವ್ಯಾಸಮಹರ್ಷಿ ನಾಲ್ಕು ವೇದಗಳಾಗಿ ವಿಭಜನೆ ಮಾಡಿದರು. ಆದರೆ ದ್ರಷ್ಟರಾದ ಮಹರ್ಷಿಗಳು ವೇದಗಳನ್ನು ಗ್ರಹಿಸಿ, ಅವಗಾಹನೆ ಮಾಡಿಕೊಂಡು ವ್ಯಾಖ್ಯಾನ ಭಾಷ್ಯ, ಪ್ರಸಂಗ ಪಾಠಗಳ ಮೂಲಕ ಸಮಾಜಕ್ಕೆ ವಿದ್ಯೆ, ಜ್ಞಾನವನ್ನು ಕೊಟ್ಟಿದ್ದಾರೆ. ಮಾನವ ಧರ್ಮ ವೇದ ಮೂಲವಾಗಿ ವಿಕಸಿತವಾಗಿದೆ. ನಮ್ಮ ಸಂಸ್ಕೃತಿ ವೈದಿಕ ಸಂಸ್ಕೃತಿ, ಆಚಾರ, ಜೀವನ ವಿಧಾನ ವೈದಿಕಾಚಾರವಾಗಿದೆ. ಇಂತಹ ಜ್ಞಾನವನ್ನು ಕೊಟ್ಟ ಋಷಿಗಳಿಗೆ ನಾವೆಲ್ಲಾ ಚಿರಋಣಿ. ಆರಾಧನೆ, ಪೂಜೆ, ಸ್ಮರಣೆ ಮಾಡಿ ಋಣ ವಿಮುಕ್ತರಾಗಬೇಕು. ಇದೇ ಋಷಿ ಪಂಚಮಿ ಪರ್ವ ದಿನದ ಆಚರಣೆ.

**ಪಿತೃ ಋಣ :**

ಜನ್ಮಕೊಟ್ಟ ತಂದೆ ತಾಯಿ ದೈವ ಸಮಾನ. ಮಾತೃ ದೇವೋ ಭವ। ಪಿತೃದೇವೋಭವ। ಎಂದು ತಂದೆ ತಾಯಿಯರನ್ನು ದೈವ ಸಮಾನವಾಗಿ ನೋಡಲು ಬೋಧನೆ ಮಾಡಿರುವುದು ತೈತ್ತೀರೋಪನಿಷತ್‌ನಲ್ಲಿ. ಜನ್ಮ ಕೊಟ್ಟು ವಿದ್ಯಾ ಬುದ್ಧಿ ಕಲಿಸಿದ ತಂದೆ ತಾಯಿಯ ಋಣ ತೀರಿಸಬೇಕು. ತಂದೆ ತಾಯಿಯ ಪೋಷಣೆ, ಸೇವೆ, ಗೌರವ, ವೃದ್ಧಾಪ್ಯದಲ್ಲಿ ಸೇವೆ, ಮರಣಾನಂತರ ವಿಧಿಯಿಂದ ಶ್ರಾದ್ಧ, ಕರ್ಮ, ತರ್ಪಣ ಕಾರ್ಯಗಳನ್ನು ನಿರ್ವಹಿಸಿ, ಪಿತೃ ಋಣವನ್ನು ತೀರಿಸಬೇಕು.

**ಸಪ್ತ ಋಷಿಗಳ ಪರಿಚಯ :**

ವೈದಿಕ ಕ್ಷೇತ್ರದಲ್ಲಿನ ಏಳು ಪ್ರಮುಖ ಮಹರ್ಷಿಗಳನ್ನು ಅಥವಾ ಋಷಿಗಳನ್ನು ಸಪ್ತ ಋಷಿಗಳು ಎನ್ನಲಾಗುತ್ತದೆ.

ಕಶ್ಯಪ ಅತ್ರಿ ಭರದ್ವಾಜ ವಿಶ್ವಾಮಿತ್ರೋಥ ಗೌತಮ ಃ।
ವಶಿಷ್ಠೋ ಜಮದಗ್ನಿಶ್ಚ ಸಪ್ತಯಿತೇ ಋಷಯಃ ಸ್ಮೃತಾಃ॥

ಸಪ್ತ ಋಷಿಗಳು ಕಶ್ಯಪ, ಅತ್ರಿ, ಭರದ್ವಾಜ, ವಿಶ್ವಾಮಿತ್ರ, ಗೌತಮ, ವಶಿಷ್ಠ, ಮತ್ತು ಜಮದಗ್ನಿ. ಭಾರತೀಯ ಪುರಾಣಗಳ ವಿವರಣೆಯಲ್ಲಿ ವಂಶಕ್ಕೆ ಒಬ್ಬ ಋಷಿ ಮೂಲಪುರುಷರಾಗಿ ಇರುವರು. ಪ್ರಾಚೀನ ಋಷಿಗಳ ವಂಶಾನುಕ್ರಮವೇ ಇಂದಿನ ಭಾರತೀಯ ಸಂತತಿ. ಭಗವದ್ಗೀತೆ ಶ್ಲೋಕದಲ್ಲಿ ಶ್ರೀ ಕೃಷ್ಣ ಪರಮಾತ್ಮ ನುಡಿದಂತೆ :

ಮಹರ್ಷಯಃ ಸಪ್ತ ಪೂರ್ವೇ ಚತ್ವಾರೋ ಮನವಸ್ತಥಾ।
ಮದ್ಭಾವಾ ಮಾನಸಾ ಜಾತಾ ಯೇಷಾಂ ಲೋಕ ಇಮಾಃ ಪ್ರಜಾ ॥

ಮೊದಲ ಮನ್ವಂತರದ ಏಳು ಮಂದಿ ಮಹರ್ಷಿಗಳು, ಮೊದಲು ನಾಲ್ವರು ಮನುಗಳು ಸ್ವಾಯಂಭುವ, ಸ್ವಾರೋಚಿಷ, ಉತ್ತಮ ಮತ್ತು ರೈವತ, ಚತುರ್ಮುಖನ ಮಾನಸ ಪುತ್ರರು. ವಿಶ್ವದ ಜನರು ಅವರ ಸಂತತಿ. ಅರಣ್ಯವಾಸದಲ್ಲಿ ಸೀತಾರಾಮ ಚಂದ್ರರಿಗೆ ಅಭಯ ಕೊಟ್ಟರು ಅತ್ರಿ ಮಹರ್ಷಿ. ಚಿತ್ರಕೂಟಕ್ಕೆ ದಾರಿ ತೋರಿರುವರು ಭಾರದ್ವಾಜ ಮಹರ್ಷಿ, ರಾಮಚಂದ್ರ ಮೂರ್ತಿ ಗುರು ವಿಶ್ವಾಮಿತ್ರ ಮಹರ್ಷಿ. ಸಪ್ತ ಋಷಿಗಳಲ್ಲಿ ವಿಶ್ವಾಮಿತ್ರ ಮುನಿಯು ಅತ್ಯಂತ ಪ್ರಸಿದ್ಧ ಋಷಿಯಾಗಿದ್ದರು. ಗಾಯತ್ರಿ ಮಂತ್ರವನ್ನು ಕಂಡು ಹಿಡಿದ ವೇದಗಳ ಕಾಲದ ಪ್ರಮುಖ ಋಷಿ ಮುನಿಗಳಲ್ಲಿ ವಿಶ್ವಾಮಿತ್ರರು ಒಬ್ಬರಾಗಿದ್ದಾರೆ. ಕುಲಗುರು ವಸಿಷ್ಠರು. ವಿಷ್ಣು ಅವತಾರವಾದ ಪರಶುರಾಮನ ತಂದೆ ಜಮದಗ್ನಿ ಮಹರ್ಷಿ. ಶ್ರೀ ಹರಿಯ ವಾಮನ ಅವತಾರದಲ್ಲಿ ತಂದೆ ಕಶ್ಯಪ

ಮಹರ್ಷಿ. ಸಪ್ತರ್ಷಿಗಳು ಮಹತ್ವ ಮತ್ತು ಅವರ ಮಹಿಮೆ ಪುರಾಣಗಳಲ್ಲಿ ಬಲು ಸಂದರ್ಭದಲ್ಲಿ ಕಾಣಬಹುದು.

**ತಿರುಮಲೆ ಕ್ಷೇತ್ರ:**

ಶ್ರೀನಿವಾಸದೇವರು ಹುತ್ತದಲ್ಲಿ ತಪಸ್ಸು ಮಾಡುತ್ತ ಇದ್ದಾಗ, ಶಿವ ಬ್ರಹ್ಮ ದೇವರು ಹಸು, ಕರು ರೂಪದಲ್ಲಿ ಬಂದು ಹುತ್ತದಲ್ಲಿ ಹಾಲು ಸುರಿಸಿ ಶ್ರೀ ಹರಿಯ ಹಸಿವು ಬಾಯಾರಿಕೆ ತೀರಿಸುತ್ತಿದ್ದರು. ಹಸು ಕಾಯುತ್ತಾ ಗೊಲ್ಲನೊಬ್ಬ ಹಸುವನ್ನು ಹೊಡೆಯಲು ಹೋದಾಗ ಗೋಪಾಲ ಆಗ್ರಹಗೊಂಡು ಹುತ್ತದಿಂದ ಹೊರಬಂದರು.ಕೊಡ್ಲಿ ತಲೆಗೆ ತಾಕಿ ಶ್ರೀನಿವಾಸ ದೇವರಿಗೆ ಪೆಟ್ಟು ಆಯಿತು. ಅಲ್ಲಿ ಕೂದಲು ಚೆದರಿ ಗಾಯ ವಾಯಿತು. ತಲೆಗೆ ಗಾಯವಾದಾಗ ಕೂದಲು ಚೆದರಿ ಶ್ರೀನಿವಾಸ ದೇವರಿಗೆ ಸೌಂದರ್ಯ ಕಡಿಮೆ ಆಗಬಾರದೆಂದು ಕೂದಲನ್ನೇ ಕತ್ತರಿಸಿ ಶ್ರೀನಿವಾಸನಿಗೆ ಜೋಡಿಸುತ್ತಾರೆ ನೀಲಾ ದೇವಿ. ತಿರುಮಲೆ ಸಪ್ತಗಿರಿಗಳಲ್ಲಿ ನೀಲಾದ್ರಿ ಒಂದು ಬೆಟ್ಟ. ನೀಲಾದ್ರಿಯಲ್ಲಿ ನಿವಾಸವಿರುವವರು ನೀಲಾದೇವಿ.ಆಗ ಶ್ರೀನಿ ವಾಸ ನೀಲಾದೇವಿಗೆ ಒಂದು ವರ ನೀಡುತ್ತಾರೆ. ಕಲಿಯುಗದಲ್ಲಿ ಭಕ್ತರು, ನನ್ನ ಕ್ಷೇತ್ರಕ್ಕೆ ಬಂದು ಕೊಡುವ ತಲೆ ಕೂದಲ ಮುಡಿ, ನಿನ್ನ ಮೂಲಕವೇ ನನಗೆ ಅರ್ಪಣೆಯಾಗಲಿ ಎಂದು. ಮೊದ ಲನೆಯ ಸೇವೆ ಸಪ್ತ ಋಷಿಗಳಿಗೆ ದೊರೆಯಿತು. ಈಗಲೂ, ಭಕ್ತರು ಕೊಡುವ ತಲೆಮುಡಿ, ನೀಲಾದೇವಿಯ ಮೂಲಕವೇ ಪರಮಾತ್ಮನಿಗೆ ಸಮರ್ಪಣೆ ಆಗುತ್ತದೆ ಎಂಬುದು ಪುರಾಣ ಕಥನ.

**ಮತ್ಸ್ಯಾವತಾರ:**

ಶ್ರೀ ಹರಿಯ ಅವತಾರಗಳಲ್ಲಿ ಮೊದಲನೆಯದು ಮತ್ಸ್ಯಾ ವತಾರ. ಚಾಕ್ಷುಷ ಮನ್ವಂತರದ ನಂತರ ಜಲ ಪ್ರಳಯ ಬಂದಾಗ ವಿಷ್ಣು ಭಕ್ತರನ್ನು, ಸಪ್ತರಿಷಿಗಳನ್ನು ಮತ್ತು ರಾಜ್ಯ ಆಳುತ್ತಿದ್ದ ಶ್ರೀ ಹರಿಯ ಪರಮ ಭಕ್ತರಾದ ಸತ್ಯವ್ರತ ಮಹಾ ರಾಜರನ್ನು ರಕ್ಷಿಸಿದರು. ವೇದಗಳನ್ನು ಅಪಹರಿಸಿದ ಅಸುರ ನನ್ನು ಸಂಹರಿಸಿ ವೇದಗಳನ್ನು ಬ್ರಹ್ಮದೇವರಿಗೆ ಕೊಟ್ಟರು ಶ್ರೀ ಹರಿ.

**ಸಪ್ತರ್ಷಿಗಳ ದರುಶನ:**

ಕಣ್ಣಿಗೆ ಕಾಣುವ ದೇವರು ತಂದೆ ತಾಯಿ, ಸೂರ್ಯ ದೇವರು ಮತ್ತು ಸಪ್ತರ್ಷಿಯರು, ಗಗನದಲ್ಲಿ ನಕ್ಷತ್ರ ರೂಪವಾಗಿ ಉತ್ತರ ದಿಕ್ಕಲ್ಲಿ ಅನುದಿನ ದರುಶನ ಕೊಡುವರು. ಗಗನದಲ್ಲಿ ಪ್ರಶ್ನಾರ್ಥಕ ಚಿನ್ಹೆಯಾಗಿ ಕಾಣಿಸುತ್ತಾ ಸಪ್ತರ್ಷಿಗಳು ನಕ್ಷತ್ರ ರೂಪದಲ್ಲಿ ಇರುವರು. ದಂಪತಿಗಳು ಸಂಧ್ಯಾಕಾಲದಲ್ಲಿ ಸಪ್ತ ರ್ಷಿಗಳನ್ನು, ಅರುಂಧುತಿ ವಸಿಷ್ಠರನ್ನು ನಮಸ್ಕಾರ ಮಾಡ ಬೇಕು.

ಶಾಸ್ತ್ರೋಕ್ತವಾಗಿ ಮದುವೆ ನಡೆಯುವಾಗ ಪುರೋ ಹಿತರು ದಂಪತಿಗಳಿಗೆ ಅರುಂಧತಿ ನಕ್ಷತ್ರವನ್ನು ತೋರಿಸಿ ನಮಸ್ಕಾರ ಮಾಡಿಸಿ ಆಶೀರ್ವಾದ ಪಡೆಯುವರು.

**ಋಷಿ ಪಂಚಮಿ ಆಚರಣೆ :**

ಭಾದ್ರಪದ ಶುದ್ಧ ಪಂಚಮಿ ದಿನ ಋಷಿ ಪಂಚಮಿ ಎನ್ನುವ ಪರ್ವದಿನ. ಭವಿಷ್ಯೋತ್ತರ ಪುರಾಣದಲ್ಲಿ ಋಷಿ ಪಂಚಮಿ ವ್ರತದ ಪ್ರಾಶಸ್ತ್ಯವನ್ನು ವರ್ಣಿಸಲಾಗಿದೆ. ಋಷಿ ಪಂಚಮಿ ಋಷಿಗಳಿಗೆ ನಮನ, ಋಷಿ ಋಣ ತೀರಿಸಿಕೊಳ್ಳುವು ದಲ್ಲದೆ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಅವಕಾಶ. ಪಂಚಮಿಯ ದಿನ ಸೂರ್ಯೋದಯದ ನಂತರ ಅಭ್ಯಂಗನ ಸ್ನಾನ ಮಾಡಿ, ದೇವರ ಮನೆ ಸ್ವಚ್ಛ ಮಾಡಿಕೊಂಡು ಗಣಪತಿಯ ಪೂಜೆ ಯಿಂದ ಆರಂಭ ಮಾಡಬೇಕು. ದೀಪದಲ್ಲಿ ನಾಲ್ಕು ಬತ್ತಿ ಇಟ್ಟು ದೀಪಾರಾಧನೆ ಮಾಡಬೇಕು. ಸಪ್ತ ಋಷಿಯರನ್ನು ಆವಾಹನ ಮಾಡಿ ಸಿಂಹಾಸನ ತೋರಿಸಿ ನಮಸ್ಕರಿಸಬೇಕು.

ಓಂ ಅದಿತಿ ಸಹಿತ ಕಶ್ಯಪಾಯನಮಃ, ಅನಸೂಯ ಸಹಿತ ಅತ್ರಯೇನಮಃ, ಸುಶೀಲ ಸಹಿತ ಭಾರದ್ವಾಜಯನಮಃ, ಕುಮುದ್ವತೀ ಸಹಿತ ವಿಶ್ವಾಮಿತ್ರಾಯ ನಮಃ ನಮಃ, ಅಹಲ್ಯ ಸಹಿತ ಗೌತಮಾಯ ನಮಃ, ರೇಣುಕಾ ಸಹಿತ ಜಮದಗ್ನಿಯೇ ನಮಃ, ಅರುಂಧತೀ ಸಹಿತ ವಸಿಷ್ಠಾಯ ನಮಃ, ಓಂ ಸಪ್ತಋಷಿಭ್ಯೋನಮಃ। ಎಂದು ನಮಸ್ಕರಿಸಿ ಋಷಿ ಪೂಜನಂ ಕರಿಷ್ಯೆ ಎಂದು ಸಂಕಲ್ಪ ಮಾಡಿಕೊಂಡು ಪೂಜೆ ಆರಂಭ ಮಾಡಬೇಕು. ವ್ರತ ಕಥೆಯನ್ನು ಕೇಳಬೇಕು. ಆಕಾಶದಲ್ಲಿ ಸಪ್ತರ್ಷಿಗಳ ಸ್ಥಾನದ ಕಡೆ ತಿರುಗಿ ನಮಸ್ಕಾರ ಮಾಡಿಕೊಳ್ಳ ಬೇಕು. ಬ್ರಾಹ್ಮಣರನ್ನು ಮನೆಗೆ ಕರೆದು ಊಟ ಉಪಚಾರ ಮಾಡಿ ದಕ್ಷಿಣೆ ತಾಂಬೂಲ ಸಮರ್ಪಿಸಿ ಆಶೀರ್ವಾದ ಪಡೆಯ ಬೇಕು. ಭೋಜನದಲ್ಲಿ ಮೊಸರು, ಸೊಪ್ಪು ಮತ್ತು ಬೇಯಿಸಿದ ಕಡಲೆಕಾಳಿನ ಭಕ್ಷ್ಯ ಬಳಸಬೇಕು. ಒಂದೇ ಹೊತ್ತು ಭೋಜನ ಮಾಡಬೇಕು.ಮಾನವ ಜೀವನ ವಿಧಾನ ಆಚಾರ, ದಿಶೆ ನಿರ್ದೇ ಶಿಸಿದ ಮಹರ್ಷಿಗಳನ್ನು ಸ್ಮರಿಸುವುದು ಕನಿಷ್ಠ ಬಾಧ್ಯತೆ. ತಂದೆ ತಾಯಿ,ಗುರು, ದೈವ ಹೀಗೆ ತತ್ವ ಮಾರ್ಗದಲ್ಲಿ ಪಯಣಿಸುವು ದಕ್ಕೆ, ಹಿರಿಯರನ್ನು ಪೂಜಿಸಲು ತೋರಿದ ದಾರಿ ಈ ಮಹರ್ಷಿ ಗಳಿಂದಲೇ ಹೀಗಾಗಿ ಋಣತ್ರಯವನ್ನು ನಿಸ್ಸೇಷ ಮಾಡಿ ಕೊಂಡು, ಮಹರ್ಷಿಗಳನ್ನು ಪೂಜಿಸಿ ಪುನೀತರಾಗೋಣ.

...ಸರ್ವೇ ಜನಾಃ ಸುಖಿನೋ ಭವಂತು..



# ಕರ್ತಾರರನುಗುಣವಾಗಿ ಕರ್ಮಗಳು

ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
9821914642
ಅನುವಾದ : ಡಿ.ಎಸ್.ಭೂಮಿಕ

ಯಾವುದೇ ಕೆಲಸವು ಯಶಸ್ವಿಯಾಗಲೀ ಇಲ್ಲವೇ ಅಯಶಸ್ವಿಯಾಗಲೀ ಜಯಾಪಜಯಗಳಲ್ಲಿ ಕೊನೆಗೊಳ್ಳಲೀ ಆಗ ಕೇಳುವ ಮೊಟ್ಟ ಮೊದಲ ಪ್ರಶ್ನೆ 'ಕರ್ತೃ' ಯಾರೆಂಬುದು? ಇದು ಎಲ್ಲರಿಗೂ ತಿಳಿದಿರುವ ವಿಷಯವೇ ಎಂತಹ ಕ್ಲಿಷ್ಟಕರವಾದ ಕೆಲಸವಾದರೂ ಸರಿಯೇ ಕೆಲವು ಮಂದಿ ನಡುಗಟ್ಟಿ ಪೂರ್ತಿಗೊಳಿಸಲು ನಿಂತರೇ ಸಾಕು ಕಾರ್ಯವು ಸಲೀಸಾಗಿ ಮುಗಿದು ಬಿಡುತ್ತದೆ. ಇನ್ನು ಹಲವು ಮಂದಿ ಸಮಸ್ಯೆಗಳನ್ನುಂಟು ಮಾಡುವಂಥವರು ಕೈಯಿಟ್ಟರೆ ಸಾಕು ಇಡೀ ಕೆಲಸವು ಸರ್ವನಾಶವಾಗಿ ಬಿಡುತ್ತದೆ. ಆದ್ದರಿಂದ ಕಾರ್ಯ ಸಫಲವಾಗುವಲ್ಲಿ ಕತೃವಿನದೇ ಪ್ರಮುಖ ಪಾತ್ರವಾಗಿರುತ್ತದೆ.ಈ ವಿಷಯವನ್ನು ತಿಳಿದವರು ಕರ್ತೃವಿನ ವಿಷಯದಲ್ಲಿ ಬಹಳ ಮುಂಜಾಗರೂಕರಾಗಿರುತ್ತಾರೆ. ಯಾರಿಗೆ ಯಾವ ಕೆಲಸವನ್ನು ಒಪ್ಪಿಸಬೇಕೆಂಬ ಅರಿವಿದ್ದಲ್ಲಿ ಕಾರ್ಯಸಾಧನೆಯಲ್ಲಿ ಸಂಶಯವೇ ಇರುವು ದಿಲ್ಲ. ಆದರೆ ಬಂಧು ಪ್ರೀತಿಯಿಂದಲೋ, ಪಕ್ಷಪಾತದಿಂದಲೋ ಇನ್ನಾವುದೋ ಕಾರಣದಿಂದಲೋ ಆಯೋಗ್ಯನಿಗೆ ಕೆಲಸದ ಜವಾಬ್ದಾರಿಯನ್ನು ಕೊಡುವುದರಿಂದ ಆ ಕೆಲಸವು ವಿಫಲವಾದಂತೆಯೇ ಸರಿ.ಇನ್ನು ಈ ಕಾರ್ಯಗಳ ವಿಷಯಕ್ಕೆ ಬಂದರೆ ನಮ್ಮ ಕೆಲಸಗಳನ್ನು ನಾವೇ ಮಾಡಿಕೊಳ್ಳಬೇಕೇ ವಿನಃ ಬೇರೆಯೊಬ್ಬರು ಮಾಡಿಕೊಡುವ ಪ್ರಮೇಯವಿರಲಾರದು. ನಮ್ಮ ನಮ್ಮ ಕೆಲಸಗಳನ್ನು ನಾವು ಮಾಡಿಕೊಳ್ಳುವುದೇ ಬಳಿತು. ಹಲವರ ವಿಷಯದಲ್ಲಿ ಯಾವ ಕೆಲಸಕ್ಕೆ ಕೈ ಹಾಕಿದರೂ ಅದು ವಿಫಲವಾಗುವುದೋ ಅಥವಾ ಸ್ವಲ್ಪವೇ ಜಯ ಸಿಗುವುದು ಜರಗುತ್ತಿರುತ್ತದೆ.ಹಾಗಾದರೆ ಅಂಥವರೇನು ಮಾಡಬೇಕು? ಭಗವದ್ಗೀತೆಯಿಂದ ಅದಕ್ಕೊಂದು ಪರಿಹಾರ ಪಡೆಯುವುದೊಂದೇ ಮಾರ್ಗ.

ಮನುಷ್ಯ ಯಾವ ಪರಿಸ್ಥಿತಿಯಲ್ಲಿ ತನ್ನ ಸಮಸ್ಯೆಯನ್ನು ಸೃಷ್ಟಿಸಿಕೊಂಡಿದ್ದಾನೋ ಅದೇ ಪರಿಸ್ಥಿತಿಯಲ್ಲಿ ತನ್ನ ಸಮಸ್ಯೆಯ ಪರಿಹಾರವನ್ನು ಪಡೆಯಲಾರ.ಒಂದು ವೇಳೆ, ಸರ್ವದಾ ಮನುಷ್ಯ ತನ್ನ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದರಲ್ಲಿ ವಿಫಲನಾಗುತ್ತಲೇ ಇದ್ದರೆ ಮನುಷ್ಯನು ತನ್ನ ವಿಧಿ - ವಿಧಾನವನ್ನು ಬದಲಿಸಿಕೊಳ್ಳುವುದು ಬಳಿತು. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನಿರಂತರ ಸೋಲನ್ನನುಭವಿಸುವ ಯುವಕ ತಾನು ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಕೆಯಲ್ಲಿ ಮಾರ್ಪಾಡುಗಳನ್ನು ತಂದು ಕೊಳ್ಳಲೇಬೇಕು.ತನ್ನ ಕಾರ್ಯ ಕೆಲಸಗಳಲ್ಲಿ ವಿಜಯವನ್ನು ಸಾಧಿಸಬೇಕೆಂದರೆ ಅದರ ಕರ್ತೃವು ಯಾವ ರೀತಿ ಇರಬೇಕೆಂಬುದನ್ನು ಭಗವದ್ಗೀತೆ ತಿಳಿಸಿಕೊಡುತ್ತದೆ. ಕರ್ತೃವು ಮೊಟ್ಟಮೊದಲನೇಯದಾಗಿರಬೇಕಾದುದು ಉತ್ಸಾಹದಿಂದಿರುವುದು.ಅಹಂಕಾರಕ್ಕಾಗಲೀ ಯಾವುದೇ ಗರ್ವಕ್ಕಾಗಲೀ ಆತನು ಬಲಿಯಾಗಬಾರದು. ಆತನು ತಾನು ಪಡುತ್ತಿರುವ ಕಷ್ಟಗಳ ಬಗೆಯೆಂದೂ ಚಿಂತಿಸಬಾರದು. ಮೇಲಾಗಿ ಎಂತಹ ಕಷ್ಟ ಬಂದರೂ ಎದೆಗುಂದದೇ ಪರಮೋತ್ಸಾಹದಿಂದ ಇರಬೇಕಾದುದು.

ಆತನನ್ನು ಜಯಾಪಜಯಗಳು ಬಾಧಿಸಲಾರವು ಸುಖದುಃಖಗಳೆರಡರಲ್ಲೂ ಆತನು ಸಮಾನವಾಗಿರುತ್ತಾನೆ. ಅಂದರೆ ಅಂತಹ ದೃಢನಿಶ್ಚಯವನ್ನೀತ ಹೊಂದಿರುತ್ತಾನೆ. ಉತ್ಸಾಹಗಳಿಂದಿದ್ದು ಜಯಾಪಜಯಗಳಿಗೆ ವಿಚಲಿತನಾಗದೇ ತನ್ನ ಕರ್ತವ್ಯದಲ್ಲೇ ನಿರತನಾಗಿರುತ್ತಾನೆ. ಅಂತಹವನನ್ನೇ 'ಸಾತ್ವಿಕ ಕರ್ತೃ' ಎಂದು ಕರೆಯುತ್ತಾರೆ.

ಇನ್ನು ಸಾಮಾನ್ಯರಾಗಿರುವ ಕರ್ತೃಗಳ ಪ್ರವೃತ್ತಿ ಬೇರೆಯದೇ ಆಗಿರುತ್ತದೆ. ಅವರು ತಾವು ಮಾಡುವ ಕರ್ಮಗಳ ಫಲಗಳ ಮೇಲೆ ಅದೆಷ್ಟೋ ಆಸೆಗಳನ್ನಿಟ್ಟುಕೊಂಡಿರುತ್ತಾರೆ. ತಾವೇನಾದರೂ ಕರ್ತವ್ಯವನ್ನು ಮಾಡದ್ದರೆ ಮಹಾ ದುಃಖಕ್ಕೆ ಗುರಿಯಾಗುತ್ತೇವೆಂದೂ ಮತ್ತಾರೋ ಅದನ್ನು ಮಾಡಿದರೆ ಅವರ ಕುರಿತು ಅಸೂಯೆ ಪಡುತ್ತಾ,ತಮಗೇ ವಿಜಯವು ದಕ್ಕಬೇಕೆಂದೂ ಸದಾಕಾಲ ಇತರರ ಬಗ್ಗೆ ಗೊಣಗುತ್ತಾ ಅಂತರಂಗ ಬಹಿರಂಗವಾಗಿ ಆಶಿಸುತ್ತಾ ಇರುವವರು 'ರಾಜಸ ಕರ್ತೃಗಳೆಂದು ಕರೆಯಲ್ಪಡುತ್ತಾರೆ. ಪ್ರಪಂಚದಲ್ಲಿ ಇಂತಹವರೇ ಅತ್ಯಧಿಕವಾಗಿ ಕಂಡು ಬರುತ್ತಾರೆ. ಇವರು ಇತರರ ಬಗೆಗೆ ಅಸೂಯೆಯನ್ನು ಹೊಂದುತ್ತಾರೆ. ಇತರರ ಗೆಲುವನ್ನು ಇವರಿಂದ ಸಹಿಸಲಾಗು

ವುದಿಲ್ಲ.ಇವರು ತಮ್ಮ ನೀತಿ - ರೀತಿ ತಮಗೆ ಶ್ರೇಯಸ್ಸನ್ನು ತಂದುಕೊಂಡುತ್ತಿರುವುದೇ ಎಂದು ಸಹಾ ಆಲೋಚಿಸುವುದಿಲ್ಲ. ವಿಜಯ ಸಾಧನೆಗಾಗಿ ಇವರು ಎಂತಹ ತಪ್ಪನ್ನಾದರೂ ಮಾಡಲು ಮುಂದಾಗುತ್ತಾರೆ. ಇಂತಹ ಪ್ರವೃತ್ತಿಯಿರುವವರು ತಮ್ಮ ನಡುವಳಿಕೆಯನ್ನು ಬದಿಗಿರಿಸಿ 'ಸ್ವಾತಿಕ ಕರ್ತೃ' ವಾಗಿ ಮಾರ್ಪಾಡಾಗುವ ಯತ್ನವನ್ನು ಮಾಡಬೇಕು.ಮುಖ್ಯವಾಗಿ ನಮ್ಮ ಯುವಕರು ತಮ್ಮ ಏಕೈಕ ಕಾರ್ಯ ಸಾಧನೆಯಾದ ವಿದ್ಯಾಭ್ಯಾಸದಲ್ಲಿ ಸಾತ್ವಿಕ ಕರ್ತೃವಾಗಿ ಮಾರ್ಪಾಡಾಗುವ ಯತ್ನವನ್ನು ಮಾಡಬೇಕು. ಮುಖ್ಯವಾಗಿ ನಮ್ಮ ಯುವಕರು ತಮ್ಮ ಏಕೈಕ ಕಾರ್ಯ ಸಾಧನೆಯಾದ ವಿದ್ಯಾಭ್ಯಾಸದಲ್ಲಿ ಸಾತ್ವಿಕ ಕರ್ತೃಗಳಾಗಿ ಪರಮೋತ್ಸಾಹದಿಂದ ವಿಜಯವನ್ನು ಸಾಧಿಸಬೇಕು. ಅವರು ರಜೋಗುಣ ಕರ್ತೃವಿನ ಒಂದೊಂದೇ ಲಕ್ಷಣಗಳನ್ನು ತೆಗೆದುಹಾಕಬೇಕು. ಅವರು ತಮೋಗುಣ ಕರ್ತೃವಿನ ಯಾವುದೇ ಲಕ್ಷಣಗಳನ್ನು ಮೈಗೂಡಿಸಿಕೊಳ್ಳಬಾರದು.

ಅಷ್ಟಕ್ಕೂ 'ತಮೋಗುಣ ಕರ್ತೃ'ವಿನ ಗುಣಲಕ್ಷಣಗಳೇನು? ಕಠೋರವಾಗಿ ವರ್ತಿಸುವುದು, ಇತರರನ್ನು ಅವ ಮಾನಿಸುವುದೂ,ಬುದ್ಧಿವಂತನಂತೆ ವರ್ತಿಸುವುದು. ಸರ್ವದಾ ಚಿಂತಾಕ್ರಾಂತನಾಗಿರುವುದು, ವೃಥಾ ಕಾಲಹರಣ ಮಾಡುವುದು, ಒಂದು ತಾಸಿನಲ್ಲಿ ಪೂರ್ಣಗೊಳ್ಳುವ ಕೆಲಸಕ್ಕೆ ಒಂದು ವರ್ಷ ಪೂರ್ತಿ ಸಮಯವನ್ನು ತೆಗೆದುಕೊಳ್ಳುವುದು, ಕೆಲಸಗಳಲ್ಲಿ ಶಾಂತ ಚಿತ್ತನಾಗಿರದಿರುವುದು,ಮಾಡಬೇಕಾದ ಕೆಲಸಗಳನ್ನು ಮುಂದೂಡುವುದು ಇಂತಹುಗಳೇ ತಮೋಗುಣ ಕರ್ತೃಗಳ ಗುಣಲಕ್ಷಣಗಳು ಅವರು ಹಿರಿಯರ ಮಾತಿಗೆ, ಶಾಸ್ತ್ರೋಕ್ತಿಗಳಿಗೆ ಕಿವಿಗೊಡುವವರಲ್ಲ. ಅವರು ತಮಗೆ ತೋಚುವುದನ್ನೇ ಮಾಡುವವರು ಹೊರತು ಅನುಭವಸ್ಥರ ಮಾತನ್ನು ಕೇಳುವವರಲ್ಲ. ಇಂತಹ ಯುವಕರು ನಮಗಾಗಲೀ, ಸಮಾಜಕ್ಕಾಗಲೀ ಯಾವುದೇ ಲಾಭದಾಯಕರಲ್ಲ ಬದಲಾಗಿ ಪ್ರಮಾ ದಕರವಾದವರುಗಳು. ತಮೋಗುಣ ಕರ್ತೃಗಳು ಕನಿಷ್ಠ ಪಕ್ಷ ರಜೋಗುಣ ಕರ್ತೃಗಳಾಗಲಾದರೂ ಪ್ರಯತ್ನಿಸಬೇಕು. ಇನ್ನು ರಜೋಗುಣ ಕರ್ತೃರು ಸಾತ್ವಿಕ ಕರ್ತೃಗಳಾಗಿ ಪರಿವರ್ತನೆ ಹೊಂದಲು ಶತಪ್ರಯತ್ನವನ್ನು ಮಾಡಬೇಕು.ಯುವಜನರು ಮಾತ್ರ ಭಗವದ್ಗೀತೆಯ ಮಾರ್ಗದರ್ಶನದಲ್ಲಿ 'ಸತ್ವ ಗುಣ ಕರ್ತೃಗಳಾಗಿದ್ದು ವಿಜಯ ಸೀಮೆಯಲ್ಲಿಯೇ ಪ್ರಯಾಣಿಸತಕ್ಕದ್ದು!



## ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ತಿರುಮಲೆಯಲ್ಲಿ

ಮಾಡಬೇಕಾದವು; ಮಾಡಬಾರದವುಗಳು ಹಾಗೂ ನಿಷಿದ್ಧವಾದವು.

## ಮಾಡಬೇಕಾದವು :

- ☑ ತಿರುಮಲೆಗೆ ಬರುವ ಮುನ್ನ ನಿಮ್ಮ ಇಷ್ಟ ಅಥವಾ ಕುಲದೈವವನ್ನು ಪೂಜಿಸಿರಿ.
- ☑ ಶ್ರೀವೆಂಕಟೇಶ್ವರ ಸ್ವಾಮಿಯನ್ನು ದರ್ಶಿಸುವ ಮೊದಲು ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನಮಾಡಿ,
- ☑ ಅಲ್ಲಿಯೇ ಇರುವ ಶ್ರೀ ವರಾಹಸ್ವಾಮಿಯನ್ನು ದರ್ಶಿಸಿರಿ.
- ☑ ದೇವರ ದರ್ಶನಕ್ಕೆ ಸರದಿಯ ಸಾಲು ಸೇರಿರಿ.
- ☑ ಆಲಯದ ಒಳಗಡೆ ಸ್ವಾಮಿಯಲ್ಲಿ ಮನಸ್ಸನ್ನು ಕೇಂದ್ರೀಕರಿಸಿ.
- ☑ ಆಲಯದ ಒಳಗಡೆ ಗಂಭೀರ ಮೌನವನ್ನು ಪಾಲಿಸಿರಿ ಮತ್ತು
- ☑ ಮನಸ್ಸಿನಲ್ಲಿ "ಓಂ ನಮೋ ವೇಂಕಟೇಶಾಯ" ಎಂದು ಜಪಿಸಿರಿ.
- ☑ ತಿರುಮಲೆಯಲ್ಲಿ ಪಾಪನಾಶಿನಿಯಲ್ಲೂ, ಆಕಾಶಗಂಗೆಯಲ್ಲೂ ಸ್ನಾನಮಾಡಿರಿ.
- ☑ ತಿರುಮಲೆಗೆ ಬಂದಾಗ ಪ್ರಾಚೀನಪರಂಪರೆಯನ್ನೂ ಆಚಾರವನ್ನೂ ಗೌರವಿಸಿ.
- ☑ ತಮ್ಮ ಕಾಣಿಕೆಗಳನ್ನು ಹುಂಡಿಯಲ್ಲಿ ಮಾತ್ರವೇ ಸಮರ್ಪಿಸಿ.
- ☑ ತಿರುಮಲೆಯನ್ನು ಶುಭ್ರವಾಗಿ ಶುದ್ಧವಾಗಿ ಇಡಲು ಸಹಕರಿಸಿ.
  ಬಯೋಡಿಗ್ರೇಡಬಲ್ ಪ್ಲಾಸ್ಟಿಕ್ ಕವರಗಳನ್ನು ಮಾತ್ರವೇ ಬಳಸಿರಿ.

## ಮಾಡಬಾರದವು :

- ☒ ತಮ್ಮೊಂದಿಗೆ ಹೆಚ್ಚಿನ ಹಣ, ಆಭರಣಗಳನ್ನು ತರಬೇಡಿ.
- ☒ ದೇವರನ್ನು ಸೇವಿಸುವುದರ ಹೊರತು ಬೇರೆ ಯಾವ ಕಾರಣಕ್ಕೂ ತಿರುಮಲೆಗೆ ಬಾರದಿರಿ.
- ☒ ದೇವರ ದರ್ಶನಕ್ಕಾಗಿ ನೂಕುನುಗ್ಗುಲು ಮಾಡದಿರಿ.
- ☒ ಸಂಪ್ರದಾಯದಂತೆ ಆಲಯ ಪ್ರವೇಶ ನಿಷೇಧವಿದ್ದಲ್ಲಿ ಆಲಯ ಪ್ರವೇಶ ಮಾಡದಿರಿ.
- ☒ ಹೂವು ಮುಡಿಯದಿರಿ. (ಎಲ್ಲ ಹೂವುಗಳೂ ದೇವರಿಗೇ.)
- ☒ ನೀರು, ವಿದ್ಯುತ್‌ಗಳು ಪೋಲು ಮಾಡದಿರಿ.
- ☒ ಅಪರಿಚಿತರಿಗೆ ನಿಮ್ಮ ಕೋಣೆಯ ಬೀಗದ ಕೈಗಳನ್ನು ನೀಡದಿರಿ, ಅವರನ್ನು ನಿಮ್ಮ ಕೊಠಡಿಗೆ ಸೇರಿಸದಿರಿ.
- ☒ ಆಲಯದ ಒಳಗೆ, ಹೊರಗೆ ಪಾದರಕ್ಷೆಗಳನ್ನು ಧರಿಸಿ ಓಡಾಡಬೇಡಿರಿ.

## ನಿಷೇಧಿತ ಪದಾರ್ಥಗಳು :( ನಿಷೇಧಿಸಿದವು)

- ✗ ತಿರುಮಲೆಯಲ್ಲಿ ಮಾಂಸಾಹಾರವನ್ನು ಬಳಸಬೇಡಿರಿ. ಮಾದಕ ವಸ್ತು, ಪೇಯಗಳನ್ನು ಬಳಸಬೇಡಿರಿ. ಧೂಮಪಾನ ಮಾಡಬೇಡಿರಿ.
- ✗ ವಸತಿಗಾಗಿ, ಪ್ರತ್ಯೇಕ ಪ್ರವೇಶಕ್ಕಾಗಿ ದಳ್ಳಾಳಿಗಳನ್ನು ಆಶ್ರಯಿಸಬೇಡಿರಿ.
- ✗ ಬೀದಿವ್ಯಾಪಾರಿಗಳಿಂದ ನಕಲೀ ಪ್ರಸಾದ ಕೊಳ್ಳಬೇಡಿ.
- ✗ ದೇವಾಲಯದಲ್ಲಿ ಉಗುಳುವುದೇ ಮುಂತಾದವುಗಳನ್ನು ಮಾಡದಿರಿ.
- ✗ ಅನ್ಯಮತ ಪ್ರಚಾರ ನಿಷೇಧಿಸಲಾಗಿದೆ.
- ✗ ವಿವಿಧ ರಾಜಕೀಯ ಸಭೆ, ಬ್ಯಾನರು, ಧರಣಿ, ರಾಸ್ತಾರೋಕೋ, ಹರತಾಳ - ಮೊದಲಾದವುಗಳನ್ನು ನಿಷೇಧಿಸಲಾಗಿದೆ.
- ✗ ಜಂತುವಧೆ ನಿಷೇಧ.
- ✗ ಯಾವುದೇ ರೂಪದಲ್ಲಿ ಜೂಜಾಡುವುದನ್ನು ನಿಷೇಧಿಸಲಾಗಿದೆ.
- ✗ ಸೆಲ್‌ಫೋನ್, ಕ್ಯಾಮರಾ, ಮತ್ತಿತರ ವಿದ್ಯುತ್ ಚಾಲಿತ ಉಪಕರಣಗಳನ್ನು ಆಲಯಕ್ಕೆ ಒಯ್ಯಬೇಡಿರಿ.ಆಯುಧಗಳನ್ನು ತರಬಾರದು.
- ✗ ಭಿಕ್ಷೆಯನ್ನು ಪ್ರೋತ್ಸಾಹಿಸದಿರಿ. ಹುಸಿ ಪ್ರಸಾದಗಳನ್ನು ಕೊಳ್ಳಬೇಡಿರಿ.



# ಔಷಧೀಯ ಗುಣಗಳ ಪವಿತ್ರ ವೃಕ್ಷ







## ಶಮಿ

- ಮೂಲ : ಡಾ॥ ಸಿ. ಮಧುಸೂದನಶರ್ಮ
9000761390
ಅನುವಾದ - ಶ್ರೀಮತಿ

ಭಾರತೀಯ ಸನಾತನ ವಾಗ್ಮಯದಲ್ಲಿ, ಸಂಸ್ಕೃತಿ ಸಂಪ್ರದಾಯದಲ್ಲಿ ವಿಶಿಷ್ಠ ಸ್ಥಾನವನ್ನು ಹೊಂದಿರುವ ಪವಿತ್ರ ದೇವತಾ ವೃಕ್ಷ ಶಮಿ ಇದನ್ನು ಬನ್ನಿಗಿಡ ಎಂದು ಸಹಾ ಪ್ರಾಂತೀಯ ಭಾಷೆಯಾದ ಕನ್ನಡದಲ್ಲಿ ಕರೆಯುತ್ತಾರೆ.

"ಶಮಯತಿ ರೋಗಂ ಇತಿ ಶಮಿ" - ರೋಗಗಳನ್ನು ಶಮನಗೊಳಿಸುವುದರಿಂದ ಇದನ್ನು ಶಮಿ ಎನ್ನುತ್ತಾರೆ.

ಶುಭವನ್ನುಂಟು ಮಾಡುವುದರಿಂದ 'ಶಿವ' ಎಂದೂ, ಮಂಗಳ ಪ್ರದವಾದ್ದರಿಂದ ಮಾಂಗಲ್ಯ ಎಂದೂ, ಅಗ್ನಿ ತತ್ವ ಹೊಂದಿರುವುದರಿಂದ 'ಅಗ್ನಿಗರ್ಭ' ಎಂಬ ಸಂಸ್ಕೃತ ನಾಮಧೇಯಗಳು ಸಹಾ ಇದಕ್ಕಿವೆ.

ಆಂಗ್ಲ ಭಾಷೆಯಲ್ಲಿ ಸ್ಪಾಂಜೆಟ್ರಿಗಾ ಎಂದು ಕರೆಯಲ್ಪಡುವ ಈ ವೃಕ್ಷ'ಮೈಮಾನೇಸಿ' ಎಂಬ ವೃಕ್ಷ ಕುಟುಂಬಕ್ಕೆ ಸೇರಿದ್ದು, 'ಪ್ರಸೋಪಿಸ್' ಎಂಬ ಶಾಸ್ತ್ರೀಯ ನಾಮಧೇಯವನ್ನು ಹೊಂದಿರುತ್ತದೆ.

ದೇವ - ದಾನವರ ಕ್ಷೀರಸಾಗರಮಥನ ಸಮಯದಲ್ಲಿ ಪಾಲ್ಗಡಲಿನಿಂದ ಮಹಾಲಕ್ಷ್ಮಿ, ಕಾಮಧೇನು, ಕಲ್ಪವೃಕ್ಷಗಳ ಸಮೇತ 'ಶಮಿ' ಯೆಂಬ ದೇವತಾ ವೃಕ್ಷವೂ ಸಹಾ ಉದ್ಭವಿಸಿದೆ.

ಸಮಸ್ತ ಸೃಷ್ಟಿಯ ಒಂದು ಭಾಗವಾಗಿ ಪ್ರಜಾಪತಿ ಅಗ್ನಿಯನ್ನು ಕೂಡ ಸೃಷ್ಟಿಸಿದ್ದಾನೆ. ಅಗ್ನಿ ತಕ್ಷಣವೇ ತನ್ನ ಪ್ರಭಾವವನ್ನು ತೋರಿಸಿ ತನ್ನನ್ನು ಸೃಷ್ಟಿಸಿದ ಪ್ರಜಾಪತಿಯೆನ್ನೇ ದಹಿಸಲಾರಂಭಿಸುವುದರಿಂದ ಪ್ರಜಾಪತಿ ಶಮಿವೃಕ್ಷದ ಹಸಿರು ಕೊಂಬೆಗಳಿಂದ ಆ ಅಗ್ನಿಯನ್ನು ಶಮನಗೊಳಿಸಿ ಆರಿಸಿದ್ದಾನೆ. ಹಾಗೆ ಅಗ್ನಿ ಶಮನದಲ್ಲಿ ಬಳಕೆಯಾದುದರಿಂದ ಇದು ಶಮಿ.

ಶಿವನಿಗೆ ಅತ್ಯಂತ ಪ್ರೀತಿಪಾತ್ರನಾದ ಬಿಲ್ವ ವೃಕ್ಷಗಳಲ್ಲಿ ಈ ಶಮಿಯೂ ಒಂದು. ಆದ್ದರಿಂದಲೇ ಶಿವನಿಗಿಷ್ಟವಾದ ಕಾರ್ತೀಕಮಾಸದಲ್ಲಿ ದೈವೀಶಕ್ತಿ ನಿಭಿಢೀಕೃತಗೊಂಡ ಈ ವೃಕ್ಷವನ್ನು ಪೂಜಿಸುವ ಪರಿಪಾಠವು ನಮ್ಮ ಸಂಸ್ಕೃತಿಯಲ್ಲುಂಟು.

ಶ್ರೀ ರಾಮಚಂದ್ರರು ಶಮಿ ವೃಕ್ಷವನ್ನು ಪೂಜಿಸಿದ ನಂತರವೇ ಯುದ್ಧ ಮಾಡಲು ಉದ್ಯುಕ್ತರಾದರೆಂದು ಚರಿತ್ರೆಗಾರರು ಹೇಳುತ್ತಾರೆ. ಪಾಂಡವರು ಅಜ್ಞಾತವಾಸಕ್ಕೆ ಹೋಗುವ ಮುನ್ನ ಗಾಂಡೀವ, ಅಸ್ತ್ರಗಳನ್ನು ಶಮಿ ವೃಕ್ಷದ ಮೇಲೆ ಬಚ್ಚಿಟ್ಟ ವಿಷಯವಂತೂ ಸರ್ವರಿಗೂ ವಿದಿತವಾದ ಚಾರಿತ್ರಿಕ ಸತ್ಯ.

ಅರ್ಜುನನ್ನು ಹೊರತು ಪಡಿಸಿ ಉಳಿದ ಇತರರಿಗೆಲ್ಲರಿಗೂ ಈ ಅಸ್ತ್ರಗಳು ವಿಷಸರ್ಪಗಳಾಗಿ ಕಾಣಿಸುವಂತೆ ಮಾಡಿ ಅವುಗಳನ್ನು ಈ ದೇವತಾವೃಕ್ಷವಾದ ಶಮಿ ಕಾಪಾಡಿದೆಯೆಂದು

ಹೇಳುತ್ತಾರೆ ಈ ವಿಧವಾಗಿ ಪಾಂಡವರ ವಿಜಯಕ್ಕೆ ಕಾರಣವಾದ ಕಾರಣಕ್ಕೆ 'ವಿಜಯದ ಶಮಿ' ಎಂದು ಕೂಡಾ ವಿಜಯದಶಮಿ ಹಬ್ಬದ ಅಂತರಾರ್ಥವಾಗಿ ಹೇಳುತ್ತಾರೆ.

**ವಿಜಯ ದಶಮಿ ಹಬ್ಬದ ಸಂದರ್ಭದಲ್ಲಿ**

"ಶಮಿ ಶಮಯತೇ ಪಾಪಂ ಶಮಿ ಶತ್ರು ವಿನಾಶಿನಿ!

ಅರ್ಜುನಸ್ಯ ಧನುರ್ಧಾರಿ ಶ್ರೀ ರಾಮ ಪ್ರಿಯದರ್ಶಿನಿ!!

ಎಂಬ ಶ್ಲೋಕವನ್ನು ಪಠಿಸುತ್ತಾ ಆ ವೃಕ್ಷದ ಸುತ್ತಲೂ ಪ್ರದಕ್ಷಿಣೆ ಮಾಡುವುದು,ಈ ಮರದ ಎಲೆಗಳನ್ನು ಬಂಗಾರ ವೆಂದು ಭಾವಿಸಿ ಹಿರಿಯರಿಗಿತ್ತು ಅವರ ಆಶೀರ್ವಾದವನ್ನು ಪಡೆಯುವುದು, ಆತ್ಮೀಯತೆ - ಬಾಂಧವ್ಯಗಳನ್ನು ಹಂಚಿ ಕೊಳ್ಳುವುದು, ಮೇಲಿನ ಶ್ಲೋಕ ತಗಡಿನಲ್ಲಿ ಬರೆದು ಅವನ್ನು ಬನ್ನಿಮರಕ್ಕೆ ಕಟ್ಟಿ ಪೂಜಿಸುವುದು ಮುಂತಾದ ವಿಧಾನಗಳನ್ನು ಪಾಲಿಸುವುದುಂಟು.

ಇದಕ್ಕಿರುವ ವಿಶೇಷತೆ, ಪವಿತ್ರತೆಯ ಕಾರಣದಿಂದಾಗೇ ಕೆಡುಕಿನ ಮೇಲೆ ಒಳ್ಳೆಯತನ ವಿಜಯ ಸಾಧಿಸಿದ ಕುರುಹಾಗಿ ವಿಜಯದಶಮಿ ದಿನದಂದು ಶಮಿ ಪೂಜೆಯನ್ನು ಮಾಡುವುದು ಅನಾಯಸವಾಗಿ ನಡೆದು ಬಂದಿದೆ. ಅಷ್ಟೇ ಅಲ್ಲದೇ ಗ್ರಾಮದ ಜನರೆಲ್ಲಾ ಊರ ದಿಡ್ಡಿ ಬಾಗಿಲು ದಾಟಿ ಈಶಾನ್ಯ ದಿಕ್ಕಿಗಿರುವ ಶಮಿ ವೃಕ್ಷವನ್ನು ಪೂಜಿಸುವುದೂ ಒಂದೂ ಪ್ರತೀತಿಯಾಗಿ ಬೆಳೆದು ಬಂದಿದೆ.

ಇಂತಹ ಪವಿತ್ರ ವೃಕ್ಷವಾದ ಬನ್ನಿಮರದಲ್ಲಿ ಬಗೆ ಬಗೆಯ ಅನಾರೋಗ್ಯಗಳನ್ನು ಪರಿಷ್ಕರಿಸುವ ಔಷಧ ಸಮ್ಮಿಲಿತ ಅಪಾರ ಶಕ್ತಿಯಿದೆ.

**ಚೇಳಿನ ಕಡಿತಕ್ಕೆ:**

ಬನ್ನಿ ಮರದ ಚೆಕ್ಕೆಯನ್ನು ತಕ್ಕಷ್ಟು ನೀರಿನಲ್ಲಿ ತೇದು ಬರುವ ಗಂಧವನ್ನು ಲೇಪನ ಮಾಡಿದರೆ ಶೀಘ್ರವಾಗಿ ವಿಷವಿಳಿಯುವುದಲ್ಲದೇ ಕಡಿತದಿಂದುಂಟಾಗುವ ಉರಿ, ನವೆ, ನೋವು, ಬಾಧೆ, ಸೆಳೆತಯಂಥವುಗಳು ತಗ್ಗಿ ಹೋಗುತ್ತವೆ.

**ಅನಗತ್ಯ ರೋಮ ಸಮಸ್ಯೆ ಬಗೆಹರಿಯಲು:**

ಒಣಗಿಸಿದ ಬನ್ನಿ ಎಲೆಗಳು, ರೆಂಬೆಗಳನ್ನು ಉರಿಸಿ ಮಾಡಿದ ಬೂದಿಯನ್ನು ಬಿಸಿಯಾರಿದ ನಂತರ ಜರಡಿ ಹಿಡಿದು ಶೇಖರಿಸಿಟ್ಟುಕೊಂಡು ಕಾದಾರಿದ ನೀರಿನಲ್ಲಿ ಚೆನ್ನಾಗಿ ಕಲಿಸಿ ಒಂದು ದಿನವೆಲ್ಲಾ ಹಾಗೆಯೇ ಬಿಟ್ಟು ಮೇಲೆ ಒಂದು ಬಗೆ ಬಿಳಿ ಪದಾರ್ಥವು ತೇಲುತ್ತದೆ. ನೀರನೆಲ್ಲಾ ಬಗ್ಗಿಸಿ ಈ ಪದಾರ್ಥವನ್ನು ಶೇಖರಿಸಿ ಸಂಗ್ರಹಿಸಿಟ್ಟುಕೊಂಡು ನಿತ್ಯವೂ ಒಂದೆರಡು ಬಾರಿ ತಕ್ಕಷ್ಟು ಔಷಧಿಯಲ್ಲಿ ಸರಿಯಾಗುವಷ್ಟು ನೀರು ಬೆರೆಸಿ ಪೇಸ್ಟಿನಂತೆ ಮಾಡಿ ಲೇಪನ ಮಾಡುತ್ತಿದ್ದರೆ ಶೀಘ್ರದಲ್ಲಿ ಈ ಸಮಸ್ಯೆ ಬಗೆ ಹರಿಯುತ್ತದೆ. ಅನಗತ್ಯ ರೋಮ ನಿವಾರಣೆಯ ಔಷಧೀಯ ಶಕ್ತಿ ಹೊಂದಿರುವುದರಿಂದ ಈ ಬನ್ನಿ ಗಿಡಕ್ಕೆ 'ಕೇಶಹಂತ್ರಿ' ಎಂಬ ಸಂಸ್ಕೃತಿ ಹೆಸರೂ ಉಂಟು.

**ಕೊಲೆಸ್ಟ್ರಾಲ್ ಸಮಸ್ಯೆಗೆ:**

ದಿನವೂ ಒಂದು ಬಾರಿ 200 ಮಿ.ಲೀ. ನೀರಿನಲ್ಲಿ 5 ಗ್ರಾಂ ಹಸಿ ಚೆಕ್ಕೆ ಅಥವಾ ಒಣಗಿಸಿದ ಚೆಕ್ಕೆಯ ಪುಡಿ ಅರ್ಧ ಟೀ ಸ್ಪೂನ್ ಜೀರಿಗೆ, ಹತ್ತು ಕಾಳು ಮೆಣಸು, (ಒಡೆದದ್ದು) 10 ಮಿ.ಲೀ. ನೀರು ಉಳಿಯುವಂತೆ ಮರಳಿಸಿ ಕೆಳಗಿಳಿಸಿ ಬಿಸಿಯಾರಿದ ನಂತರ ಶೋಧಿಸಿ ಸೇವಿಸುತ್ತಿದ್ದರೆ ಹಾನಿಕಾರಕ ಕೊಲೆಸ್ಟ್ರಾಲ್ ತಗ್ಗಿ ಶರೀರಕ್ಕೆ ಉಪಯುಕ್ತವಾದ ಕೊಲೆಸ್ಟ್ರಾಲ್ ಮಟ್ಟ ಬೆಳೆಯಲು ಆರಂಭವಾಗುತ್ತದೆ. ಈ ಔಷಧಿಯನ್ನು ಈ ರೀತಿಯಾಗಿ ಸೇವಿಸುವುದರಿಂದ ಮಧುಮೇಹ ನಿಯಂತ್ರಣದಲ್ಲಿರುವುದೊಂದೇ ಅಲ್ಲದೇ ಜ್ವರ, ಮೈ - ಕೈ ನೋವು ಕೂಡಾ ಕಡಿಮೆಯಾಗುತ್ತದೆ.

**ಸ್ತ್ರೀಯರ ಗರ್ಭಾಶಯ ಸಮಸ್ಯೆಗಳಿಗೆ:**

ದಿನವೂ ಒಂದು ಬಾರಿ 200 ಮಿ.ಲೀ. ನೀರಿನಲ್ಲಿ 5-10 ಬನ್ನಿ ಎಲೆಗಳು ಅರ್ಧ ಟೀ ಸ್ಪೂನ್ ಸ್ಫಟಿಕ ಕಲ್ಲುಸಕ್ಕರೆ ಹಾಕಿ 100 ಮೀ.ಲೀ. ನೀರು ಮಿಗಲುವಂತೆ ಮರಳಿಸಿ ಕೆಳಗಿಳಿಸಿ ಬಿಸಿಯಾರಿದ ನಂತರ ಸೋಸಿ ಸೇವಿಸುತ್ತಿದ್ದರೆ ಅಧಿಕ ರಕ್ತ ಸ್ರಾವದ ಸಮಸ್ಯೆ ಬಗೆಹರಿಯುತ್ತದೆ. ಗರ್ಭಸ್ರಾವವಾಗದಂತೆ ಕಾಪಾಡುತ್ತದೆ. ಗರ್ಭಾಶಯದ ಮುಖದ್ವಾರದಲ್ಲಿ ಉಂಟಾಗುವ ಹುಣ್ಣು ಸಹಾ ತಗ್ಗುತ್ತದೆ.

**ರಕ್ತಸ್ರಾವ ಕಡಿಮೆಯಾಗಲು:**

ಬನ್ನಿ ಎಲೆಗಳಿಗೆ ಸ್ವಲ್ಪವೇ ನೀರು ಹಾಕಿ ಚೆನ್ನಾಗಿ ರುಬ್ಬಿ ಪೇಸ್ಟಿನಂತೆ ತಯಾರಿಸಿ ಲೇಪನ ಮಾಡುತ್ತಿದ್ದರೆ ತೆರೆದ ಗಾಯ, ಬಿರುಕುಗಳಿಂದುಂಟಾಗುವ ರಕ್ತಸ್ರಾವವನ್ನು ತಡೆಗಟ್ಟಬಹುದು.

**ಹುಣ್ಣು, ಊತ, ಗಾಯಗಳು ಶೀಘ್ರ ಮಾಯಲು:**

200 ಮಿ.ಲೀ. ಕೊಬ್ಬರಿಯೆಣ್ಣೆಯಲ್ಲಿ 50 ಗ್ರಾಂ ಬನ್ನಿ ಎಲೆಗಳನ್ನು ಹಾಕಿ ನೊರೆ ಬರುವವರೆಗೆ ಸಣ್ಣ ಉರಿಯಲ್ಲಿ ಮರಳಿಸಿ ಕೆಳಗಿಳಿಸಿ ಬಿಸಿಯಾರಿದ ನಂತರ ಶೋಧಿಸಿ ದಿನವೂ ಎರಡು ಬಾರಿ ಆ ಎಣ್ಣೆಯನ್ನು ಲೇಪನ ಮಾಡುತ್ತಿದ್ದರೆ ಶೀಘ್ರದಲ್ಲಿ ಈ ಸಮಸ್ಯೆ ತಗ್ಗುತ್ತದೆ.



ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂದು ಪತ್ರ

ಹೆಸರು ಮತ್ತು ವಿಳಾಸ :

(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥ ವಾಗುವಂತೆ ಇಂಗ್ಲೀಷಿ ನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ / ಆಜೀವಚಂದಾ : ☐ ರೂ.60/- ☐ ರೂ.500/-

(ಸಂಸ್ಕೃತ ಸಪ್ತಗಿರಿಗಾಗಿ ಆಜೀವ ಚಂದಾ ಸ್ವೀಕರಿಸಲಾಗುವುದಿಲ್ಲ.)

ಚಂದಾ ಪುನರುದ್ಧರಣೆ:

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ :

(ಚೆಕ್ಕು, ಪಿ.ಓ.ಗಳನ್ನು ಸ್ವೀಕರಿಸುವುದಿಲ್ಲ )

ಸ್ಥಳ :

ದಿನಾಂಕ :

ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.60/-, ಆಜೀವ ಚಂದಾ ರೂ.500/- ಗಳು ಡಿ.ಡಿ/ಎಂ.ಓ. ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯಬೇಕು.

ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು / ತಮ್ಮ ಚಂದಾವನ್ನು ಪುನರುದ್ಧರಿಸಿ ಕೊಳ್ಳುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.

ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ - "ಪ್ರಧಾನಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ.ಟಿ.ರೋಡ್ಡು, ತಿರುಪತಿ - 517 507".

## ಸಪ್ತಗಿರಿ ಚಂದಾದಾರರಲ್ಲಿ ವಿನಂತಿ

ಸಪ್ತಗಿರಿ ಚಂದಾದಾರರು ತಮ್ಮ ಚಂದಾ ಹಣವನ್ನು ಕಳುಹಿಸು ವಾಗ (ಇ) ಎಂ.ಓ. / ಡಿ.ಡಿ.ಗಳನ್ನು ಕಳುಹಿಸುತ್ತಿರುವುದು ಸರಿಯಷ್ಟೆ. ಅಂಚೆಯಲ್ಲಿ ಪೋಸ್ಟಲ್ ಇ.ಎಂ.ಓ. ಕಳುಹಿಸುವಾಗ ಚಂದಾದಾರರು ಪೂರ್ತಿವಿಳಾಸ ವಿವರ ನೀಡಬೇಕು. ಈಗ "ಪೋಸ್ಟಲ್ ಇ.ಎಂ.ಓ" ವಿಧಾನದಲ್ಲಿ ಹಣ ಕಳುಹಿಸುವವರು ಬರೆಯುವ ಅವಕಾಶವೇ ಇರುವುದಿಲ್ಲ ವಾಗಿ, ನಿಮ್ಮ ವಿಳಾಸವನ್ನು ಅವರು ಕಂಪ್ಯೂಟರ್‌ನಲ್ಲಿ ಸಂಪೂರ್ಣವಾಗಿ ದಾಖಲುಮಾಡುವಂತೆ ನೋಡಿಕೊಳ್ಳ ಬೇಕು. ನಿಮ್ಮ ಪೂರ್ಣವಿಳಾಸ ಕಂಪ್ಯೂಟರಿನಲ್ಲಿ ದಾಖಲೆ ಆಗದಿದ್ದರೆ ಹಣ ಸೇರಿದರೂ ವಿಳಾಸವಿಲ್ಲದೆ ಸಪ್ತಗಿರಿ ನಿಮ್ಮನ್ನು ಸೇರುವುದಿಲ್ಲ.

ಅ.ತಾವು ಹಳೆಯ ಚಂದಾ ದಾರರಾಗಿದ್ದರೆ ಚಂದಾ ಪುನರುದ್ಧಾರ - ಪುನರ್ನವೀಕರಿಸುವಾಗ ಇ.ಎಂ.ಓ / ಎಂ.ಓ ಮಾಡುವಾಗ ಚಂದಾ ಕ್ರಮ ಸಂಖ್ಯೆಯನ್ನು ತಪ್ಪದೆ ನಮೂದಿಸು ವುದು.

ಆ. ಇದರಲ್ಲಿ ನಿಮ್ಮ ಊರಿನ ಪೂರ್ತಿವಿಳಾಸದೊಡನೆ ಅಂಚೆ ಪಿನ್ ಕೋಡ್ ಇರುವಂತೆ ನೋಡಿಕೊಳ್ಳ ಬೇಕು.

ಇ.ನಿಮಗೆ ಬೇಕಾದ ಭಾಷೆ ಯನ್ನು ಖಚಿತವಾಗಿ ನಮೂದಿಸ ಬೇಕು.

ಇವೆಲ್ಲ ವಿವರಗಳನ್ನೂ ಸರಿ ಯಾಗಿರುವಂತೆ ಮಾಡಿದ್ದೇ ಆದಲ್ಲಿ ಸಪ್ತಗಿರಿ ಖಚಿತವಾಗಿ ಶ್ರೀವೆಂಕಟೇಶ್ವರ ಸ್ವಾಮಿಯ ಅನುಗ್ರಹವನ್ನು ಹೊತ್ತು ನಿಮ್ಮ ಮನೆ ಸೇರುವುದು.


ಸಪ್ತಗಿರಿ ಚಂದಾ ವಿವರಣೆಗಾಗಿ

0877- 2264359

0877-2264543



Edited and Published on behalf of T.T.Devasthanams by **Prof. K.Rajagopalan**, Phd., Chief Editor, T.T.D. and Printed at T.T.D. Press by **Sri P. Ramaraju,** M.A., Special Officer (Press & Publications), T.T.D. Press, Tirupati - 517 507.



## ತಿರುಮಲೆ
## ಶ್ರೀ ವೆಂಕಟೇಶ್ವರ ಸ್ವಾಮಿಯವರ ನವರಾತ್ರಿ ಬ್ರಹ್ಮೋತ್ಸವಗಳು
## 2020 ಅಕ್ಟೋಬರ್ 16 ರಿಂದ 24 ರ ವರೆಗೆ

**16-10-2020**
ಶುಕ್ರವಾರ
ಹಗಲು: ವಜ್ರಕವಚಾದ್ಯಾಭರಣಗಳೊಂದಿಗೆ ಬಂಗಾರು ತಿರುಚ್ಚಿ ಉತ್ಸವ
ರಾತ್ರಿ: ದೊಡ್ಡಶೇಷವಾಹನ

**17-10-2020**
ಶನಿವಾರ
ಹಗಲು: ಚಿಕ್ಕಶೇಷವಾಹನ
ರಾತ್ರಿ: ಹಂಸವಾಹನ

**18-10-2020**
ಭಾನುವಾರ
ಹಗಲು: ಸಿಂಹವಾಹನ
ರಾತ್ರಿ: ಮುತ್ತಿನಚಪ್ಪರವಾಹನ

**19-10-2020**
ಸೋಮವಾರ
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**20-10-2020**
ಮಂಗಳವಾರ
ಹಗಲು: ಪಲ್ಲಕ್ಕಿಯಲ್ಲಿ ಮೋಹಿನೀಅವತಾರೋತ್ಸವ
ರಾತ್ರಿ: ಗರುಡವಾಹನ

**21-10-2020**
ಬುಧವಾರ
ಹಗಲು: ಹನುಮದ್ವಾಹನ
ರಾತ್ರಿ: ಗಜವಾಹನ

**22-10-2020**
ಗುರುವಾರ
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**23-10-2020**
ಶುಕ್ರವಾರ
ಹಗಲು: ಸ್ವರ್ಣ ರಥೋತ್ಸವ
ರಾತ್ರಿ: ಅಶ್ವವಾಹನ

**24-10-2020**
ಶನಿವಾರ
ಹಗಲು: ಚಕ್ರಸ್ನಾನ
ರಾತ್ರಿ: ತಿರುಚ್ಚಿ ಉತ್ಸವ

SAPTHAGIRI (KANNADA) ILLUSTRATED MONTHLY Published by Tirumala Tirupati Devasthanams
printing on 30-08-2020. Regd. with the Registrar of Newspapers under "RNI" No.10742, Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020




ಶ್ರೀ ವಿಖನಸಾಚಾರ್ಯ ಸ್ವಾಮಿಯವರ ಜಯಂತಿ
03-08-2020